
ಅರುಣೋದಯದ ನಾಡಿನಲ್ಲಿ



ಪದ್ಮ ಶ್ರೀಧರ್

ಅರುಣೋದಯದ ನಾಡಿನಲ್ಲಿ

ಪದ್ಮ ಶ್ರೀಧರ್

ಕೀರ್ತಿ ಪ್ರಕಾಶನ,
೨೩೦, ೧೬೭ ನೇ ಕಟ್ಟಡ, ಕೆಹೆಚ್‌ಬಿ,
ಕೆಂಗೇರಿ ಉಪನಗರ, ಬೆಂಗಳೂರು 5600

ARUNODAYADA NAADINALLI - A travellogue by Smt. Padma Shreedhar, 'CHIGURU', No. 1248, 7th 'B'Cross, Yalahanka Upanagara, Bangalore 560064, and published by M/S KEERTHI PRAKASHANA, 230, KHB 167 Building, Kengeri Upanagar, Bangalore 560046.

Pp. Crown 84+4=88
Printed on 70 GSM maplitho paper.

Year of first publication: 2008

Price: Rs. 60/-

DTP: Smt. Latha, Kanive Computers, Mysore.

Impression at: Harshini Offset Printers, Bangalore.

ಅರುಣೋದಯದ ನಾಡಿನಲ್ಲಿ

ಪ್ರಸ್ತಾವನೆ

ನಾನು ಶಿವಮೊಗ್ಗಾದಲ್ಲಿ ಬೆಳೆದವಳು. ನನ್ನ ವಿದ್ಯಾಭ್ಯಾಸವೆಲ್ಲಾ ನಡೆದುದು ಅಲ್ಲೇ. ಮಲೆನಾಡಿನ ಕೇಂದ್ರವಾದ ನಮ್ಮೂರಿನಲ್ಲಿ ಕಾಡು ಮೇಡುಗಳಿಗೆ ಬರವಿಲ್ಲ. ಪ್ರಕೃತಿ ಸೊಗಸಾಗಿ ವಿರಾಜಿಸುತ್ತಿದ್ದಳು ಎಂದರೆ ಅತಿಶಯವಲ್ಲ. ಗೇರು ಸೊಪ್ಪೆಯ ಜೋಗ್ ಜಲಪಾತ, ಆಗುಂಬೆಯ ಸುರ್‍ಯಾಸ್ತಮಾನ, ಗಾಜನೂರಿನ ಅಣೆಕಟ್ಟು, ಸಮೀಪದ ಕೂಡಲಿಯಲ್ಲಿನ ತುಂಗಭದ್ರ ಸಂಗಮ ಇವೆಲ್ಲಾ ನಮಗೆ ಅಪರೂಪವೇನಲ್ಲ. ಆದರೂ ಪ್ರತಿಸಲ ನೋಡುವಾಗಲೂ ಅದೇ ಹೊಸತನ, ಅದೇ ಸೊಬಗು..ಏನೋ ಮೈ ಮರೆಯುವ ಆನಂದ, ಬೇಸರವೆನಿಸುತ್ತಿರಲಿಲ್ಲ.

ಆದರೂ ಬೇಸಗೆಯ ಪ್ರಖರ ಸೆಕೆ, ಮಳೆಗಾಲದಲ್ಲಿ ಬಿಡದೇ ಸುರಿಯುವ, ಸೋನೆ ಮಳೆ, ಪ್ರತಿ ವರ್ಷವೂ, ಬೆಗ ಮುಗಿಯ ಬಾರದೇ ಎಂದು ಪ್ರಾರ್ಥಿಸುವಷ್ಟು ಬೇಸರವನ್ನುಂಟು ಮಾಡುತ್ತಿದ್ದವು. ಆದರೆ? ಬಿಸಿಲು ಶೆಕೆ. ಇಲ್ಲದೇ, ಮೋಡ ಮಳೆ ಇಲ್ಲ. ಮೋಡ ಎಮಳೆಗಳಿಲ್ಲದೇ ಬೆಳೆಯಿಲ್ಲ ಎಂದೂ ಗೊತ್ತಿತ್ತು. ಹಾಗಾಗಿ, ಈ ವಿಪರೀತಗಳನ್ನು ಸಹಿಸುವ ಶಕ್ತಿಯೂ ಇತ್ತು. ಆದರೂ ಈ ಮಲೆನಾಡನ್ನು ಬಿಟ್ಟು ಬಯಲು ಸೀಮೆಗೆ ಹೋಗಬೇಕು ಎಂದೆನಿಸುತ್ತಿತ್ತು ನನಗೆ.

ಸಾಹಿತ್ಯಾಭ್ಯಾಸದ ವಿದ್ಯಾರ್ಥಿನಿಯಾಗಿದ್ದ ನನಗೆ, ಅಲ್ಪಸ್ವಲ್ಪ ಭೂಗೋಳ ಶಾಸ್ತ್ರ, ಇತಿಹಾಸ ವಿಷಯಗಳ ಬಗ್ಗೆಯೂ ಓದುವುದಿತ್ತು. ಸಮಗ್ರ ಭಾರತದ ಉದ್ದಗಲ ವಿಸ್ತೃರ್ಣದೊಂದಿಗೆ, ಸಮೃದ್ಧವಾಗಿದ್ದ ಪ್ರಕೃತಿ ಸೌಂದರ್ಯದ ವಿಷಯವೂ ತಿಳಿಯುವೆ ಆಗ, ಎನೋ ಒಂದು ಬಗೆಯ ಖುಷಿಯಾಗುತ್ತಿತ್ತು. ಆದರೆ ಎಲ್ಲಾ ಕಡೆ ಸುತ್ತಾಡಿ ಎಲ್ಲವನ್ನು ನೋಡಿ ಬರಲು ಸಾಧ್ಯವಿರಲಿಲ್ಲ. ಅದಕ್ಕೆ ಕಾರಣಗಳು ಅನೇಕ. ಹಾಗೇ ಇತಿಹಾಸದ ಗಣಿಯ

ಆಳಕ್ಕೆ ಇಳಿದು ಹೋದರೆ, ಸಿಗುವ ಖನಿಜಗಳು ಬಹಳ. ಅಳಿದ ರಾಜ ಮಹಾರಾಜರ ಸುಲ್ತಾನರ, ಸಾಮ್ರಾಜ್ಯಗಳ ವಿಷಯಗಳನ್ನು ಓದುವಾಗ, ಭಾರತ ದೇಶದಲ್ಲಿ ಇತಿಹಾಸ ವಿಶ್ವ ವಿಖ್ಯತ. ಆ ದೆಸೆಯಲ್ಲಿ ತಿರುಗಿ ನೋಡು ವಾಗ, ಉತ್ತರ ಭಾರತದಲ್ಲಿ ಅದರಲ್ಲೂ ಡೆಲ್ಲಿಯಲ್ಲಿ ಸಾಮ್ರಾಜ್ಯ ಶಾಹಿಗಳ ಆಳ್ವಿಕೆಯ ಕುರುಹಾಗಿ, ಕುತುಬ್ ಮೀನಾರ್, ಕೆಂಪು ಕೋಟೆ, ತಾಜಮಹಲ್ ಜಮ್ಮಾ ಮಸೀದಿ ಇತ್ಯಾದಿಗಳು ಏನೇನಲ್ಲಾ ತಿಳಿಸುತ್ತವೆ.

ನನಗೆ ವಿವಾಹವಾದಾಗ, ನನ್ನ ಪತಿ ಡೆಲ್ಲಿಯಲ್ಲಿ ವಾಸವಾಗಿದ್ದರು. ಎರಡು ಮೂರು ವರ್ಷಗಳಿಗೊಮ್ಮೆ ಬೇರೆ ಬೇರೆ ನಗರಗಳಿಗೆ ವರ್ಗವಾಗು ತ್ತಿದ್ದು. ಅವರು ಆಗಲೇ, ಪೂನಾ, ಬೊಂಬಾಯಿ, ಆಗ್ರಾಗಳಲ್ಲಿನ ಕಛೇರಿ ಯಲ್ಲಿ ಸೇವೆ ಸಲ್ಲಿಸಿ, ಡೆಲ್ಲಿಗೆ ವರ್ಗವಾಗಿ ಬಂದು ಎರಡು ವರ್ಷಗಳು ಕಳೆದಿತ್ತು.

ಶಿವಮೊಗ್ಗಾದಂತಹ ಊರಿನಿಂದ ಡೆಲ್ಲಿಗೆ ಹೋಗುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಸುಯೋಗ ಎಂದು ಕೊಂಡೆ ಬೆಂಗಳೂರಿನಿಂದ ಹೊರಟು, ತಮಿಳ್ನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಉತ್ತರಪ್ರದೇಶ ರಾಜ್ಯ ಮುಖಾಂತರವಾಗಿ ಡೆಲ್ಲಿಯನ್ನು ಸೇರಿದೆವು. ಮದ್ರಾಸು ವಿಜಯವಾಡ, ಇಬಸಿ ನಾಗಪುರ ಮುಂತಾದ ಸ್ಥಳಗಳು, ಸಿಗುತ್ತವೆ.

ಆ ನಂತರ ನಾವು ಡೆಲ್ಲಿಯಲ್ಲಿ ಕೆಲವೇ ತಿಂಗಳು ಇದ್ದೆವು. ಅಲ್ಲಿಂದ ನಮ್ಮವರಿಗೆ ಗೌಹಾಟಿಗೆ ವರ್ಗವಾಯಿತು. ಗೌಹಾಟಿಗೆ ಹೊರಡುವ ಮುನ್ನ ಡೆಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ಆಗ್ರಾದ ವಿಶ್ವ ಪ್ರಸಿದ್ದ ತಾಜಮಹಲನ್ನು ನೋಡಿ ಬಂದೆವು.

ನಂತರ ಜೂನ್ ತಿಂಗಳ ಮದ್ಯಭಾಗದಲ್ಲಿ ಒಂದು ದಿನ ನಮ್ಮ ಗಂಟು ಮೂಟೆ ಸಮೇತ, ನಾವಿಬ್ಬರೂ ಗೌಹಾಟಿಗೆ ಹೊರಟೆವು. ಆಗ ಡೆಲ್ಲಿ ಯಿಂದ ಸೀದಾ ಗೌಹಾಟಿಗೆ ಹೋಗುವ ಮಾರ್ಗ ಪೂರ್ತಿ ಬ್ರಾಡ್ ಗೇಜ್ ಆಗಿರಲಿಲ್ಲ. ಬರೌನಿ ಎಂಬ ಜಂಕ್ಷನ್ ಸ್ಟೇಷನ್‌ನಲ್ಲಿ ಅದೇ ಪ್ಲಾಟ್‌ಫಾರಂ ನಲ್ಲಿ ಮೀಟರ್ ಗೇಜ್‌ನ ರೈಲಿಗೆ ಹತ್ತಬೇಕಾಗುತ್ತಿತ್ತು.

ಜೂನ್ ತಿಂಗಳು ಅತೀ ಸೆಕೆಯ ಕಾಲ. ಅದರಲ್ಲೂ ಉತ್ತರಭಾರತ ದವರು ಅವಭನಿಸುವಾಗಲೇ ಅದರ ಪ್ರಖರತೆ ತಿಳಿಯುವುದು. ಅಲ್ಲಿಯ

ವಾಸಿಗಳು ಹೇಗೆ ಜೀವಿಸುತ್ತಾರೋ ಅಂತ ಅನ್ನಿಸುವುದೂ ಉಂಟು. ಬೆಳಗಿನ ಏಳು ಗಂಟೆಯ ಸಮಯದಲ್ಲಿ ಬರೌನಿ ರೈಲ್ವೇ ನಿಲ್ದಾಣದಲ್ಲಿ ನಿಂತಿದ್ದ ಗೌಹಾಟಿಗೆ ಹೋಗುವ ರೈಲಿನ ಕೂಪೆಯಲ್ಲಿ ಕುಳಿತಿದ್ದ ನಮಗೆ ಬೇಸಗೆಯ ತಾಪದಿಂದ ಚಡಪಡಿಕೆ. ಸ್ನಾನ ಮಾಡಿ ಬಂದಂತೆ ಮೈಯೆಲ್ಲಾ ತೊಯ್ದು ಹೋಗಿದ್ದರೂ, ಬಿಸಿಲಿನ ಗುಳ್ಳೆಯಿಂದ ಕಡಿತ, ಹಿಂಸೆ ರೈಲು ಹೊರಟರೆ ಸಾಕು ಎನಿಸಿತ್ತು.

ಗಂಗಾನದಿಯ ದಡದ ಮೇಲೆ ಉಪಸ್ಥಿತವಾಗಿರುವ ನಗರ ಅಲಹಾಬಾದ್. ಸ್ವತಂತ್ರ ಭಾರತದ ಮೊಟ್ಟ ಮೊದಲ ಪ್ರಧಾನಿ ಜವಾಹರಲಾಲರವರು ಅಲಹಾಬಾದಿನವರು, ಗಂಗಾನದಿಗೆ ಕಟ್ಟಿರುವ ಸೇತುವೆಯ ಮೇಲೆ ರೈಲು ಹಾದು ಹೋಗುವಾಗ, ರಾತ್ರಿಯ ಸಮಯವಾಗಿತ್ತು. ಹಾಗಾಗಿ ಸರಿಯಾಗಿ ನದಿಯನ್ನು ನೋಡಲಾಗಲಿಲ್ಲ. ಆದರೂ ಫಳ ಫಳನೆ ಹೊಳೆಯುವ ನೀರಿನ ಅಲೆಗಳು ನದಿಯ ಅಪಾರತೆಯನ್ನು ಸಾರಿದವು. ನದೀ ದೇವತೆಯನ್ನು ಪೂಜಿಸುವವರು ನಾವು ಅದರಲ್ಲೂ ಗಂಗೆಗೆ ಇರುವ ವಿಶಿಷ್ಟ ಸ್ಥಾನ ಎಲ್ಲರಿಗೂ ತಿಳಿದದ್ದೇ. ಗಂಗಾ ಸ್ನಾನ, ತುಂಗಾಪಾನ ಅನ್ನೋ ವೇದ ವಾಕ್ಯವೇ ಇದೆ. ಅನೇಕ ವರ್ಷ ತುಂಗಾ ಪಾನ ಮಾಡಿದಳು ನಾನು. ಆದರೂ, ಗಂಗಾಸ್ನಾನ ಮಾಡುವ ಯೋಗವಿರಲಿಲ್ಲ. ಗಂಗಾ ಮಾತೆಗೆ ಕಾಸನ್ನು ಕಾಣಿಕೆಯಾಗಿ (ನದಿಗೆ ಕಾಸನ್ನು ಹಾಕುವುದು ಒಂದು ಹಿಂದೂ ಸಂಪ್ರದಾಯ) ಹಾಕಿ, ಕೈ ಮುಗಿದು ಪ್ರಾರ್ಥಿಸಿದೆ. ಗಂಗಾನದಿ ಸಿಗುತ್ತದೆ ಎನ್ನುವ ಉತ್ಸಾಹದಿಂದ ಎಚ್ಚರದಿಂದಿದ್ದು ಕಣ್ಣಾರೆ ಕತ್ತಲೆಯಲ್ಲಿ ಕಾಣುವ ಸೌಭಾಗ್ಯ ಪಡೆದೆ.

ಸುಮಾರು ಮೂವತ್ತಾರು ಘಂಟೆಗಳ ಪ್ರಯಾಣದ ನಂತರ, ನಾವು ಗೌಹಾಟಿಯನ್ನು ತಲುಪಿದೆವು. ಗೌಹಾಟಿಯ ರೈಲು ನಿಲ್ದಾಣ, ಡೆಲ್ಲಿಯ ರೈಲ್ವೇ ನಿಲ್ದಾಣಕ್ಕೆ ಹೋಲಿಸಿದರೆ, ಏನೇನೂ ಇಲ್ಲ ಚಿಕ್ಕದು. ಹೆಚ್ಚು ಕಡಿಮೆ ಶಿವಮೊಗ್ಗದ ರೈಲ್ವೇ ನಿಲ್ದಾಣದ ತರಹವೇ.

ಗೌಹಾಟಿಯಲ್ಲಿ ನಾವು ಹೋಗಬೇಕಾಗಿದ್ದುದು ರೈಲ್ವೇ ಸ್ಟೇಷನ್‌ನಿಂದ ಸುಮಾರು ಇಪ್ಪತ್ತೈದು ಕಿಲೋ ಮೀಟರ್ ದೂರದಲ್ಲಿ, ಟ್ಯಾಕ್ಸಿ ಮಾಡಿಕೊಂಡು, ಬೋಚಾನರ್ ಏರ್‌ಪೋರ್ಟ್‌ನ್ನು ತಲುಪಿದೆವು.

ನಮಗೆ ವಾಸವಾಗಿರಲು ಕೊಟ್ಟಿದ್ದ ಕ್ವಾರ್ಟರ್ಸ್‌ನಲ್ಲಿ ಸಹೋ

ದ್ಯೋಗಿ ಮಿಶ್ರಾ ಇದ್ದರು. ಅವರು ಮೂಲತಃ ಬೆಂಗಾಲಿಗಳು. ಮಾಲ್ಡಾ ಪಶ್ಚಿಮ ಬಂಗಾಳದ ಒಂದು ಊರು. ಅದು ಬಾಂಗ್ಲಾದೇಶದ ಬಾರ್ಡರ್. ಮಿಶ್ರಾದಂಪತಿಗಳು ತಮ್ಮ ಇಬ್ಬರು ಮಕ್ಕಳೊಂದಿಗೆ ಬೊಂಬಾಯಿನಿಂದ ವರ್ಗವಾಗಿ ಗೌಹಾಟಿಗೆ ಬಂದಿದ್ದರು. ನಮ್ಮವರು ಬೊಂಬೈಯಿನಲ್ಲಿದ್ದಾಗ ಅವರ ಪರಿಚಯವಿದ್ದುದರಿಂದ ನಮಗೆ ಮುಜುಗರವೆನಿಸಲಿಲ್ಲ.

ಟೈಪ್ ೫ನ ಕ್ವಾರ್ಟರ್ಸ್ ವಿಶಾಲವಾದ ಮನೆ. ದೊಡ್ಡ ದೊಡ್ಡ ರೂಮುಗಳು ಅನುಕೂಲವಾಗಿತ್ತು. ಆ ರಾತ್ರಿ ನಮಗೆ ಅವರಲ್ಲೇ ಆತಿಥ್ಯ. ಮಿಸೆಸ್ ಚಂದನಾ ಮಿಶ್ರಾ ಕೆಲವೇ ಗಂಟೆಗಳಲ್ಲಿ ನನಗೆ ಆತ್ಮೀಯಳಾದಳು. ಮಾತನಾಡಲು ಹಿಂದಿ ಇಂಗ್ಲೀಷ್ ಭಾಷೆ ಗೊತ್ತಿದ್ದುದರಿಂದ ಯಾವುದೂ ಕಷ್ಟವೆನಿಸಲಿಲ್ಲ. ಆ ರಾತ್ರಿ ಕಳೆಯಿತು.

ಗೌಹಾಟಿಯಲ್ಲಿ ಮೊದಲ ದಿನ.

ಸ್ವಲ್ಪ ಎತ್ತರದಲ್ಲಿ ಕಟ್ಟಲಾಗಿದ್ದ ನಮ್ಮ ಮನೆಯ ಮುಂಬಾಗಿಲಿಗೆ ಸುಮಾರು ಆರು ಮೆಟ್ಟಿಲುಗಳು. ಒಟ್ಟಿಗೇ ನಾಲ್ಕು ಜನರು ಒಳಗೆ ಹೋಗು ವಂತಹ ವಿಶಾಲವಾದ ಬಾಗಿಲು. ದೊಡ್ಡ ಕಾರಿಡಾರ್, ವಿಶಾಲವಾದ ಡ್ರಾಯಿಂಗ್ ರೂಂ, ದೊಡ್ಡ ದೊಡ್ಡ ಮಲಗುವ ಕೋಣೆ, ಅಡಿಗೆ ಮನೆ, ಸ್ಟೋರ್ ರೂಂ, ಪ್ಯಾಂಟ್ರಿ, ಹಿಂದಿನ ದೊಡ್ಡ ಅರಗಳ ಮೆಟ್ಟಿಲಿಳಿದು ಕೆಳಗೆ ಹೊದರೆ, ಸಣ್ಣ ಕೈ ತೋಟ. ಆದಕ್ಕೆ ಜಿಂಕ್‌ಸೀಟ್‌ನ ಬೇಲಿಯನ್ನು ಹಾಕಿ ದ್ದರು. ಒಂದು ಮೂಲೆಯಲ್ಲಿದ್ದ ದೊಡ್ಡ ಹಲಸಿನ ಮರದಲ್ಲಿ ತೂಗಾಡು ತ್ತಿದ್ದ ಹಲಸಿನ ಕಾಯಿ, ಹಣ್ಣುಗಳು ನಮ್ಮ ಬಾಯಲ್ಲಿ ನೀರೂರಿಸಿದವು. (ಹಲಸಿನ ಕಾಯಿವ್ಯಂಜನ)

ನಾವು ಡೆಲ್ಲಿಯಿಂದ ವರ್ಗವಾಗಿ *ಗೌಹಾತಿಗೆ ಹೊರಟಾಗ ಜೂನ್ ತಿಂಗಳು ಮಧ್ಯಭಾಗ ಬೇಸಗೆಯ ಪ್ರಖರ ಕಾಲ. ಡೆಲ್ಲಿಯ ಸೆಖೆಯೇ ತಡೆಯಲಾಗದು. ಡೆಲ್ಲಿಯಿಂದ ಗೌಹತಿಗೆ ಹೋಗುವ ಮಾರ್ಗದಲ್ಲಿ, ಅಲಹಾ ಬಾದ್ ಸಿಗುತ್ತದೆ. ಗಂಗಾನದಿಯ ಮೇಲೆ ಕಟ್ಟಲಾಗಿರುವ ದೊಡ್ಡ ಸೇತುವೆಯ ಮೇಲೆ ರೈಲು ಹಾದು ಹೋಗುವಾಗ, ನದಿಗೆ ಕಾಸು ಹಾಕಿ ಕೈ ಮುಗಿದೆ. ಜೂನ್

ಇಪ್ಪತ್ತೊಂದನೆ ತಾರೀಖು ಅತ್ಯಂತ ದೊಡ್ಡ ಹಗಲು ಎಂದು ಖಗೋಳ ಶಾಸ್ತ್ರಜ್ಞರು ಹೇಳುತ್ತಾರೆ. ನಾವು ಜೂನ್ ೧೪ನೇ ತಾ. ರಾತ್ರಿ ಗೌಹಾತಿಯನ್ನು ತಲುಪಿದೆವು. ನಮ್ಮ ಯಜಮಾನರ ಸಹೋದ್ಯೋಗಿ ಬೆಂಗಾಲಿ ಬಾಬುಗಳೊಬ್ಬರ ಮನೆಯಲ್ಲಿ ರಾತ್ರಿ ತಂಗಿದ್ದೆವು. ರಾತ್ರಿ ಅವರ ಮನೆಯಲ್ಲಿ ಊಟ. ನಮಗೆಂದು ಪ್ರತ್ಯೇಕವಾದ ರೂಮನ್ನು ಕೊಟ್ಟಿದ್ದರು.



ಬೆಳಿಗ್ಗೆ ಎಚ್ಚರವಾದಾಗ ಚೆನ್ನಾಗಿ ಬೆಳಕಾಗಿತ್ತು. ಬಿಸಿಲು ಮೇಲೇರಿತ್ತು. ಬೆಳಕು ರೂಮಲೆಲ್ಲಾ ಹರಡಿ, ಅಬ್ಬಾ ಎಷ್ಟು ಹೊತ್ತು ಮಲಗಿಬಿಟ್ಟೆವಲ್ಲಪ್ಪಾ.. ಆಗಲೆ ಬೆಳಿಗ್ಗೆ ಎಷ್ಟೋ ಹೊತ್ತಾಗಿ ಎಂಟು ಗಂಟೆಯಾಗಿಹೋಗಿದೆ ಅಂತ ಅಂದುಕೊಂಡು ಎದ್ದೆವು. ಗಡಿಯಾರದಲ್ಲಿ ಸಮಯ ನೋಡಿದರೆ, ಗಡಿಯಾರ ನಿಂತು ಹೋಗಿದೆ. ಇನ್ನು ಬೆಳಗಿನ ಐದು ಗಂಟೆ ತೋರಿಸುತ್ತಿದೆ. ಛೇ.. ಮೊದಲ ದಿನವೇ ಹೀಗಾಯ್ತಲ್ಲ ಅಂತ ಎದ್ದು, ರೂಮ್ ಬಾಗಿಲು ತೆಗೆದು ಹೊರ ಬಂದರೆ, ಮಿಶ್ರಾನ ಮನೆಯವರೂ ಯಾರೂ ಎದ್ದಿಲ್ಲ. ಹಾಲಿನಲ್ಲಿದ್ದ ಗೋಡೆ ಗಡಿಯಾರದಲ್ಲಿ ಸಹ ಸಮಯ ಐದು ಗಂಟೆ.! ಕಿಟಕಿ ತೆರೆದು ನೋಡಿದರೆ ಹೊರಗೆ ಯಾವ ಜನ ಸಂಚಾರವಿಲ್ಲ.

ಯಾವ ಸದ್ದೂ ಗದ್ದಲವಿಲ್ಲ. ಏನೂ ಮಾಡಲು ತೋಚದೇ ಮತ್ತೆ ಮಲಗಿದೆವು. ಆ ಬೆಳಕಿಗೆ ನಿದ್ದೆ ಬರಲಿಲ್ಲ. ಗಡಿಯಾರದ ಮುಳ್ಳು ಮಾತ್ರ ಮುಂದೆ ಮುಂದೆ ಹೋಗುತ್ತಿತ್ತು. ಸ್ವಲ್ಪ ಸಮಯದ ನಂತರ ಜನರ ಚಟುವಟಿಕೆಗಳು ಪ್ರಾರಂಭವಾದವು. ಗಡಿಯಾರ ವೇಳೆಯನ್ನು ಸರಿಯಾಗಿ ಸೂಚಿಸು ತ್ತಿತ್ತು. ಅಬ್ಬಾ ಆ ದಿನದ ಗಲಿಬಿಲಿಯನ್ನು ನೆನೆಸಿಕೊಂಡರೆ ಈಗಲೂ ನಿಜವಾ ಅಂತನ್ನಿಸುವಂತೆ ಆಗುತ್ತೆ. ನಂತರ ಗೊತ್ತಾಗಿತ್ತು, ಬೇಸಗೆಯಲ್ಲಿ ಹಾಗೇ ಬೆಳಗಿನ ಐದು ಗಂಟೆಯ ಹೊತ್ತಿಗೆ, ಎಂಟು ಗಂಟೆಯ ಹೊತ್ತಿನ ಬೆಳಕು, ಬಿಸಿಲು ಧಗೆ ಇರುತ್ತದೆಂದು ಅರ್ಥವಾಗಿತ್ತು.

ಭಾರತದಲ್ಲೇ ಮೊದಲು ಸೂರ್ಯೋದಯವಾಗುವ ಮೋಹನ ಬಾರಿ ಬಾರಿ ಎಂದರೆ, ವಾಡಿ, ಮನೆ ಎಂಬ ಅರ್ಥ. ಎಂಬ ಊರು ಅಸ್ಸಾಂನಲ್ಲಿದೆ. ಅಲ್ಲಿಯ ಸೂರ್ಯೋದಯದ ಸಮಯ ಬೆಳಗಿನ ಜಾವ ಸುಮಾರು ಮೂರುವರೆ ಗಂಟೆ!

ಉದಯ ಅಸ್ತಮಾನ ಎಂಬ ಎರಡು ಕೊಳಗದಲ್ಲಿ ಆಯುಷ್ಯವೆಂಬ ರಾಶಿ ಅಳೆಯುತ್ತಿದೆ, ಎಂದು ಪುರಂದರದಾಸರು ಹೇಳುವ ಮಾತು ನೆನಪಾಗಿತ್ತು. ಉದಯದ ಕೊಳಗ ಹೆದರಿಸಿತ್ತಾ. ನಮ್ಮನ್ನು ಅಳತೆ ಮಾಡಿತ್ತು.

ಒಂದೊಂದಾಗಿ ಊರಿನ ಪರಿಚಯವಾಗತೊಡಗಿತು. ನಾವು ಇದ್ದುದು ಏರಪೋರ್ಟ ಸಮೀಪದ ಕ್ವಾರ್ಟರ್ಸ್‌ನಲ್ಲಿ. ಏರ್‌ಪೋರ್ಟ್‌ನಲ್ಲಿದ್ದ ಇಂಡಿಯಾ ಮೀಟರಾಲಾಜಿಕಲ್ ಆಫೀಸ್‌ನಲ್ಲಿ ಆಫೀಸರ್ ನಮ್ಮವರು. ಒಂದೆರಡು ದಿನಗಳ ಆತಿಥ್ಯ ಆ ಸಹೋದ್ಯೋಗಿಗಳ ಮನೆಯಲ್ಲೇ ನಡೆಯಿತು. ಅವರು ಬೊಂಬಾಯಿನಿಂದ ಬಂದಿದ್ದವರು. ಅವರು ಬೆಂಗಾಲಿ ಭಾಷೆ ಬಲ್ಲವರಾದ್ದರಿಂದ ಅವರಿಗೆ ಅಲ್ಲಿಯ ಭಾಷೆ ಜನರೊಡನೆ ವ್ಯವಹಾರ ಕಷ್ಟವಾಗಿರಲಿಲ್ಲ. ಮಿಸಸ್ ಮಿಶ್ರಾ ನನಗೆ ತುಂಬಾ ಸಹಾಯಕಳಾದಳು. ಕೆಲವೇ ದಿನಗಳಲ್ಲಿ ಆತ್ಮೀಯ ಗೆಳೆತನ ಬೆಳೆಯಿತು. ಎಷ್ಟೋ ವರ್ಷದಿಂದ ಸ್ನೇಹಿತೆಯರು ಅನ್ನುವಷ್ಟು.

ನಮ್ಮ ಸ್ವಂತ ನೆಲದಿಂದ ದೂರವಿರುವಾಗ, ನಾವು ಅಲ್ಲಿಯ ಜನಗಳೊಡನೆ ಬೆರತು ಜೀವನ ನಡೆಸುವಾಗ, ನಾವು ಅಲ್ಲಿಯವರಾಗಲೇ ಬೇಕು.

ಅದು ನನ್ನ ಅನಿಸಿಕೆ, ನುಡಿ, ಆಚಾರ ವಿಚಾರ ಭಾಷೆ ಎಲ್ಲಾ ಕನ್ನಡ ನಾಡಿಗಿಂತ ಭಿನ್ನವಾಗಿದ್ದರೂ ಅಲ್ಲಿ, ಆದರೆ ನಾವೆಲ್ಲರೂ ಒಂದೇ, ನಾವು ಭಾರತೀಯರು. ಭಾರತದ ಯಾವುದೇ ಪ್ರಾಂತ್ಯದಲ್ಲಿರಲಿ, ಭಾರತೀಯರಿಗೆ ಬಾಳುವುದು ಕಷ್ಟವೆನಿಸದು.

ನಾವು ಮೊದಲ ದಿನ ಬಂದು ಇಳಿದುಕೊಂಡ ಕ್ವಾರ್ಟರ್ಸ್ ನಮಗೇ ಅಲಾಟ್ ಆಗಿದ್ದರಿಂದ ಮಿಶ್ರಾ ದಂಪತಿಗಳು ಬೇರೆ ಕ್ವಾರ್ಟರ್ಸ್‌ಗೆ ಹೋಗ ಬೇಕಾಗಿ ಬಂತು. ಅದೂ ಹತ್ತಿರದಲ್ಲೇ ಇತ್ತು.

ಬೋರ್ಜಾರ್ ಏರ್‌ಪೋರ್ಟ್ ಒಂದು ಸಣ್ಣ ಏರ್‌ಪೋರ್ಟ್. ಡೊಮೆಸ್ಟಿಕ್ ಫ್ಲೈಟ್‌ಗಳು, ಅದೂ ಕಲ್ಕತ್ತಾಕ್ಕೆ ಮಾತ್ರ ಓಡಾಡುತ್ತಿದ್ದವು.

ಗೌಹಾಟಿಯಿಂದ ಕಲ್ಕತ್ತಾಕ್ಕೆ ಫ್ಲೈಟ್‌ನಲ್ಲಿ ಕೇವಲ ನಲವತ್ತೈದು ನಿಮಿಷಗಳ ಅವಧಿಯ ಪ್ರಯಾಣ ಮಾತ್ರ. ಏರ್‌ಪೋರ್ಟ್‌ನಿಂದ್ನ ಸಿಟಿಗೆ ಸುಮಾರು ಇಪ್ಪತ್ತೆರಡು ಕಿಲೋಮೀಟರ್ ದೂರ. ಫ್ಲೈಟ್ ಇದ್ದ ಸಮಯ ದಲ್ಲಿ ಏರ್‌ಪೋರ್ಟ್ ರಸ್ತೇಯಲ್ಲಿ ಕಾರು ವ್ಯಾನುಗಳ ಸಂಚಾರ. ಉಳಿದಂತೆ, ರಸ್ತೇಯಲ್ಲಿ ಮಿಲಿಟರಿ ವ್ಯಾನುಗಳು ಆಗೊಮ್ಮೆ ಈಗ ಸಂಚರಿಸುವುದ್ನು ಬಿಟ್ಟರೆ ಬೇರೆ ಏನೂ ಇಲ್ಲ. ಜನ ಸಂಚಾರವೇ ಇಲ್ಲ.

ನಮ್ಮ ಮನೆಯ ಕಿಟಕಿಯಲ್ಲಿ ನಿಂತು ನೋಡಿದರೆ, ಏರೋಪ್ಲೇನ್ ಟೇಕ್ ಆಫ್ ತೆಗೆದುಕೊಂಡು, ಮೇಲೇರುವುದು ಚೆನ್ನಾಗಿ ಕಾಣುತ್ತಿತ್ತು. ಮೊದ ಮೊದಲಿಗೆ ಇದಕ್ಕೆ ಮುಂಚೆ ಎಂದೂ ಏರೋಪೇನ್‌ನ್ನು ಅಷ್ಟು ಹತ್ತಿರದಿಂದ (ಹಲಸಿನಕಾಯಿ ವ್ಯಂಜನ) ನೋಡಿರಲಿಲ್ಲವಲ್ಲ.

ಮಿಶ್ರ ಮನೇಲಿ ಕೆಲಸಕ್ಕಿದ್ದವಳೇ ನಮ್ಮ ಮನೆಯ ಕೆಲಸವನ್ನು ಮಾಡಲು ಒಪ್ಪಿಕೊಂಡಳು. ಮನೇಲಿ ನಾವಿಬ್ಬರೇ ನಮ್ಮಿಬ್ಬರಿಗೆ ಮನೆ ಕೆಲಸ ದವರ ಮನೇಲಿ ಅಗತ್ಯವಿಲ್ಲ. ಆದರೆ ಅಲ್ಲಿ ಹಾಗಲ್ಲ. ಆಫೀಸರ್ ಮನೆಯಲ್ಲಿ ಕೆಲಸದವರು ಇರಲೇಬೇಕು. ಎಲ್ಲಾ ನಮಗೇ ಆಗುತ್ತೆ, ಬರುತ್ತೆ ಅಂತ ನಾವು ನಾವೇ ಮಾಡಿಕೊಂಡರೆ, ಉಳಿದವರು ನಗುತ್ತಾರೇನೋ ಎಂಬ ಅಳುಕು." ಅಮೀ ಕಾಚ್ ಕರೀನಾ ದೀದೀ " (ನಾನು ಕೆಲಸ ಮಾಡ್ತೀನಿ ಅಕ್ಕಾ) ಎನ್ನುತ್ತಾ ರಾಶಾ ಕೆಲಸಕ್ಕೆ ಸೇರಿಕೊಂಡಳು. ಅಲ್ಲಿ ಎಲ್ಲರೂ ದೀದೀ ಎಂದೇ ಕರೆಯುವ

ವಾಡಿಕೆ. ಆಂಟಿ, ಅಂಕಲ್ ಎಂಬ ಪಾಶ್ಚಾತ್ಯ ಪ್ರಭಾವ ಕಡಿಮೆ ಯಾಗಿದ್ದ ಕಾಲವದು.

ದೊಡ್ಡ ಮನೆ. ದೊಡ್ಡ ದೊಡ್ಡ ರೂಮುಗಳು, ಹಾಲು ಪ್ಯಾಂಟ್ರಿ, ಅಡಿಗೆ ಮನೆ, ಅಡಿಗೆ ಮನೆಯಿಂದ ರೂಮಿಗೆ ಹೋಗಿ ಸೇರುವ ಕಾರಿಡಾರ್ ಕಾಲೇಜು, ಕಾರಿಡಾರ್‌ನಂತೆ ಅಷ್ಟೂದ್ದ. ಹೊರಗೆ ಒಂದು ದೊಡ್ಡ ಬಯಲು ಅಂಗಳ. ಚೆನ್ನಾಗಿ ಗಾರೆ ನೆಲ ಕುರ್ಚಿ ಹಾಕಿಕೊಂಡೋ ಚಾಪೆ ಹಾಸಿಕೊಂಡೋ ಆರಾಮವಾಗಿ ಕೂತು ಮಲಗಿ, ಹಾಯಾಗಿ ಇರಬಹುದು ಎನಿಸುವಷ್ಟು ಅಚ್ಚು ಕಟ್ಟಾಗಿತ್ತು. ಅಲ್ಲಿಂದ ಕೆಳಕ್ಕೆ ನಾಲ್ಕಾರು ಮೆಟ್ಟಲುಗಳನ್ನಿಳಿದರೆ ಹಸಿರು ಹುಲ್ಲು ನೆಲ ಆ ಹಸಿರು ಹುಲ್ಲುಗಳ ನಡುವೆ ಏನೇನು ಅಡಗಿವೆಯೋ ಎಂದು ಕಾಲಿಡಲೇ ಭಯವಾಗುತ್ತಿತ್ತು. ಸುತ್ತಲೂ ಜಿಂಕ್‌ಷೀಟ್‌ನ ಬೇಲಿ. ಆ ಕಾಂಪೌಂಡ್‌ಲ್ಲಿ ಒಂದು ದೊಡ್ಡ ಹಲಸಿನಮರ, ತುಂಬಾ ಹಳೆಯ ಮರ. ಹಲಸಿನ ಹಣ್ಣು ತಿಂದು ಗೊತ್ತಿ ವಿನಃ ಹಲಸಿನ ಮರವನ್ನು ಅಷ್ಟು ಹತ್ತಿರದಿಂದ ನೋಡಿರಲಿಲ್ಲ. ನಮ್ಮ ತಂದೆಗೆ ಹಲಸಿನ ಮರವನ್ನು ಮನೆಯ ಅಂಗಳದಲ್ಲಿ ಬೆಳೆಸ ಬಾರದು ಎಂಬ ನಂಬಿಕೆ ಅದೇಕೋ ಗೊತ್ತಿಲ್ಲ. ಸಸಿ ಹುಟ್ಟಿಕೊಂಡರೆ, ನಿರ್ದಾಕ್ಷಿಣ್ಯವಾಗಿ ಕಿತ್ತು ಬಿಸಾಡುತ್ತಿದ್ದರು. ಇಲ್ಲಂತೂ, ಆ ದೊಡ್ಡ ಮರದಲ್ಲಿ ಕೈಗೆ ಎಟಕುವಷ್ಟು ಎತ್ತರದಲ್ಲಿ ತೂಗಾಡುವ ಸಣ್ಣ ಸಣ್ಣ ಕಾಯಿಗಳು.

"ಹಲಸಿನ ಕಾಯಿ ಪಲ್ಯ ತುಂಬಾ ಚೆನ್ನಾಗಿರುತ್ತೆ. ಅಮ್ಮ ಮಾಡು ತ್ತಿದ್ದಳು. ಇಲ್ಲಿ ದಿನಾ ಮಾಡಿಕೊಂಡು ತಿನ್ನಬಹುದು" ನಮ್ಮವರ ಆಸೆ.

ನನಗೆ ಹಲಸಿನ ಕಾಯಿ ಹುಳಿ ಮಾಡಿ ಗೊತ್ತಿತ್ತೇ ವಿನಃ ಪಲ್ಯ ಮಾಡಿ ಗೊತ್ತಿಲ್ಲ. ಅದೇ ದಿನ ಬೆಂಗಳೂರಿನಲ್ಲಿರುವ ನಮ್ಮ ಅತ್ತೇಗೆ ಕಾಗದ ಬರೆದೆ.

ನಮ್ಮ ಮನೆಯಲ್ಲಿ ಹಲಸಿನ ಮರವಿದೆ. ಬೇಕಾದಷ್ಟು ಕಾಯಿಗಳು ಬಿಟ್ಟಿವೆ. ಪಲ್ಯ ತಿನ್ನ ಬೇಕೆಂದು ನಿಮ್ಮ ಮಗನಿಗೆ ಆಸೆ. ಪಲ್ಯ ಮಾಡುವ ವಿಧಾನ ತಿಳಿಸಿ ಬರೆಯಿರಿ. ಅಲ್ಲಿ ಕಾಗದ ಪೋಸ್ಟ್ ಮಾಡಿದರೆ, ಅದು ಬೆಂಗಳೂರನ್ನು ಮೂರು ನಾಲ್ಕು ದಿನಗಳಲ್ಲಿ ತಲಪುತ್ತದೆ. ಅವರು ತಕ್ಷಣ ಉತ್ತರ ಬರೆದರೂ ಮತ್ತೇ ಮೂರು ನಾಲ್ಕು ದಿನಗಳು ಅಲ್ಲಿಗೆ ಒಂದು ವಾರ... ಮರದ ತುಂಬಾ ಕಾಯಿಗಳು ಬಾಯಲ್ಲಿ ನೀರು ಸುರಿಸುವಂತೆ ಜೋತು

ಬಿದ್ದಿದ್ದರೂ, ಕೊಯ್ದು ಪಲ್ಯ ಮಾಡಿ ತಿನ್ನುವಂತಿಲ್ಲ. ಸಾಗರದ ಅಂಚಿನಲ್ಲಿ ನಿಂತು, ಬಾಯಾರಿದರೂ, ಬಗ್ಗಿ ಒಂದು ಬೊಗಸೆ ನೀರನ್ನು ಕುಡಿಯಲಾಗದಂತೆ ಅನ್ನಿಸಿತ್ತಾ ನನ್ನವರಿಗೆ.

ಏನಮ್ಮ ನೀನು? ಮದುವೆಗೆ ಮುಂಚೆ ಅಡಿಗೆ ಬರುತ್ತಾ ಅಂತ ಕೇಳಿದ್ರೆ ಹೂಂ ಅಂದೆ.... ಈಗ ನೋಡಿದರೆ ಹಲಸಿನ ಕಾಯಿ ಪಲ್ಯ ಮಾಡುಕ್ಕೆ ಬರುಲ್ಲ ಅಂತೀಯಲ್ಲ... ನೀನು ನಕ್ಕಿದ್ದೆ.

ಹಲಸಿನ ಕಾಯಿ ಹೆಚ್ಚುವುದು ಸುಲಭವಲ್ಲ. ಬಹಳ ಹೆಚ್ಚಿಗೆ ಕೆಲಸ. ಅದರ ಬಿಳಿಯ ಅಂಟು ಕೈಗೆ ಅಂಟದಿರಲು ಕೈಗೆ ಎಣ್ಣೆ (ಅಡಿಗೆಗೆ ಉಪ ಯೋಗಿಸುವ) ಹಚ್ಚಿಕೊಳ್ಳಬೇಕು. ಆ ದಪ್ಪನೆಯ ಸಿಪ್ಪೆಯನ್ನು ಮೊದಲು ತೆಗೆಯಬೇಕು.

ರಾಶಾ ಹೆಚ್ಚಿ ಕೊಡ್ತಾಳೆ .ಅವಳ ಹತ್ತಿರ ಆದಷ್ಟು ಕೆಲಸ ಮಾಡಿಸಿಕೋ. ಎಲ್ಲರ ಮನೆಗಿಂತ ನಮ್ಮ ಮನೆಯಲ್ಲಿ ಅವಳಿಗೆ ಕೆಲಸ ಕಡಿಮೆ. ಇದು ನಮ್ಮ ವರ ಅಭಿಪ್ರಾಯ.

ಹೌದು ನಮ್ಮ ಮನೆಯ ಕೆಲಸ ಅವಳಿಗೆ ಸುಲಭ. ನಾವು ಗಂಡ ಹೆಂಡತಿ ಇಬ್ಬರೇ. ಮನೆಯಲ್ಲಿ ಹರದ ಕಸ ಹಾಕುವ ಚಿಕ್ಕಮಕ್ಕಳು ಇಲ್ಲಿ ಅಡಿಗೆ ಊಟ ತಿಂಡಿಯ ಪಾತ್ರೆಗಳು ಅತೀ ಕಡಿಮೆ.

ಮೊದಲೇ ಹೊಸ ಸಂಸಾರ. ಜತೆಗೆ ನಮಗ' ಊರಿಂದ ಊರಿಗೆ ವರ್ಗವಾಗುತ್ತೇ. ಮನೆಯಲ್ಲಿ ಹೆಚ್ಚು ಸಾಮಾನುಗಳಿದ್ದರೆ ಸಾಗಿಸುವುದು ಕಷ್ಟ ವಾಗುತ್ತೆ. ಆದ್ದರಿಂದ ಆದಷ್ಟೋ ಕನಿಷ್ಟ ಸಾಮಾನುಗಳನ್ನು ಆಟ್ಟುಕೊಂಡು ಸಂಸಾರ ನಡೆಸುವುದನ್ನು ಅಭ್ಯಾಸ ಮಾಡಿಕೋ, ನಮ್ಮ ಅಮ್ಮನಂತೆ ಕಂಡಿದ್ದ ನ್ನೆಲ್ಲಾ ಮನೆಗೆ ಬೇಕು ಅಂತ ಕೊಂಡುಕೊಳ್ಳುವ ಪರಿಪಾಠವನ್ನಿಟ್ಟುಕೊಳ್ಳ ಬೇಡ. ಇದು ನನ್ನವರ ಮೊದಲ ಉಪದೇಶ ನನಗೆ ಡೆಲ್ಲಿಯಿಂದ ಗೌಹಾತಿಗೆ ನಾವು ಒಯ್ದುದ್ದು ಕೇವಲ ಎಂಟು ಪೀಸ್‌ಗಳು. ಅದೂ ಮದುವೆಯಾದ್ದರಿಂದ ಇಲ್ಲದಿದ್ದರೆ, ಒಂದು ಪೆಟ್ಟಿಗೆ, ಒಂದು ಹೋಲ್ಡಾಲ್ ಇಷ್ಟೇ ನನ್ನ ಗಂಡನ ಬಳಿ ಇದ್ದದ್ದು. ಒಬ್ಬನದೇ ಸಂಸಾರ ಅಂದರೆ ಹೇಗೋ ನಡೆಯುತ್ತೆ, ಮೆಸ್ ನಲ್ಲೊ ಹೋಟೆಲ್ಲಿನಲ್ಲೋ ಊಟ, ಕಾಫಿ, ತಿಂಡಿಯ ಕೆಲಸ ಮುಗಿದರೆ, ಪಾತ್ರೆ

ಪಡಗಗಳ ಅಗತ್ಯವೇನಿದೆ.?

ಆದರೆ ಮದುವೆ ಮಾಡಿಕೊಂಡು ಹೆಂಡತಿಯನ್ನು ಕರೆ ತರುವುದು, ಅಡಿಗೆ ಕೆಲಸ ಮಾಡಲೆಂದೇ ಅಲ್ಲನೇ... ಪಾಪ ದೂರದಲ್ಲಿ ಬೇರೆ ಊರಿನಲ್ಲಿ ದಾನೆ. ಅವನೇ ಕೈ ಸುಟ್ಟುಕೊಂಡು ಬಾಯಿ ಸುಟ್ಟುಕೊಂಡು, ತಿನ್ನಲು ಆಗುತ್ಯೆ? ಮನೆ ಊಟ ಇಲ್ಲದೆ ನೋಡೋಕೆ ಆಗೋಲ್ಲ. ಹಾಗಾಗಿ ಹೋಗಿ ದಾನೆ. ಅದಕ್ಕೆ ಈ ಸಾರಿ ಅವನು ರಜದ ಮೇಲೆ ಬಂದಾಗ ಅವನಿಗೆ ಮದುವೆ ಮಾಡಿಬಿಡೋ ಅಂತಿದೀನಿ. ಇದು ಸಾಮಾನ್ಯವಾಗಿ ಅಮ್ಮಂದಿರು ತಮ್ಮ ಗಂಡು ಮಕ್ಕಳ ಮೇಲೆ ತೋರುವ ಕಳಕಳಿ.

ವಧೂ ಪರೀಕ್ಷೆಯ ಸಮಯದಲ್ಲಿ ಮೊದಲ ಪ್ರಶ್ನೆ ಇದೇ. ಏನಮ್ಮ ನಿನಗೆ ಏನೇನು ಅಡಿಗೆ ಮಾಡೋಕೆ ಬರುತ್ತೇ. ಅಂತ ಅಥವಾ ನಿಮ್ಮ ಮಗಳಿಗೆ ಯಾವ್ಯಾರ ಅಡಿಗೆ ಕಲಿಸಿದೀರಿ... ಅಂತ. ಅಂದರೆ ಹೆಂಗಸು ಅಂದರೆ ಅಡಿಗೆ ಮನೆ. ಅಡಿಗೆ ಮನೇಗೂ ಹೆಂಗಸಿಗೂ ಅಂಟು ನಂಟು. ಹಲಸಿನ ಕಾಯಿಯಲ್ಲಿ ಅಂಟು ಇದ್ದಂತೆ. ಕೈಗೆ ಎಣ್ಣೆ ಸವರಿ ಹಲಸಿನ ಕಾಯಿ ಹೆಚ್ಚಿ ವ್ಯಂಜನ ಮಾಡಿದರೆ ಆತಿ ರುಚಿ. ಗಂಡಸರಿಗೆ ಆ ರುಚಿ ಮಾತ್ರ ಗೊತ್ತು. ಮಾಡುವ ಕಷ್ಟದ ಅರಿವಿಲ್ಲ.

ಹದಿನೈದು ದಿನಗಳ ನಂತರ ನಮ್ಮ ಅತ್ತೇ ತಿಳಿಸಿದಂತೆ ಹಲಸಿನ ಕಾಯನ್ನು ತುರಿದು, ಕಡಲೆ ಕಾಳಿನ ಒಗ್ಗರಣೆಯಲ್ಲಿ ಬೇಯಿಸಿ ಮಾಡಿದ ಪಲ್ಯ ಚೆನ್ನಾಗಿತ್ತು. ಆದರೆ ಅವರಮ್ಮ ಮಾಡುವುದು ಇನ್ನು ಚೆನ್ನ.ಇದು ಹೊಗಳಿಕೆ!

೪. ಹಸಿರು ಹುಲ್ಲುಗಳ ನಡುವೆ ಶಂಖದಂತಹ ಒಂದು ವಸ್ತು ಬಿದ್ದಿತ್ತು. ಬಿಳಿ ಊದಾ ಬಣ್ಣಗಳ ಗೆರೆ ಗೆರೆಯುಳ್ಳ ಕೆರೆಯ ಅಂಚಿನಲ್ಲಿ ಸಿಗುವಂತಹ ಶಂಖ ಆದರೆ ಸುಮಾರಾಗಿ ಕಿತ್ತಳೆ ಹಣ್ಣಿನಷ್ಟು ದೊಡ್ಡದು ತೆಗೆಯಲು ನೋಡಿದರೆ ಸುಲಭವಾಗಿ ಬರಲಿಲ್ಲ. ನೆಲಕ್ಕೆ ಅಂಟಿತ್ತು. ನೋಡಿದರೆ ಒಳಗೆ ಹುಳು ಜೀವಂತವಾಗಿದೆ. ಬಲವಂತವಾಗಿ ಕಿತ್ತು ತಂದು ಜಗಲಿಯ ಮೇಲೆ ಇಟ್ಟು ನೋಡಿ ಆನಂದಿಸಿದ್ದಾಯಿತು. ಆ ರೀತಿಯ ಸುಮಾರು ಒಂದು ಸಣ್ಣ ತೆಂಗಿನ ಕಾಯಿ ಗಾತ್ರದಷ್ಟು ದೊಡ್ಡ ಜೀವಂತ ಶಂಖವನ್ನ ನೋಡಿರಲಿಲ್ಲ.

ಅವಳ ಭಾಷೆ ಅಸ್ಸಾಮಿ. ಕೆಲಸದ ಆಳು ರಾಶಾ ಬಾಯಲ್ಲಿದ್ದ

ತಾಂಬೂಲವನ್ನು ಪಿಚಕ್ಕನೆ ಉಗುಳಿ ''ಹಾಮೂಖ್, ಹಾಮೂಖ್'' ಎಂದಳು. ಇವರ ಭಾಷೆಯಲ್ಲಿ ಹಾಮೂಖ್ ಎನ್ನುತ್ತಾರೆಂದುಕೊಂಡೆ.

ಒಂದು ದಿನ ಮಿಸೆಸ್ ಮಿಶ್ರಾ ಮನೆಗೆ ಬಂದಿದ್ದಳು. ಅಪರೂಪದ ಶಂಖಗಳ ಹೊರಕವಚವನ್ನು ಡ್ರಾಯಿಂಗ್ ರೂಂನಲ್ಲಿ ಅಲಂಕರಿಸಲು ನಾನು ಕೂಡಿಟ್ಟಿದ್ದೆ. ಕೆಳಗೆ ಬಿದ್ದರೆ, ಒಡೆದು ಹೋಗುವಷ್ಟು ಸೂಕ್ಷ್ಮವಾದ ಮೇಲಿನ ಪದರ ಪ್ಲಾಸ್ಟಿಕ್‌ನಂತೆ ಫಳ ಫಳ ಹೊಳೆಯುತ್ತಿತ್ತು. ಅದನ್ನ ನೋಡಿ ನಕ್ಕು ಈ ಶಾಮೂಖ್ ಗಳನ್ನು ಯ್ಯಾಕೆ ಕಲೆಕ್ಟ್ ಮಾಡಿದೀರಿ ಅಂತ ಕೇಳಿದಳು. ಆಗ ಅದು ಶಂಖ ಎಂದು ಅರ್ಥವಾಗಿತ್ತು

ರಾಶಾಳ ಬಾಯಲ್ಲಿ ''ಹಾಮೂಖ್''ಇವಳ ಬಾಯಲ್ಲಿ ''ಶಾಮೂಖ್'' ಅಂದರೆ ಶಂಖ. ಬೆಂಗಾಲಿಗಳು ಶಕಾರವನ್ನು ಜಾಸ್ತಿ ಪ್ರಯೋಗಿಸುತ್ತಾರಷ್ಟೆ. ಬೆಂಗಾಲಿಗಳ 'ಶ'ಕಾರ ಅಸ್ಸಾಮಿಗಳ ಬಾಯಲ್ಲಿ 'ಹ' ಕಾರ ಅದು ಸರಿಯಾಗಿ ಅರ್ಥವಾದ ಇನ್ನೊಂದು ಪ್ರಸಂಗ ಹೇಳ್ತೀವಿ.

ಆಗ ನಮ್ಮ ಮನೆಯಲ್ಲಿ ಟಿ.ವಿ. ಇರಲಿಲ್ಲ. ಕ್ಯಾಸೇಟ್ ಪ್ಲೈಯರ್ ಆಗಲಿ, ರೆಕಾರ್ಡ್ ಪ್ಲೈಯರ್ ಆಗಲಿ, ಇರಲಿಲ್ಲ. ಯಾವುದೋ ಓಬೀರಾಯನ ಕಾಲದ ಒಂದು ಹಳೇ ರೇಡಿಯೋ ಇತ್ತು. ಸಾಯಂಕಾಲ ರೇಡಿಯೋ ತಿರುಗಿಸಿದರೆ ಬರುತ್ತಿದ್ದುದು ಕೇವಲ ಗೌಹಾಟಿ ಆಕಾಶವಾಣಿ ಕೇಂದ್ರದ ಪ್ರಸಾರ ಮಾತ್ರ.

ಅಸ್ಸಾಮಿನ ಹಾಡುಗಳು ಇಲ್ಲಿಯ ಜನಪದ ಹಾಗೂ ಲಾವಣಿ ಹಾಡುಗಳನ್ನು ಹೋಲುತ್ತಿದ್ದುದರಿಂದ ಕೇಳಲು ಇಂಪಾಗಿರುತ್ತಿತ್ತು. ಹಾಡಿನ ಅರ್ಥವಾಗಲೀ ಅವರು ಹೇಳುತ್ತಿದ್ದುದಾಗಲೀ ಸರಿಯಾಗಿ ಅರ್ಥವಾಗ ದಿದ್ದರೂ, ''ಹುಗಮ್ ಹಂಗೀತ್ ಹುವಲೋ..''ಎಂಬ ವಾಕ್ಯ ಕೇಳಿ ನಗು ಬರುವಂತಾಯಿತು. ಅದು ಸುಗಮ್ ಸಂಗೀತ್ ಸುನಲೋ..'' ಎಂಬ ವಾಕ್ಯದ ತದ್ಭವ, ಎಂದಿರೋರು ಅಷ್ಟೆ.

ಬೆಂಗಾಲಿಗಳ ಲಿಪಿಗೂ,ಅಸ್ಸಾಮಿಗಳ ಲಿಪಿಗೂ ಕೇವಲ ಮೂರೇ ಮೂರು ಲಿಪಿ ಮಾತ್ರ ವ್ಯತ್ಯಾಸವಂತೆ. ಬೆಂಗಾಲಿಯನ್ನಾಗಲಿ, ಆಸ್ಸಾಮಿಯನ್ನಾಗಲೀ ಕಲಿಯುವ ಸಾಹಸ ಮಾಡದಿದ್ದುದರಿಂದ ಆ ವ್ಯತ್ಯಾಸ ಯಾವು

ದೆಂದು ಸರಿಯಾಗಿ ಗೊತ್ತಾಗಲಿಲ್ಲ. ಆದರೆ 'ಶ'ಕಾರಕ್ಕೆ ಹಕಾರ ಹೇಳುತ್ತಾರೆಂದು ಮಾತ್ರ ಗೊತ್ತಾಗಿತ್ತು. ಅವರು 'ವ' ಕಾರಕ್ಕೆ 'ಬ'ಕಾರ ಹೇಳುತ್ತಾರೆ. ಉದಾಃ ರವೀಂದ್ರನಾಥ ಠಾಗೋರ್, ರಬೀಂದ್ರನಾಥ ಠಾಗೂರ್.

ಕೆಲಸದವಳು ನನ್ನನು ಮದ್ರಾಸೀ ದೀದೀ ಎಂದು ಇವರನ್ನು ಮದ್ರಾಸಿ ಬಾಬು ಎಂದೂ ಕರೆಯುತ್ತಿದ್ದಳು. ಸಾಮಾನ್ಯವಾಗಿ ಉತ್ತರ ಭಾರತದವರಿಗೆ, ದಕ್ಷಿಣ ಭಾರತ ಎಂದರೆ ಮದ್ರಾಸ್ ಒಂದೇ ಗೊತ್ತಿದ್ದ ಕಾಲ. ಅದು ಈಗಲೂ ಹೆಚ್ಚಿಗೆ ಬದಲಾಗಿಲ್ಲ. "ಅಲ್ಲಿ ಕರ್ನಾಟಕ ಅಂತ ಒಂದು ಪ್ರಾಂತ್ಯ ಇದೆ. ಕನ್ನಡ ಅಂತ ಒಂದು ಭಾಷೆ ಇದೆ. ಅಲ್ಲಿನ ಮಲೇನಾಡು ಸೀಮೆ ನಿಮ್ಮ ಈ ಪ್ರಾಂತ್ಯವನ್ನು ತುಂಬಾ ಹೋಲುತ್ತದೆ" ಎಂದು ತಿಳಿಸಿ ಹೇಳುವ ಕೆಲಸ ನೀರಿನಲ್ಲಿ ಹೋಮ ಮಾಡಿದಂತೆ. ಆ ಭೇದಗಳನ್ನು ಅರಿಯುವ ಆಸಕ್ತಿಯೇ ಇಲ್ಲ. ದಕ್ಷಿಣ ಭಾರತದವನು ಯಾರಾದರೆ ನಮಗೇನು, ನಮಗೆ ಮದ್ರಾಸಿ. ನಮಗೆ ಅಷ್ಟು ಸಾಕು ಎನ್ನುವ ಧೋರಣೆ"

ಉತ್ತರ ಭಾರತದವರು ಯಾರೇ ದಕ್ಷಿಣ ಭಾರತಕ್ಕೆ ಬಂದರೂ ಇಲ್ಲಿಯ ಭಾಷಾ ಜ್ಞಾನವನ್ನಾಗಲೀ, ವೈಖರಿಯನ್ನಾಗಲೀ ತಿಳಿಯುವ ಪ್ರಯತ್ನ ಮಾಡುವುದಿಲ್ಲ. ತಮಿಳೋ ಕನ್ನಡವೋ ನಮಗೇನು? ಅವರ ಕೆಲಸವಂತೂ ನಡೆಯುತ್ತೆ. ಹರಕು ಮುರುಕ ಹಿಂದಿಯಲ್ಲಿ ನಿಭಾಯಿಸ ಬಹುದು. ಇಂಗ್ಲಿಷ್ ಬಂದರೆ ಸಾಕು ಅಲ್ಲವೆ.? ಎಲ್ಲಾ ನಡೆಯುತ್ತೆ.

ನಮ್ಮ ರಾಶಾ ಬಿಹ್ ಬಿಹ್.. ಎಂದಾಗ.. ಬಿಹ್ ಅಂದರೆ ಏನು ಅಂತ ಮತ್ತೆ ಕೇಳಿದರೆ, ಬಿಹ್ ಖಾಬೇ ಮರಿ ಚಾಬೇ.. ಎಂದು ನಾಲಿಗೆಯನ್ನು ಹೊರಚಾಚಿ ಸತ್ತಂತೆ ನಟಿಸಿ ತೋರಿಸಿದರೆ, ಓ.. ವಿಷ ಎಂದು ಅರ್ಥವಾಗುತ್ತಿತ್ತು. ವಿಷ ತಿಂದರೆ ಸತ್ತು ಹೋಗ್ತೀವಿ..ಅಂತ. ಹಾಗೆ ಕಹಿ ಪದಾರ್ಥಕ್ಕೂ ವಿಷ ಅಂತ ಹೇಳ್ತಾರೆ. ಬೆಂಗಾಲಿಗಳು ಬಿಶ್ ಎನ್ನುವುದನ್ನು ಅಸ್ಸಾಮಿಗಳು ಬಿಹ್ ಎಂತಾರೆ ಅಂತ ಅರ್ಥವಾಗಿತ್ತು.

"ತುಮಿ ಮದ್ರಾಸಿ.. ಅಮಿ ಅಹಾಮಿಯ " ಎನ್ನೋಳು ತಾವು ಅಸ್ಸಾಮಿಗಳು ಎಂಬ ಅಭಿಮಾನ ಜಾಸ್ತಿಮಾತಿನಲ್ಲಿ ಮಾತ್ರ. ಅಸ್ಸಾಂನಲ್ಲಿರುವವರು ಅಸ್ಸಾಮಿಯಗಳೇ ತಾನೇ! ಅಸಮಾನ ಎಂಬ ಅರ್ಥದಿಂದ ಅಸ್ಸಾಂ

ಆಗಿರ ಬಹುದೆಂದು ಇತಿಹಾಸ ಹೇಳುತ್ತದೆ. ಅಸಮ ಎಂದರೆ ಸಮವಲ್ಲದ್ದು. ಭೂಮಿಗೆ ಸಮಾಂತರವಾಗಿಲ್ಲದೇ ಕೆಳಗಿರುವ ಪ್ರದೇಶ ಅಸಮ ಆಗಿ ಅಸ್ಸಾಮ್ ಆಗಿರಬಹುದು. ಕಣಿವೆ ಪ್ರದೇಶ ಗುಡ್ಡ ಬೆಟ್ಟಗಳ ನಡುವೆ ಈ ಅಹಾಮ ಜನಾಂಗದವರು ಎಷ್ಟೋ ಕಾಲದಿಂದ ವಾಸಿಸುತ್ತಿದ್ದರು ಎಂದು ಅರ್ಥವಾಗುತ್ತೆ. ಗಿರಿಜನರೂ ಅಲ್ಲಿಯೂ ಹಳ್ಳಿಗಳೇ ಜಾಸ್ತಿ.

ಅಸ್ಸಾಂ ಈಗ ಸಪ್ತ ಸೋದರಿಯರಾಗಿ ಬೇರೆ ಬೇರೆ ಪ್ರಾಂತ್ಯಗಳಾಗಿ, ಬೇರೆ ಬೇರೆ ಹೆಸರಿನಲ್ಲಿ ವಿರಾಜಿಸುತ್ತಿರಬಹುದು. ಆದರೆ ಹೆಚ್ಚು ಕಡಿಮೆ ಬೌಗೋಳಿಕ ಲಕ್ಷಣಗಳೆಲ್ಲ ಒಂದೇ. ಕಾಡು,ಬೆಟ್ಟ, ಗುಡ್ಡ ವನ ಗಿರಿ, ಕಂದರ ಗಳೇ ಎಲ್ಲೆಲ್ಲೂ. ಹೊರಗೆ ಧೋ ಎಂದು ಧಾರಾಕಾರವಾಗಿ ಮಳೆ ಸುರಿಯು ತ್ತಿದ್ದರೆ, ಒಳಗೆ ಫ್ಯಾನಿನ ಕೆಳಗೆ ಕೂತಿದ್ದರೂ, ದೇಹದಿಂದ ಬೆವರು ಧಾರಾ ಕಾರವಾಗಿ ಸುರಿಯುತ್ತದೆ. ಅಂಥಾ ಶೆಖೆ.

ಭಾರತದಲ್ಲೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬರುವ ಚಿರಾಪುಂಜಿಯ ಹೆಸರನ್ನು ನಾವು ಭಾಗೋಳ ಶಾಸ್ತ್ರದಲ್ಲಿ ಓದಿ ತಿಳಿದಿದ್ದೆವು. ಚಿರಾಪುಂಜಿ ಈಗ ಮೇಘಾಲಯ ರಾಜ್ಯಕ್ಕೆ ಸೇರಿದೆ. ಚಿರಾಪುಂಜಿಗಿಂತ ಹೆಚ್ಚಿನ ಪ್ರಮಾಣದ ಮಳೆ ಬೀಳುವ ಮತ್ತೊಂದು ಸ್ಥಳವನ್ನು ಹವಾಮಾನ ತಜ್ಞರು ಗುರುತಿಸಿದ್ದಾರೆ. ಮೌಸಿನ್ ರಾಮ್ (Mawsynram) ಎಂಬ ಊರು ಅಸ್ಸಾಂ ಪ್ರಾಂತ್ಯದಲ್ಲಿದೆ

ಅಸ್ಸಾಮಿಗೆ ಪುರಾಣದ ಕಾಲದಲ್ಲಿ ಪ್ರಾಗ್ಜ್ಯೋತಿಷ್ಯಪುರವೆಂಬ ಹೆಸರಿತ್ತು. ಎಂದು ತಿಳಿದು ಬರುತ್ತದೆ. ಅದನ್ನು ದೃಢ ಪಡಿಸುವಂತೆ, ಪ್ರಾಗ್ಯೋತಿಷ್ಯ ಪುರವೆಂಬ ಹೆಶರಿನ ಫಲಕ , ಏರ್‌ಪೋರ್ಟಿನಿಂದ ಸಿಟಿಯನ್ನು ತಲಪುವ ಮಾರ್ಗದಲ್ಲಿ ರೈಲ್ವ ಹಳ್ಳಿಗಳ ಸಮೀಪದಲ್ಲ ಕಂಡು ಬರುತ್ತದೆ. ಮುಂದಿನ ಭವಿಷ್ಯವನ್ನು ತಿಳಿಸುವ ಪುರವಾಗಿರಬಹುದು. ಕಾಳಿದಾಸನ ಕಾವ್ಯಗಳಲ್ಲಿ ಈ ಪ್ರಾಗ್ಯೊತಿಷ್ಯ ಪುರವನ್ನ ಕಾಮರೂಪವೆಂದು ಹೆಸರಿಸಿದ್ದನೆ. ಕಾಮರೂಪ ಎಕ್ಸ್‌ಪ್ರೆಸ್ ಎಂಬ ರೈಲು ಗೌಹಾಟಿಯಿಂದ ಹೊರಡುತ್ತದೆ.

ಗೌಹಾಟಿ ಅಸ್ಸಾಂನ ರಾಜಧಾನಿಯಾಗಿದ್ದಿತು. ಆದರೆ ಈಗಿನ ಹೊಸ ರಾಜಧಾನಿ ಡೀಸ್‌ಪುರ್. (Dispur)ಗೌಹಾಟಿ ಅಥವಾ ಗುವಾಹಟಿ ಎಂದರೆ

ಅಡಿಕೆ ಎಂದರ್ಥ. ಅಡಿಕೆ, ತೆಂಗು, ಎಲೆ ವಿಶೇಷವಾಗಿ ಬೆಳೆಯುವ ಪ್ರಾಂತ್ಯ ಗೌಹಾಟಿ. ಅಲ್ಲಿಯ ಹಸಿ ಅಡಿಕೆ ಹೆಸರುವಾಸಿ ಸದಾ ತಾಂಬೂಲವನ್ನು ಜಗಿಯುವ ನಿವಾಸಿಗಳು. ಕತ್ತರಿಸಿದ ಹಸಿ ಅಡಿಕೆಯನ್ನೆ ತಿನ್ನುವುದು.

ಗೌಹಾಟಿಯ ಪ್ರಾಕೃತಿಕ ಲಕ್ಷಣಗಳು ಹೆಚ್ಚಾಗಿ ನಮ್ಮ ಮಲೆನಾಡನ್ನ ಹೋಲುತ್ತದೆ. ರಮಣೀಯವಾದ ಕಾಡು ಮೇಡುಗಳು, ಗುಡ್ಡ ಬೆಟ್ಟಗಳು, ಗಿರಿ ಕಂದರಗಳು, ಪಾತಾಳದಂತಹ ಇಳಿಜಾರು ಪ್ರದೇಶಗಳು, ಮೇಲೆ ಕಾಣುವ ಬೆಟ್ಟಗಳಲ್ಲಿ ಅಲ್ಲಲ್ಲಿ ಕಂಡು ಬರುವ ಜಲಪಾತಗಳು. ನಿಸರ್ಗ ಸೌಂದರ್ಯ ಅಪಾರ. ಅದನ್ನು ಕಂಡು ಆನಂದಿಸುವ ಸೌಭಾಗ್ಯ ನಮಗೆ ಸಿಕ್ಕಿತ್ತು.

ಗೌಹಾಟಿಗೆ ಅತಿ ಸಮೀಪದಲ್ಲಿರುವ ವನ್ಯಮೃಗಗಳ ಧಾಮ ಕಾಜೀರಂಗ ಮೃಗಾಲಯ. ಅಸ್ಸಾಂ. ಪ್ರಾಂತ್ಯ ಖಡ್ಗಮೃಗಗಳಿಗೆ ಹೆಸರುವಾಸಿಯಷ್ಟೇ. ಮೃಗಾಲಯದಲ್ಲಿ ಖಡ್ಗ ಮೃಗಗಳ ಸಮೂಹವನ್ನೆ ನೋಡಬಹುದು. ಅತಿ ವಿಶಾಲವಾದ ಮೃಗಾಲಯದಲ್ಲಿ. ಎಲ್ಲಾ ಮೃಗಾಲಯಗಳಲ್ಲಿರುವಂತೆ ಬೇರೆ ಬೇರೆ ಪ್ರಾಣಿ, ಪಕ್ಷಿಗಳನ್ನು ಕಾಣ ಬಹುದು. ಮೃಗಾಲಯಕ್ಕ ಒಂದೆರಡು ಬಾರಿ ಭೇಟಿ ಕೊಟ್ಟಿದ್ದೆವು. ಮೃಗಾಲಯದ ವಿಸ್ತೀರ್ಣ ಡೆಲ್ಲಿಯ ಜೂ ನಷ್ಟೇ ಇದೆ.

ಕಾಡು ಪ್ರಾಣಿಗಳು ಕೆಲವೊಮ್ಮೆ ಪಟ್ಟಣಕ್ಕೂ ಬರುವುದುಂಟು ಹಾಗೇ ನರಿಗಳು ಕೋಳಿ ಕುರಿಗಳನ್ನು ಹಿಡಿದು ತಿನ್ನಲು ಕೆಲವೊಮ್ಮೆ ಬಂದು ಬಿಡುತ್ತಿದ್ದವು. ಹಾಲು ಚೆಲ್ಲಿದಂತಹ ಬೆಳದಿಂಗಳಿನಲ್ಲಿ. ಅವು ಆಕಾಶದ ಕಡೆ ಮುಖ ಮಾಡಿ ನಿಂತು ಉಳಿಡುತ್ತಿದ್ದುದನ್ನ ಕಣ್ಣಾರೆ ಕಾಣುತ್ತಿದ್ದವು.

ಮೂಲ ನಿವಾಸಿಗಳು ಅಹಾಮಿಗಳೇ ಆದರೂ, ಕಾಲ ಬೆಳೆದಂತೆ, ಅವರ ಭಾಷೆ, ಸಂಸ್ಕೃತಿ ಎಲ್ಲಾ ಚಟುವಟಿಕೆಗಳು ಬೆಂಗಾಲದ ಪ್ರಭಾವಕ್ಕೆ ಒಳಗಾಗಿರುವುದನ್ನು ಚೆನ್ನಾಗಿ ಗಮನಿಸಬಹುದು. ಬೆಂಗಾಲಿಗಳ ಆಡಳಿತಕ್ಕೆ ಒಳಪಟ್ಟೂ ಅದನ್ನು ಈಚೆಗೆ ವಿರೋಧಿಸುವ ಸಾಮರ್ಥ್ಯವನ್ನು ಪಡೆದಿದ್ದಾರೆ.

ಬೋರ್ಜಾಲ್ ಏರ್‌ಪೋರ್ಟ್ ಬಳಿ ಒಂದು ಸಣ್ಣ ಮಿಲಿಟರಿ ಕೇಬೇಸ್.. ಬೆಳಗಿನ ಹೊತ್ತು ನಿಶ್ಯಬ್ದ ವಾತಾವರಣದಲ್ಲಿ ಸಿಪಾಯಿಗಳು ಲೆಫ್ಟ್. ರೈಟ್ ಎಂದು ಮಾಡುವ ಕವಾಯತು, ಒಂದೇ ಗತಿಯಲ್ಲಿ ಓಡುವಾಗ ಆಗುವ

ಬೂಡ್ಸ್ ಕಾಲಿನ ಸದ್ದು ಎಲ್ಲರಿಗೂ ಕೇಳಿಸುತ್ತಿತ್ತು. ಮೆಸ್ ಆಫೀಸ್ ಹತ್ತಿರದಲ್ಲಿತ್ತು.

ಮಿಲಿಟರಿಯವರು ಇದ್ದ ಮೇಲೆ, ಒಂದು ಟೆಂಟ್ ಟಾಕೀಸ್ ಇಲ್ಲದಿದ್ದರೆ ಹತ್ತಿರ ಯಾವ ಥಿಯೇಟರ್ ಇಲ್ಲ. ಟೆಂಟ್ ಟಾಕೀಸ್ ಆದರೂ, ಗೋಡೆ ಕಟ್ಟಡ, ಒಳಗೆ ಕುಳಿತು ಕೊಳ್ಳಲು ಇದ್ದ ಕುರ್ಚಿಗಳು ಇವೆಲ್ಲಾ ಸುವ್ಯವಸ್ಥೆಯಲ್ಲಿದ್ದವು. ಅದರಲ್ಲು ಮಿಲಿಟರಿ ಆಫೀಸರ್ಸ್‌ಗೆ ಬಾಕ್ಸ್..ನಂತರ 'ಎ'ಕ್ಲಾಸ್ ಉಳಿದ ಆಫಿಸರ್ಸ್‌ಗೆ ಹೀಗೆ ತರಿಸುತ್ತಿದ್ದ ಸಿನಿಮಾಗಳೋ.. ಬರೇ ಹಳೇ ಚಲನ ಚಿತ್ರಗಳು ಬರೀ ಕೈಗಿಂತ ಹಿತ್ತಾಳೆ ಕಡಗವೇ ವಾಸಿ ಎನ್ನುವಂತೆ, ಮನರಂಜನೆಗಾಗಿ, ಒಮ್ಮೊಮ್ಮೆ ಆ ಸಿನಿಮಾಗಳನ್ನೇ ನೋಡಬೇಕಾಗುತ್ತಿತ್ತು. 'ಎ'ಕ್ಲಾಸಿನ ಟಿಕೆಟ್ ಬೆಲೆ ಕೇವಲ ೨.೦೦ ರೂಪಾಯಿಗಳು ಅಂದ್ರೆ ನಂಬ್ತೀರಾ?

ಟೆಂಟ್ ಟಾಕೀಸಿನ ಸಮೀಪದಲ್ಲೇ ಒಂದು ಡಿಪಾರ್ಟ್‌ಮೆಂಟಲ್ ಸ್ಟೋರ್ಸ್. ಅಲ್ಲಿ ಎಲ್ಲಾ ಪದಾರ್ಥಗಳೂ ಸಿಗುತ್ತಿದ್ದವು. ಅಲ್ಲಿಂದ ಮನೆಗೆ ನಡೆದು ಬರಲು ಬೇಸರವೆನಿಸಿದರೆ, ಸೈಕಲ್ ರಿಕ್ಷಾಗಳು ಬಾಡಿಗೆಗೆ ಸಿಗುತ್ತಿದ್ದವು. ಇಬ್ಬರು ಕುಳಿತುಕೊಳ್ಳಬಹುದಾದಂತಹ ಸೈಕಲ್ ರಿಕ್ಷಾ. ಕನಿಷ್ಠ ಬಾಡಿಗೆ ಎಷ್ಟು ಗೊತ್ತೇ? ಕೇವಲ ನಾಲ್ಕಾಣೆ! ಯಾರಿಗೂ ಚೌಕಾಸಿ ಮಾಡಬೇಕೆಂದೇ ಅನ್ನಿಸುತ್ತಿರಲಿಲ್ಲ.

ಅಲ್ಲೇ ಪಕ್ಕದಲ್ಲೇ ಸಂತೆ ನಡೆಯುವ ಸ್ಥಳ ಮಲೆಗಾಂವ್. ಆಸುಪಾಸಿನ ಹಳ್ಳಿಯವರೆಲ್ಲಾ ಗುರುವಾರದಂದು ಸಂತೆ ಮಾಳದಲ್ಲಿ ಸೇರಿ ಮಾರಾಟ ನಡೆಸುತ್ತಿದ್ದರು. ತರಕಾರಿ, ಹುಣಸೇ ಹಣ್ಣು ಮೆಣಸಿನ ಕಾಯಿ, ಬೆಲ್ಲ ಇತ್ಯಾದಿಗಳನ್ನು ಮಾರುತ್ತಿದ್ದರು. "ಏಕ್ ಠಕ್ ದುಯಿ ಠಕ"(ಒಂದು ರೂಪಾಯಿ, ಎರಡು ರೂಪಾಯಿ) ಅಷ್ಟೇ... ತಾಜಾ ತರಕಾರಿಗಳು ಅತಿ ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿದ್ದವು. ಪಂಜಾಬಿಗಳು ಬೀರವಾರ(ಗುರುವಾರ) ಎನ್ನುವಂತೆ, ಇಲ್ಲಿಯವರೂ ಬೀರವಾರ ಎನ್ನುವರು. ಕೆಲವರು ಬ್ರಹಸ್ಪತ್ಯವಾರ ಎನ್ನುತ್ತಿದ್ದರು.

ಸುತ್ತಮುತ್ತಲಿನ ಪ್ರದೇಶವೆಲ್ಲಾ ಮಲೇನಾಡಿನಂತೆ ಹಸಿರಿನಿಂದ

ಕಂಗೊಳಿಸುವುದರ ಜತೆಗೆ ಮಾಂಸ್ ಮಚ್ಛಿಗಳ ಮಾರಾಟದ ವಾಸನೆ. ಸಸ್ಯಹಾರಿಗಳಲ್ಲದವರ ಮುಖ್ಯವಾದ ಆಹಾರ ಮಚ್ಛಿ ಅರ್ಥಾತ್ ಮೀನು.

ಮೀನು ಅಲ್ಲಿ ಸುಲಭವಾಗಿ ಸಿಗುವ ಜಲ ಪ್ರಾಣಿ. ಸಣ್ಣ ಸಣ್ಣ ಕೆರೆ ಹೊಂಡಗಳಲ್ಲಿ ಸಹ ಮೀನು ಹಿಡಿದು ಅದನ್ನು ಮಾರಲು ತರುತ್ತಿದ್ದರು. ತಿನ್ನುತ್ತಿದ್ದರು. ಮಳೆಗಾಲದಲ್ಲಿ ಯಾರ ಕೈಯಲ್ಲಿ ನೋಡಲಿ ಮೀನು ಹಿಡಿಯುವ ಬಲೆ.

ಅಸ್ಸಾಮಿನ ಮುಖ್ಯವಾದ ಬೆಳೆ ಭತ್ತ. ಹಾಗಾಗಿ ಅಲ್ಲಿಯ ಮುಖ್ಯವಾದ ಆಹಾರಗಳಲ್ಲಿ ಒಂದು ಅನ್ನ, ಭಾತ್.. ಒಳ್ಳೆಯ ಸಣ್ಣಕ್ಕಿಯನ್ನು ಮನೆ ಮನೆ ಮುಂದೆ ತಂದು ಸಹ ಮಾರುತ್ತಿದ್ದರು. ಹಳಸಿದ ಅನ್ನಕ್ಕೆ ಒಂದು ರಸಾಯನ ಮಿಶ್ರಣಮಾಡಿ, ಹೆಂಡವನ್ನು ತಯಾರಿಸಿ ಕುಡಿಯುತ್ತಾರೆ.

ಗುಡ್ಡ ಗಾಡು ಪ್ರದೇಶವೆಂದರೆ ಹಳ್ಳಿಗಳೇ ಜಾಸ್ತಿ. ಹಳ್ಳಿಯ ವಾಸಿಗಳಲ್ಲಿ ಅಕ್ಷರಸ್ಥರು ಕಡಿಮೆ. ಮೈ ಬಗ್ಗಿಸಿ ದುಡಿಯುವ ಆಸಕ್ತಿಯೂ ಕಡಿಮೆ. ಅವರ ಸೋಮಾರಿತನ ಎಲ್ಲಿಯವರೆಗೆ ಎಂದರೆ, ಕಳ್ಳತನ ಮಾಡಲೂ ಸಹ ಅವರಿಗೆ ಬೇಸರ ಅದನ್ನು ಪ್ರಾಮಾಣಿಕತನ ಎಂದು ಬೇಕಾದರೂ ಹೇಳಬಹುದು.

ನಮ್ಮ ಕಾಂಪೌಂಡಿನ ಅಷ್ಟು ದೊಡ್ಡ ಹಲಸಿನ ಮರದಲ್ಲಿ ನೂರಾರು ಕಾಯಿಗಳು ಬಿಟ್ಟು ಹಣ್ಣಾಗುತ್ತಿದ್ದವಷ್ಟೆ. ಬೇಲಿಯ ಬದಿಗೇ ಮರ ಇತ್ತು. ಹಿಂದಕ್ಕೆ ಕನ್ಸರ್‌ವೇನ್ಸಿ ಸಹ ಇತ್ತು. ಆದರೂ ಒಂದು ದಿನವೂ ಒಬ್ಬನಾದರೂ ಒಂದು ಹಣ್ಣು ಕದ್ದಿದ್ದಿಲ್ಲ. ಮುಂಬಾಗಿಲು ಬಡಿದು, ಕರೆದು "ದೀದೀ ಏಕ್ ಖಟಲ್ ದೀನಾ"ಎಂದು ಕೇಳಿ ಪಡೆಯುತ್ತಿದ್ದರು. ಕಾಯಿಗಳು ಮರದಲ್ಲೇ ಹಣ್ಣಾಗಿ ಉದುರಿ ಬೀಳುತ್ತಿದ್ದುದೂ ಉಂಟು. ಕಾಗೆಗಳು ಕೊಕ್ಕಿನಿಂದ ಕುಕ್ಕಿ ಕುಕ್ಕಿ ತಿಂದು ಅಲ್ಪ ಸ್ವಲ್ಪ ಮುಗಿಸಿತ್ತಿದ್ದವು. ಕೋತಿಗಳು ಬಂದು ಹಾವಳಿ ಮಾಡಿದ್ದನ್ನು ಎಂದೂ ಕಾಣಲೇ ಇಲ್ಲ. ಅಪರೂಪಕ್ಕೊಮ್ಮೆ ಚೆನ್ನಾಗಿರುವ ಹಣ್ಣನ್ನು ನಾವುಗಳೇ ಕಿತ್ತು ತಂದು ತೊಳೆ ಬಿಡಿಸಿ ತಿನ್ನುತ್ತಿದ್ದೆವು. ಅಂಥಾ ಹಣ್ಣನ್ನು ಹಿಂದೆಂದೂ ನಾನು ನೋಡಿರಲೇ ಇಲ್ಲ. ತೊಳೆ ಬಿಡಿಸುವುದು ಎಷ್ಟು ಸುಲಭ ಎಂದರೆ, ಚಾಕು ಈಳಿಗೆ ಮಣೆ ಏನೂ ಬೇಕೇ ಇಲ್ಲ. ಸ್ವಲ್ಪ ಬಲ

ಪ್ರಯೋಗಿಸಿದರೆ ಸಾಕು. ಕಳಿತ ಹಣ್ಣನ್ನು ಸುಲಭವಾಗಿ ಬಿಡಿಸಿ ತೊಳೆಗಳನ್ನು ತೆಗೆಯಬಹುದಾಗಿತ್ತು. ಮೊದ ಮೊದಲು ಹಲಸಿನ ಬೀಜಗಳನ್ನು ಕೂಡಿಸಿಟ್ಟು ಆಗಾಗ್ಗೆ ಹುಳಿ, ಸಾಂಬಾರುಗಳನ್ನು ಮಾಡಿದ್ದಾಯಿತು. ಕ್ರಮೇಣ ಅದೂ ಬೇಜಾರಾಯಿತು. ನೋಡಿ ನೋಡಿಯೇ ಬೇಜಾರಾಗಿತ್ತು.

ಒಮ್ಮೆ ನಾನು ಮುಂಬಾಗಿಲ ಬಳಿ ನಿಂತಿದ್ದೆ. ಮನೆಯ ಮೂಂಬಾಗಿಲು ಸ್ವಲ್ಪ ದೊಡ್ಡದಾಗಿತ್ತು. ಏಕಕಾಲಕ್ಕೆ ಮೂರು ನಾಲ್ಕು ಜನ ಒಟ್ಟಿಗೆ ಒಳಗೆ ಹೋಗಬಹುದು. ಅಷ್ಟು ದೊಡ್ಡದು. ಎದುರಿನಿಂದ ಒಂದು ಹಸು ಮನೆ ಬಾಗಿಲಿಗೆ ಬಂದಿತು. ತಾವಾಗಿಯೇ ಮನೆ ಮುಂದೆ ಬಂದು ನಿಂತ ಹಸುವಿಗೆ ಬೆಲ್ಲವನ್ನಾದರೂ ಕೊಡೋಣ ಎಂದುಕೊಂಡು ಒಳಗೆ ಬಂದು ಬೆಲ್ಲ ಹುಡುಕಿ ತೆಗೆದುಕೊಂಡು ಹೊರಗೆ ಬರುವಷ್ಟರಲ್ಲಿ ಹಸು ಹೊರಟು ಹೋಗಿತ್ತು. ಛೆ ಎಂದುಕೊಂಡು ಒಳಗೆ ಬಂದರೆ ಒಳಗೆ ಊಟದ ಮನೆಯಲ್ಲಿ ಏನೋ ಚರ ಚರ ಸದ್ದು, ಇಣಕಿ ನೋಡಲೂ ಹೆದರಿಕೆ. ಒಂದು ಗಳಿಗೆಯಲ್ಲಿ ಯಾವ ಕಳ್ಳ ಒಳಗೆ ಬಂದು ಸೇರಿ ಕೊಂಡಾದಾನೋ ಅಥವಾ ಹಾವು ಗೀವು ಏನಾದರೂ ಸೇರಿಕೊಂಡಿದ್ದರೆ ಬಡಿಸುವುದು ಹೇಗೆ? ಒಳಗೆ ಹೋಗದೇ ಹಾಗೇ ಆಚೆ ಹೊರಗೇ ನಿಂತಿದ್ದೆ ಊಟದ ಮನೆಯಿಂದ ಆ ಹಸು ಹೋರಕ್ಕೆ ಬಂದಿತ್ತು. ಹಲಸಿನ ಹಣ್ಣಿನ ವಾಸನೆ ಈ ಹಸುವನ್ನು ಒಳಕ್ಕೆ ಕರೆತಂದಿದೆ. ಮೆತ್ತಗಿದ್ದ ಹಣ್ಣನ್ನು ಹಸು ಸುಲಭವಾಗಿ ತಿಂದು. ತನ್ನ ಪಾಡಿಗೆ ತಾನು ಹೊರಟು ಹೋಗಿತ್ತು.

ಅಲ್ಲಿಯ ದನಕರುಗಳು ಅತಿ ಸಾಧು ಪ್ರಾಣಿಗಳು. ಎಲ್ಲು ಎಮ್ಮೆಯನ್ನು ಕಂಡಿದ್ದೇ ಇಲ್ಲ. ಗುಡ್ಡ ಗಾಡಿನ ದನಕರುಗಳು ಎತ್ತರ ಕಡಿಮೆ ದೂರದಿಂದ ನೋಡಿದರೆ, ಹಸು ಯಾವುದು ಕರು ಯಾವುದು ಅಂತ ಗುರುತಿಸುವುದು ಸ್ವಲ್ಪ ಕಷ್ಟ . ಹಾಗೇ ಹಾಲು ಸಹ. ಇಲ್ಲಿಯ ಊಟಿ ಹಸುಗಳಂತೆ ಹೊತ್ತಿಗೆ ಹತ್ತಿಪ್ಪತ್ತು ಲೀಟರ್ ಹಾಲನ್ನು ಸುರಿಸುವುದಿಲ್ಲ. ಸೊಗಸಾದ ಹಸಿರು ಹುಲ್ಲುಗಳನ್ನು ಮೇಯುವುದು. ಹೊತ್ತಿಗೆ ಒಂದು ಒಂದೂವರೆ ಸೇರು ಹಾಲನ್ನು ಕೊಡುವುದು. ಒಬ್ಬ ಒಂದು ಹತ್ತು ಹಸುಗಳನ್ನಾದರೂ ಸಾಕಿದ್ದರೆ ಹಾಲು ಮಾರುವ ವೃತ್ತಿ ಮಾಡಬಹುದು. ಅಪ್ಪಟ ಹಸುವಿನ ಹಾಲು ನೀರು ಬೆರೆಸದೇ

ಹಾಲನ್ನು ತಂದು ಕೊಡುತ್ತಿದ್ದಳು ಕುಂತಿ.

ಕುಂತೀ ಎಂಥಾ ಹೆಸರು, ನನಗೆ ತಿಳಿದರೆ ಪಾಂಡವರ ತಾಯಿ ಕುಂತಿಯ ಹೆಸರನ್ನು ಯಾರೂ ಇಟ್ಟುಕೊಂಡ ನೆನಪಿಲ್ಲ. ಆದರೆ ಅಲ್ಲಿಯ ನಿವಾಸಿ ಗಳು, ಕುಂತಿ, ದಮಯಂತಿ, ಶಕುಂತಲ ಅಂತ ಇಂಥ ಹೆಸರನ್ನು ಇಟ್ಟುಕೊಳ್ಳು ತ್ತಿದ್ದರು.

ಹೊತ್ತಿಗೆ ನಾಲ್ಕಾಣೆ, ಹಾಲಿಗೆ ಬೆಲೆ ಅಷ್ಟೇ. ಹಸುವಿನ ಹಾಲಾದರೂ ಟೀ ಕುಡಿಯಲು ರುಚಿಯಾಗಿರುತ್ತಿತ್ತು.

ನಮಗೆ ಅಲ್ಲಿಗೆ ಹೋದಾಗಲೆ ಕಾಫಿಯ ಚಟ ಬರ ಬಿಟ್ಟು ಹೋ ಗಿತ್ತು. ಇಲ್ಲಿನಂತೆ ಹೊಸ ಕಾಫಿ ಪುಡಿ ಸಿಗುತ್ತಿರಲಿಲ್ಲ,ಯ ನೆಸ್‌ಕಾಫೆ ದಿನಕ್ಕೆ ಒಂದೆ ಸಲ. ಬೆಳಗಿನ ಹೊತ್ತು ಮಾಡಿಕೊಂಡು ಕುಡಿಯುತ್ತಿದ್ದುದು ಉಳಿದಂತೆ ಟೀ. ನಿಮ್ಮ ಮನೆಯ ಟೀ ಕುಡಿಯಲು ತುಂಬಾ ಚೆನ್ನಾಗಿರುತ್ತದೆ. ಎಂದು ಮಿಸೆಸ್ ಮಿಶ್ರಾ ಯಾವಾಗಲೂ ಹೊಗಳುತ್ತಿದ್ದಳು.

ಅಸ್ಸಾಂ ಟೀ ಬೆಳೆಗೆ ಹೆಸರುವಾಸಿಯಷ್ಟೆ. ಡಾರ್ಜಿಲಿಂಗ್‌ನಲ್ಲಿ ಟೀ ಹೆಚ್ಚು ಬೆಳೆಯುತ್ತದೆ ಎಂದು ಭೂಗೋಳ ಶಾಸ್ತ್ರದಲ್ಲಿ ಓದಿದೆವಲ್ಲ. ಅಸ್ಸಾಂ ಟೀ, ವಿಶ್ವ ವಿಖ್ಯಾತ ನಾವು ಅಸ್ಸಾಂನಲ್ಲಿದ್ದಾಗ ಕುಡಿದಷ್ಟು ಟೀಯನ್ನು ಇನ್ನೆಲ್ಲೂ ಕುಡಿಯಲೇ ಇಲ್ಲ. ಆ ರುಚಿ, ಆ ಸ್ವಾದ, ಇಲ್ಲಿಯ ಕೊಂಡು ತಂದು ಮಾಡಿದ ಟೀಗೆ ಇಲ್ಲವೇ ಇಲ್ಲ ಎಂದು ನಮ್ಮವರು, ಟೀ ಮಾಡಿದಾಗಲೆಲ್ಲಾ ಮರೆಯದೇ ಹೇಳುತ್ತಾರೆ. ಈಗ ಮತ್ತೆ ಕಾಫಿಯ ಕುಡಿತದ ಚಟಕ್ಕೇ ಹಿಂತಿರು ಗಿದ್ದೇವೆ. ಅಸ್ಸಾಂನ ಟೀ ಗಾರ್ಡನ್ ನೋಡಲು ಎಷ್ಟು ಸುಂದರವೋ ಹಾಗೆ, ಅಲ್ಲಿಯ ವ್ಯವಸಾಯಗಾರರಿಗೆ ಲಾಭಕರ.

ಕಣಿವೆ ಪ್ರದೇಶದಲ್ಲಿ ಶೆಕೆ ಜಾಸ್ತಿ. ದಿನದ ಇಪ್ಪತ್ತಾನಾಲ್ಕು ಗಂಟೆಯು ಮನೆಯಲ್ಲಿರುವ ಎಲ್ಲಾ ಫ್ಯಾನುಗಳೂ ತಿರುಗುತ್ತಿದ್ದರೂ ಆ ಗಾಳಿ ನಮ್ಮನ್ನು ತಲುಪುತ್ತಲೇ ಇಲ್ಲ ಅಂತೇನಿಸುತ್ತಿತ್ತು. ಹೊರಗೆ ಒಮ್ಮೊಮ್ಮೆ ಉಸಿರು ಕಟ್ಟಿ ದಂತಾಗುತ್ತಿತ್ತು. ಗಿಡಮರಗಳೂ ಸಹ ಅಲುಗಾಡದೆ ಸ್ಥಿರ ಚಿತ್ರದಂತಿರುತ್ತಿ ದ್ದವು. ಧಾರಾಕಾರವಾಗಿ ಸುರಿಯುವ ಬೆವರು. ಮೈಗೆ ಅಂಟಿಕೊಂಡ ಬಟ್ಟೆಗಳು: ಬಹಳ ಕಷ್ಟ ಎನಿಸುತ್ತಿತ್ತು. ಹೊರಗೆ ಬಂದು ನಿಲ್ಲೋಣವೆಂದರೆ ಮಳೆ.

ನಾವೇನೋ ಒಳಗೆ ಮನೆಯಲ್ಲಿರುತ್ತೇವೆ. ಆದರೆ ಅಲ್ಲಿಯ ನಿವಾಸಿಗಳು. ವ್ಯವಸಾಯ ಮಾಡಲು. ಮೀನು ಹಿಡಿಯಲು, ವ್ಯಾಪಾರ ಮಾಡಲು. ಬುಡು ಬುಡು ಓಡಾಡುತ್ತಲೇ ಇರುತ್ತಿದ್ದರು. ಅಡಿಕೆಯ ಹಾಳೆಯಲ್ಲಿ ಬೆತ್ತದಲ್ಲಿ ಹೆಣೆದ ಟೊಪ್ಪಿಗೆಗಳನ್ನು ಧರಿಸಿ ದಿನ ನಿತ್ಯದ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದರು. ಇಲ್ಲದಿದ್ದರೆ ಜೀವನವಡೆಯ ಬೇಕಲ್ಲ.

ಬಹು ಸಂಭ್ರಮ ಅಲ್ಲಿಯ ವಾಸಿಗಳಿಗೆ ಇಲ್ಲಿ ನಮಗಿರುವ ಹಾಗೆ ನೂರೆಂಟು ಹಬ್ಬಗಳಿಲ್ಲ. ಎಲ್ಲರೂ ಸೇರಿ ಸಾಮೂಹಿಕವಾಗಿ ಅಚರಿಸುವ ಹಬ್ಬ ಎಂದರೆ ಬಹೂ ಮತ್ತು ದುರ್ಗಾಷ್ಟಮಿ.

ಬಿಹೂ ಎಂದರೆ ಸುಗ್ಗಿಯ ಹಬ್ಬ. ''ಬಿಹೂ ಬಿಹೂ ಲಾಗಿ ಸೇ ಗಾ ಎಂದು ನಮ್ಮ ಮನೆಯ ಕೆಲಸದವಳು ರಾಶಾ ರಾಗವಾಗಿ ಹಾಡಿ ಕುಣಿಯುತ್ತಿದ್ದಳು. ಅವಳಿಗೆ ಬರುತ್ತಿದ್ದ ಹಾಡು ಅದೊಂದೇ.

ಅಲ್ಲಿ ವರ್ಷದಲ್ಲಿ ನಾಲ್ಕು ಬಿಹೂಗಳು ಬರುತ್ತದೆ. ಅದರಲ್ಲಿ ಮುಖ್ಯವಾದದ್ದು ವೈಶಾಖ ಮಾಸದಲ್ಲಿ ಹೊಸ ವರ್ಷದ ಹಬ್ಬವನ್ನ ಎಲ್ಲರೂ ಆಚರಿಸುತ್ತಾರೆ. ಕರ್ಣಾಟಕ ಆಂಧ್ರ, ಮಹಾರಾಷ್ಟ್ರಯನ್ನರಿಗೆ ಹೊಸವರ್ಷ ''ಯುಗಾದಿ ಆದರೆ ಪಂಜಾಬಿಗಳು ಬೈಸಾಕಿ ಎಂದು ಅಚರಿಸುತ್ತಾರೆ. ಇದು ವೈಶಾಖಿ ಅಷ್ಟೆ.

ಈ ಬಿಹೂ ಹಬ್ಬವನ್ನೂ ಸಾಮೂಹಿಕವಾಗಿ ಆಚರಿಸುತ್ತಾರೆ. ಹೊಸ ಬಟ್ಟೆಗಳನ್ನು ಉಡುತ್ತಾರೆ.

ಅಲ್ಲಿಯ ಸ್ತ್ರಿಯರ ಸಾಂಪ್ರದಾಯಕ ಉಡುಗೆ ಮೇಖಲಾ ಛಾದರ್. ಸ್ವಲ್ಪ ಮಳೆಯಾಳಿಗಳ ಉಡುಗೆಯನ್ನು ಹೋಲುತ್ತದೆ. ಲಂಗದಂತಹ ಒಂದು ತುಂಡನ್ನು ಲುಂಗಿಯರತೆ ಮೈಗೆ ಸುತ್ತಿಕೊಂದು ಮೇಲೆ ಒಂದು ಧಾವಣಿಯನ್ನು ಹೊದ್ದರೆ ಆಯಿತು. ಇದರಲ್ಲೇ ಆಕರ್ಷಕ ಬಣ್ಣಗಳು, ವಿನ್ಯಾಸಗಳು, ಹತ್ತು ರೂಪಾಯಿಗೆ ಒಂದು ಸೆಟ್ ಸಿಗುವ ಹತ್ತಿ ಬಟ್ಟೆಯಿಂದ ಹಿಡಿದು ನೂರಾರು ರೂಪಾಯಿಗಳ ಕಲಾತ್ಮಕ, ಆಕರ್ಷಕ ಅಂಚುಗಳುಳ್ಳ ಮೇಖಲಾ ಛಾದರ್‌ನ್ನೇ ಅಲ್ಲಿಯವರು ಉಡುವುದು. ಗಂಡಸರ ಸಾಂಪ್ರದಾಯಕ ಉಡುಗೆ ಧೋತಿ, ಜುಬ್ಬ ಮೇಲೆ ಒಂದು ಶಾಲು ನೇಯ್ಗೆ ಅಸ್ಸಾಮಿಗಳ ಮುಖ್ಯವಾದ ಒಂದು

ಉದ್ಯೋಗ. ಅಸ್ಸಾಮಿ ಸಿಲ್ಕ್ ಬಟ್ಟೆಗಳು ಅತಿ ದುಬಾರಿ. ಕಚ್ಚಾ ರೇಶ್ಮೆಯ ಸೀರೆಗಳು ಸಾಮಾನ್ಯವಾಗಿ ತಿಳಿ ಬಣ್ಣಗಳಲ್ಲಿಯೇ ಇರುತ್ತವೆ. ಸುಮಾರು ಎರಡು ಸಾವಿರದಿಂದ ನಾಲ್ಕಾರು ಸಾವಿರ ರೂಗಳವರೆಗೆ ಅದರ ಬೆಲೆ ಇದೆ. ಹತ್ತಿಯ ಕೈ ಮಗ್ಗದ ಬಟ್ಟೆಗಳನ್ನು ಎಲ್ಲರೂ ಅವರವರ ಮನೆಯಲ್ಲೇ ತಮಗೆ ಬೇಕಾದಂತಹ ಡಿಸೈನ್‌ಗಳತ್ತಿ ನೇಯುತ್ತಾರೆ. ಸಾಮಾನ್ಯವಾಗಿ ನೇಯ್ಗೆ ಮಗ್ಗ ವಿಲ್ಲದ ಮನೆಯಿಲ್ಲ. ಹೆಣ್ಣು ಮಕ್ಕಳು ನಮ್ಮ ಕಡೆ ಕಸೂತಿ, ಹೊಲಿಗೆ, ಹೆಣಿಗೆ, ಕಲಿಯುನಂತೆ ಅಲ್ಲಿಯವರು ನೇಯ್ಗಯನ್ನು ಕಲಿತೇ ಕಲಿಯುತ್ತಾರೆ. ಹೆಣ್ಣು ಮಕ್ಕಳ ಮದುವೆಗಳಲ್ಲಿ ನೇಯ್ಗೆ ಮಗ್ಗವನ್ನು ಹೆಣ್ಣು ಮಕ್ಕಳಿಗೆ ಬಳು ವಳಿಯಾಗಿ ಕೊಡುವುದು ಮುಖ್ಯವಾದ ಖಡ್ಡಾಯ ಪದ್ದತಿಗಳಲ್ಲಿ ಒಂದು.

ನಮ್ಮ ಮನೆಯ ಕೆಲಸದವಳೂ ನನ್ನ ಹಳೇ ಸೀರೆಗಳನ್ನು ತೆಗೆದು ಕೊಂದು ಹೋಗಿ ಸೊಗಸಾಗಿ ಧರಿ(ಜಮಖಾನ)ಗಳನ್ನು ನೇಯ್ದು ತಂದು ಕೊಟ್ಟಳು. ಹಳೆಯ ಸಿಲ್ಲಿನ ಸೀರೆಗಳಿದ್ದರಂತೂ, ಧರಿಯ ಅಂದ ಸೊಗಸು ಇನ್ನು ಹೆಚ್ಚುತ್ತದೆ. ಚಿಕ್ಕ ಚಿಕ್ಕ, ದೊಡ್ಡ ದೊಡ್ಡ ಧರಿಗಳನ್ನು ಹಳೇ ಬಟ್ಟೆಗಳು ಇದ್ದಂತೆ ಕಲಾತ್ಮಕವಾಗಿ ಹೆಣೆಯ ಬಹುದು.

ಇಲ್ಲಿ ಗಣಪತಿ ಹಬ್ಬದಲ್ಲಿ ಪೆಂಡಾಲ್ ಹಾಕಿ ಸಡಗರ ಸಂಭ್ರಮ ಪಡುವಂತೆ ಅಲ್ಲಿ ಬಿಹು ಹಬ್ಬದ ಸಡಗರ. ನಮ್ಮ ವಾರಗಟ್ಟಲೆ ಕಾರ್ಯಕ್ರಮ ಗಳು ನಡೆಯುತ್ತವೆ. ಉದ್ಘಾಟನೆಯಿಂದ ಶುರುವಾದ ಕಾರ್ಯಕ್ರಮಗಳು, ಸಾಮಾನ್ಯವಾಗಿ, ಸಾಂಪ್ರದಾಯಿಕ ಹಾಡು,ಕಣ್ಣಿಗೆ ಕಟ್ಟುವಂಥದು. ನೃತ್ಯಗಳು ಬಿಹು ಕುಣಿತ ಇವುಗಳಿಂದ ಶೋಭಿಸುತ್ತವೆ.

ಸುಗ್ಗಿಯ ಹಬ್ಬ, ಹಬ್ಬದ ಹಿಗ್ಗು ಜನರಿಗೆ ಮೋಜು ಅದರಲ್ಲು ಪಡ್ಡೆ ಹುಡುಗ ಹುಡುಗಿಯರಿಗೆ ಯಾವ ಕಾಯಿದೆ ಕಟ್ಟಳೇಗಳಿಲ್ಲ. ಹೋಳಿ ಹಬ್ಬ ದಂತೆ. ಯಾರು ಯಾರ ಜತೆಯಾದರೂ ಬೆರೆಯ ಬಹುದು. ಕುಣಿಯ ಬಹುದು. ಮೋಜು ಮಾಡಬಹುದು. ಎಷ್ಟೋ ವೇಳೆ ಅತಿರೇಕಕ್ಕೆ ಹೋಗುವ ಸಾಧ್ಯತೆಗಳಿವೆ. ಆದಗೆ ಇದು ಪರ್ವಕಾಲ. ಯಾರೂ ಯಾವುದಕ್ಕೂ ಕೇರ್ ಮಾಡದಿರುವ ವಯಸ್ಸು. ಅಲ್ಲದೇ ನಿಬಂಧನೆಗಳಿಲ್ಲ. ಒಟ್ಟಾಗಿ ಕಾಲ ಕಳೆ ಯುವ ಅವಕಾಶ ಇರುತ್ತದೆ.

ನಮ್ಮ ಕೆಲಸದವಳು ರಾಶಾಳಿಗೆ ಒಬ್ಬಳು ಮಗಳು, ಒಬ್ಬ ಮಗ. ಮಗ ಸ್ಕೂಲಿಗೆ ಹೋಗುತ್ತಿದ್ದ. ಮಗಳು ಅವರಿವರ ಮನೆಯಲ್ಲಿ ಕಸ ಮುಸುರೆ ಕೆಲಸ ಮಾಡುತ್ತಿದ್ದಳು. ಆ ಹುಡುಗಿಯ ಹೆಸರು, ಪುತೋಲ್ ಎಂದು ಹೇಳಿದ್ದಳು. ಬಹುಶಃ ಪುತ್ಥಳಿ ಎಂದಿರಬೇಕು, ಎಂದು ನಾನು ಭಾವಿಸಿದ್ದೆ. ಸುಮಾರು ಹನ್ನೆರಡು ವರ್ಷದ ಹುಡುಗಿ ನೋಡಲು ಚನ್ನಾಗಿದ್ದಳು. ಇತರ ಆಫಿಸರ್ಸ್‌ಗಳ ಮನೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಹಿಂದಿಯಲ್ಲಿ ಮಾತನಾಡುವುದನ್ನು ಕಲಿತಿದ್ದಳು. ಅನಕ್ಷರಸ್ತರು ಜಾಸ್ತಿ. ಸೋಮಾರಿತನ ದಿಂದ ಕುಳಿತು ಅಲ್ಲಲ್ಲಿ ಕಾಲ ಕಳೆಯುವ ಆಸೆಯೇ ಹೊರತು, ಶ್ರದ್ದೆಯಿಂದ ವಿದ್ಯೆ ಕಲಿಯುವ ಆಸೆ ಯಾರಿಗೂ ಇರಲಿಲ್ಲ ಎಂದೇ ಅನಿಸುತ್ತದೆ. ಅಲ್ಲಿಯ ಸ್ಕೂಲು ಕಾಲೇಜು ಗಳಲ್ಲಿ ಸಾಮಾನ್ಯವಾಗಿ ಹೊರ ಪ್ರಾಂತ್ಯದವರೇ ಉಪಾಧ್ಯಾಯರುಗಳು.

ಒಂದು ದಿನ ರಾಶಾ ತರಾತುರಿಯಾಗಿ ಬಂದವಳು, ಇನ್ನೊಂದು ವಾರ ನಾನು ಕೆಲಸಕ್ಕೆ ಬರುವುದಿಲ್ಲ. ನನ್ನ ಮಗಳು ಪುಷ್ಪವತಿಯಾಗಿದ್ದಾಳೆ ಎಂದಳು. ಆ ಭಾಷೆ ನೋಡಿ, ಹುಡುಗಿ ದೊಡ್ಡವಳಾದಳು ಎನ್ನುವುದನ್ನು ಪುಷ್ಪವತಿ ಎನ್ನುವುದು ಪುರಾಣ ಕತೆಗಳಲ್ಲಿ ಉಲ್ಲೇಖವಾಗಿದೆ. ಸಂಸ್ಕೃತದ ಎಷ್ಟೋ ಪದಗಳು ಆಡು ಭಾಷೆಗಳಲ್ಲಿ ಹಾಸು ಹೊಕ್ಕಿರುವುದನ್ನು ಗಮನಿಸಿದ್ದೆ. ಆಧುನಿಕತೆಯ ಸೋಗಿಗೆ ಮಾರು ಹೋಗದ ಮುಗ್ದ ಜನರು, ಆ ಪದಗಳನ್ನೆ ಉಪಯೋಗಿಸುವುದನ್ನು ಗಮನಿಸಿ ಒಂದು ರೀತಿಯ ಖುಷಿಯಾಗಿತ್ತು.

ಅವಳು ತುಂಬಾ ಸ್ವಾಭಿಮಾನಿ. ಹಣ ಕೇಳುವುದಿಲ್ಲವೆಂದು ನನಗೆ ಗೊತ್ತಿ. ನಾನೇ ಅವಳ ಕೈಗೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟು ನಿನ್ನ ಮಗಳಿಗೆ ನನ್ನ ಉಡುಗೊರೆ ಎಂದು ಹೇಳಿದೆ.

ಆ ನಂತರದ ಕಥೆ ಕೇಳಿ, ಆ ಹುಡುಗಿ ಇನ್ನೂ ಚಿಕ್ಕವಳು ಎಂದು ನಾನು ಭಾವಿಸಿದ್ದರೆ, ಆ ಹುಡುಗಿಗೆ ಒಬ್ಬ ಪ್ರೇಮಿ ಹುಟ್ಟಿಕೊಂಡ. ಬಿಹೂ ಹಬ್ಬದ ಸಮಯದಲ್ಲಿ ಆ ಹುಡುಗಿ ತನ್ನ ಪ್ರೇಮಿಯೊಂದಿಗೆ ನಾಲ್ಕಾರು ದಿನ ಹೊರಗೆ ಲ್ಲೋ ಇದ್ದು ಕಳೆದು ಬಂದಳು. ಆ ನಂತರ ಕೆಲವೇ ದಿನಗಳಲ್ಲಿ ಆ ಹುಡುಗಿಗೆ ಮದುವೆಯಾಯಿತು. ಆಗಿನ್ನೂ ಆ ಪುತೋಲ್‌ಗೆ ಕೇವಲ ಹದಿನಾಲ್ಕು ವರ್ಷ. ಒಂದು ವರ್ಷದ ಒಳಗೆ ಆ ಪುತ್ಥಳಿಗೊಂದು ಪುತ್ಥಳಿ ಹುಟ್ಟಿತ್ತು.

ಇಷ್ಟು ಚಿಕ್ಕೋಳಿಗೆ ಮದುವೆ ಯಾಕೆ? ಸುಮ್ಮನೇ ಮನೆತುಂಬಾ ಮಕ್ಕಳು ಹುಟ್ಟುತ್ತವೆ ಅಷ್ಟೇ ಎಂದು ನಾನು ಎಷ್ಟೋ ಹೇಳಿದ ಮಾತು ರಾಶಾಳ ಕಿವಿಗೆ ಬಿದ್ದಿರಲೇ ಇಲ್ಲ. ಅವಳ ಸಡಗರವೇ ಸಡಗರ. ಇದಕ್ಕೇನು ಹೇಳೋಣ?

ನಮಗೆ ಮದುವೆಯಾಗಿ ಎರಡು ವರ್ಷ ಕಳೆದಿತ್ತು. ನಮಗೆ ಇನ್ನು ಮಕ್ಕಳಾಗಿರಲಿಲ್ಲ. ಆಗಿಲ್ಲವೆಂಬ ಚಿಂತೆಯೂ ಇರಲಿಲ್ಲ. ಮಕ್ಕಳು ಮರಿ ಎಂದರೆ ಸಾಕುವುದು ಬೆಳೆಸುವುದು ಕಷ್ಟ. ನಾವು ಇರುವುದು ಕರ್ನಾಟಕ ದಿಂದ ಸಾವಿರಾರು ಮೈಲಿ ದೂರದಾಚೆ. ನಮ್ಮವರು ಎನ್ನುವರು ಹತ್ತಿರದಲ್ಲಿ ಯಾರೂ ಇಲ್ಲ. ನಾವಿಬ್ಬರೇ ಹಾಯಾಗಿದ್ದೆವು.

ಗೌಹಾಟಿಯುಂದ ಬೆಂಗಳೂರಿಗೆ ರೈಲಿನಲ್ಲೇ ಬರುವುದಾದರೆ ಸುಮಾರು ನಾಲ್ಕು ದಿನಗಳ ಪ್ರಯಾಣ. ಗೌಹಾಟಿಯಿಂದ ಕಲ್ಕತ್ತಾಕ್ಕೆ ಒಂದು ರಾತ್ರಿ, ಒಂದು ಹಗಲು ಪ್ರಯಾಣ ಮಾಡಬೇಕು. ನೋಡೋಕೆ ಕೇಳೋಕೆ ಹತ್ತಿರ ಎನಿಸಿದರೂ ಸುತ್ತಿ ಬಳಸಿಕೊಂಡು ಕಲ್ಕತ್ತಾಕ್ಕೆ ತಲಪಲು ಸಾಕಷ್ಟು ಸಮಯ ಬೇಕಾಗುತ್ತಿತ್ತು. ಸುಮಾರು ಇಪ್ಪತ್ತೆರಡು ಗಂಟೆಗಳ ಪ್ರಯಾಣ.

ಕಲ್ಕತ್ತಾ ಸೇರಿದ ನಂತರ ನಮಗೆ ತಿಳಿಯಿತು. ಏನೋ ಕಾರಣದಿಂದ ಕೆಲವು ಟ್ರೈನುಗಳನ್ನು ಕ್ಯಾನ್ಸಲ್ ಮಾಡಿದ್ದರು. ಹಾಗಾಗಿ ಆ ರಾತ್ರಿ ಕಲ್ಕತ್ತಾದ ಹೌರಾ ಸ್ಟೇಷನ್ನಿನ ಫಸ್ಟ್ ಕ್ಲಾಸ್ ವೈಟಿಂಗ್ ರೂಂನಲ್ಲಿ ಉಳಿಯ ಬೇಕಾಯಿತು. ಬ್ರಿಟಿಷರ ಕಾಲದಲ್ಲಿ ಕಟ್ಟಿಸಿದ ಅತಿ ದೊಡ್ಡ ವೈಟಿಂಗ್ ರೂಂ, ಕರಿ ಮರದ ಫರ್ನಿಚರ್‌ಗಳು, ಚೆನ್ನಾಗಿ ಗಾಳಿ ಬೆಳಕು ಓಡಾಡುವ ಟಾಯ್ಲೆಟ್ ಗಳು. ಯಾವ ಅನಾನುಕೂಲತೆಯೂ ಇರಲಿಲ್ಲವಾದ್ದರಿಂದ ಕರಿ ಮರದ ಈಸಿ ಚೇರ್ ಮೇಲೇ ರಗ್ಗು ಹೊದ್ದು ಮಲಗಿದೆ. ರೈಲುಗಳಿಲ್ಲದ್ದರಿಂದ ವೈಟಿಂಗ್ ರೂಂ ತುಂಬಿ ಹೋಯಿತು. ಆದರೂ ಆ ಸಂತೆಯಲ್ಲಿಯೂ ನನಗೆ ಸೊಗಸಾಗಿ ನಿದ್ದೆ ಬಂದಿತ್ತು. ಮಾರನೇ ದಿನ ಕಲ್ಕತ್ತಾದಿಂದ ಮದ್ರಾಸಿಗೆ ಹೊರಡುವ ಹೌರಾ ಎಕ್ಸಪ್ರೆಸ್ ಹತ್ತಿದೆವು. ಹೂಗ್ಲೀ ನದಿಯ ಮೇಲೆ ಕಟ್ಟಿರುವ ಸೇತುವೆಯೇ ಹೌರಾ ಬ್ರಿಡ್ಜ್. ಉತ್ತರ ಪ್ರದೇಶದಲ್ಲಿ ಹರಿಯುವ ಗಂಗಾನದಿಯನ್ನೇ ಪ. ಬಂಗಾಳದಲ್ಲಿ ಹರಿಯುವಾಗ ಹೂಗ್ಲೀ ನದಿ ಎಂದು ಕರೆಯುತ್ತಾರೆ. ಉತ್ತರ ಭಾರತದ ನದಿಗಳು ಆಳವಾದ ವಿಶಾಲವಾದ ನದಿಗಳು.

ನಂತರ ನಮಗೆ ಸಿಗುವ ನದಿ ಮಹಾನದಿ. ಹೆಸರಿಗೆ ತಕ್ಕಂತೆ ಮಹಾ ನದಿಯೂ ಮಾಹಾನದಿಯೇ.. ಅದಕ್ಕೆ ಬೇರೆ ಉಪಮೇಯೇ ಇಲ್ಲ. ಮಹಾ ನದಿಗೆ ಕಟ್ಟಿರುವ ಸೇತುವೆ ಅತಿ ದೊಡ್ಡ ಸೇತುವೆಯಂತೆ. ಅಂಥಾ ಮಹಾ ನದಿಯನ್ನು ಹೊಂದಿರುವ ನಾವು ಪುಣ್ಯವಂತರು ಅಂದನ್ನಿಸಿತು. ಮಹದಾನಂದದಿಂದ ಕಿಟಕಿಯ ಬಳಿ ಕುಳಿತು, ಮೇಲಿನಿಂದ ಕೆಳಗೆ ಝಳು ಝಳು ಹರಿಯುವ ನೀರನ್ನು ನೋಡುತ್ತಲೇ ಇದ್ದೆ.

ಅಸ್ಸಾಂನಿಂದ ಹೊರಟು ಪ. ಬಂಗಾಳ, ಬಿಹಾರ ಹಾಗೂ ಒರಿಸ್ಸಾ ಪ್ರಾಂತ್ಯಗಳನ್ನು ದಾಟಿ ನಾವು ಈಗ ಆಂಧ್ರ ಪ್ರದೇಶಕ್ಕೆ ಬಂದಿದ್ದೆವು. ಅಲ್ಲಿ ನಮಗೆ ಗೋದಾವರಿ ಮಾತೆಯ ದರ್ಶನವಾಯಿತು. ದೋಣಿ ಸಂಚಾರಕ್ಕೆ ಗೋದಾವರಿ ನದಿ ಪ್ರಸಿದ್ಧಿ ಎಂದು ಕೇಳಿದ್ದೆ. ಆದರೆ ಒಂದರ್ಧ ಭಾಗವೆಲ್ಲಾ ಮರಳಿನಿಂದ ಆವೃತವಾಗಿದ್ದು, ಸಹ, ಗೋದಾವರಿ ಎಂಥಾ ದೊಡ್ಡ ನದಿ ಎಂದು ಅನ್ನಿಸುವಷ್ಟರ ಮಟ್ಟಿಗೆ ದೊಡ್ಡದಾಗಿ ಹರಿಯುತ್ತಿದ್ದಳು. ನದಿಯ ಪಾತ್ರ ಅತಿ ದೊಡ್ಡದು. ವಿಜಯ ವಾಡದ ಸಮೀಪಕ್ಕೆ ಬರುತ್ತಿದ್ದಂತೆಯೇ ದೂರದಲ್ಲಿ ಬಂಗಾಳಕೊಲ್ಲಿಯು ಗೋಚರಿಸುತ್ತದೆ. ಆದರೆ ಮದ್ರಾಸು ಹತ್ತಿರವಾಗುತ್ತದ್ದಂತೆ, ತೀರ ಪ್ರದೇಶದ ಶಕೆಯನ್ನು ಅನುಭವಿಸುತ್ತೇವೆಯೇ ಹೊರತು, ಹತ್ತಿರದಲ್ಲೆಲ್ಲೂ ಸಮುದ್ರ ಕಾಣುವುದಿಲ್ಲ. ಸಮುದ್ರವನ್ನು ನೋಡ ಬೆಕೇನಿಸಿದರೆ ಮೆರೂನ್ ಬೀಚ್ ತನಕ ಹೋಗಬೇಕು.

ಆ ರಾತ್ರಿ ಮದ್ರಾಸಿನ ರೈಲ್ವೆ ಸ್ಟೇಷನ್ನಿನ ಫಸ್ಟ್‌ಕ್ಲಾಸ್ ವೈಟಿಂಗ್ ರೂಂನಲ್ಲಿದ್ದು ಮಾರನೇ ದಿನ ಬೆಳಿಗ್ಗೆ ಬೆಂಗಳೂರಿಗೆ ಹೊರಟ ಬ್ರಂದಾವನ್ ಎಕ್ಸ್‌ಪ್ರೆಸ್ ಹತಿದೆವು. ಅದು ಎಮರ್ಜೆನ್ಸಿ ಕಾಲವಾದುದರಿಂದಲೋ ಏನೋ ರೈಲ್ವೆ ಇಲಾಖೆಯ ಎಲ್ಲಾ ವರ್ಗಗಳಲ್ಲೂ ಸುವ್ಯವಸ್ಥೆ ಕಂಡು ಬರುತ್ತಿತ್ತು. ನಾಲ್ಕೈದು ದಿನಗಳ ರೈಲು ಪ್ರಯಾಣದಲ್ಲಿ ಯಾವ ಕುಂದು ಕೊರತೆ ಇರಲಿಲ್ಲ. ಅನಾನುಕೂಲತೆ ಇರಲಿಲ್ಲ. ನಿಷ್ಠೆಯಿಂದ ನಿಯಮದಿಂದ ರೈಲ್ವೇ ಆಡಳಿತ ವರ್ಗದವರೂ, ಕೆಲಸಗಾರರೂ, ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸಿ, ರೈಲ್ವೇ ಬೋಗಿಗಳನ್ನು, ರೈಲ್ವೇ ನಿಲ್ದಾಣಗಳನ್ನು ಶುಚಿಯಾಗಿಟ್ಟಿದ್ದರು. ಅದರಿಂದ ಪ್ರಯಾಣ ಬೇಸರವೆನಿಸಿರಲಿಲ್ಲ. ಇಂಥ ಸುವ್ಯವಸ್ಥೆ ಇದ್ದರೆ, ರೈಲು

ಪ್ರಯಾಣ ಹಿತಕರವಾಗಿರುತ್ತದೆ.

ಅಲ್ಲದೆ ನಮ್ಮವರಿಗೆ ರೈಲು ಪ್ರಯಾಣ ಎಂದರೆ ಇಷ್ಟ. ಭಾರತ ಸರಕಾರದವರು ಎರಡು ವರ್ಷಗಳಿಗೊಮ್ಮೆ ಸ್ವಂತ ಊರಿಗೆ ಹೋಗಿಬರಲು ಪ್ರಯಾಣದ ಭತ್ಯೆಯನ್ನು ನೀಡುತ್ತಿತ್ತು. ಎರಡು ವರ್ಷಗಳ ನಂತರ ನಮ್ಮೂರಿಗೆ ಹೊರಟಿದ್ದೆವು. ಬೆಂಗಳೂರಿನಲ್ಲಿ ನಮ್ಮವರ ತಂದೆ ಮನೆ ಇತ್ತು, ನಮಗಾಗಿ ಕಾಯುತ್ತಾ ಇದ್ದವರಿಗೆ ನಮ್ಮನ್ನ ಕಂಡು ನಿರಾಸೆಗಳು, ಒಂದು, ಅವರುಗಳು ನಾನು ಗರ್ಭಿಣಿ ಇರಬಹುದೆಂದು ಭಾವಿಸಿದಂತೆ, ಇನ್ನೊಂದು, ಗೌಹಾಟಿಯ ಧಗೆಯ ತಾಪಕ್ಕೆ ನಮ್ಮ ಬಣ್ಣ ಬದಲಾಗಿ ಹೋದದ್ದು. ಗೌರವರ್ಣದಿಂದ ನಸುಕಂದು ಬಣ್ಣಕ್ಕೆ ತಿರುಗಿ ಹೋಗಿದ್ದೆವು. ನಮ್ಮ ಅತ್ತೆ ಮನೆಯವರಿಗೆ ಸ್ವಲ್ಪ ಗೌರವರ್ಣದ ಮೇಲಿನ ಅಭಿಮಾನ ಜಾಸ್ತಿ.

"ಇನ್ನು ಸಾಕು ಆ ಊರಿನ ಸಹವಾಸ. ಬೇರೆ ಊರಿಗೆ ವರ್ಗ ಮಾಡಿಸಿಕೊಳ್ಳಿ ಎಂದು ಹೇಳುವವರೇ.. ನನಗೇನು ಅಸ್ಸಾಮಿನ ಸಹವಾಸ ಬೇಸರವನ್ನು ತಂದಿರಲಿಲ್ಲ. ಸರ್ಕಾರಿ ಕೆಲಸದಲ್ಲಿ ಇರುವವರಿಗೆ, ಇದು ಒಂದು ಅವಕಾಶ ಇಲ್ಲದಿದ್ದರೆ ಯಾರೂ ಸುಮ್ಮನೇ ಬೇರೆ ಬೇರೆ ಊರನ್ನು ಸುತ್ತುವುದಿಲ್ಲ ಅಂತ ನನ್ನ ಅಭಿಪ್ರಾಯ. ಅಲ್ಲದೇ ಯಾವ ಊರಿಗೆ ವರ್ಗ ಮಾಡಿದರೆ ಆ ಊರಿಗೆ ಯಾವ ಆಕ್ಷೇಪಣೆ ಇಲ್ಲದೇ ಹೋಗಿರಬೇಕು.

ಅಲ್ಲಿಂದ ನಮ್ಮ ತವರು ಮನೆಯಲ್ಲಿ ಕೇವಲ ಒಂದು ವಾರವಿದ್ದು, ಮತ್ತೆ ಗೌಹಾಟಿಗೆ ಪ್ರಯಾಣ ಬೆಳೆಸಿದೆವು. ಒಂದು ತಿಂಗಳ ರಜೆಯಲ್ಲಿ ಹೆಚ್ಚು ಕಡಿಮೆ ಹತ್ತು ದಿನಗಳು ಪ್ರಯಾಣಕ್ಕೆ ಖರ್ಚಾಗಿದ್ದವು.

ದುರ್ಗಾಷ್ಟಮಿ ಹಬ್ಬದ ದಿನಗಳು ಹತ್ತಿರವಾಗುತ್ತಿದ್ದವು. ದುರ್ಗಾಪೂಜೆಯ ಆಚರಣೆ ಕಲ್ಕತ್ತಾದ ಪ್ರದೇಶದ ಜನರಿಗೆ ಅನಾದಿ ಕಾಲದಿಂದಲೂ ಇದೆ. ಹಾಗೇ ಕಾಳಿಪೂಜೆಯನ್ನು ಸಹ ಆಚರಿಸುತ್ತಾರೆ.

ಈ ಕಡೆ ಗಣಪತಿಯ ಮಣ್ಣಿನ ವಿಗ್ರಹಗಳನ್ನು ಮಾಡಿಡುವಂತೆ, ಅಲ್ಲಿ ದುರ್ಗಿಯ ವಿಗ್ರಹವನ್ನ ತಿಂಗಳ ಮುಂಚೆಯಿಂದ ಮಾಡಿಡುತ್ತಾರೆ. ಇಲ್ಲಿ ಗಣಪತಿಯ ಜತೆಗೆ ಗೌರಿ ಮಾತ್ರ. ಅದೂ ಅಲಂಕೃತವಾದ ಸ್ವರ್ಣ ಗೌರಿಯ ತಲೆಯ ಭಾಗ ಮಾತ್ರ.

ಅಲ್ಲಿಯ ದುರ್ಗೆಯ ವೈಶಿಷ್ಟ್ಯ ಹದಿನೆಂಟು ಕೈಗಳಿರುತ್ತವೆ. ಕಿಡಿಗಣ್ಣು ಬಿಡುತ್ತಾ, ನಾಲಿಗೆ ಹಿರಿದುಕೊಂಡು ಮಹಿಷಾಸುರನನ್ನು ಕೊಲ್ಲುವ ಭಂಗಿಯಲ್ಲಿರುತ್ತದೆ. ಮಣ್ಣಿನ ವಿಗ್ರಹ ಸುಮಾರು ೪,೫ ಅಡಿಗಳ ಎತ್ತರದ ವಿಗ್ರಹ ದುರ್ಗೆಯದಾದರೆ, ದುರ್ಗೆಯ ಎಡಬಲಗಳಲ್ಲಿ ಲಕ್ಷ್ಮಿ, ಸರಸ್ವತಿ ವಿನಾಯಕ, ಷಣ್ಮುಖರ ಮಣ್ಣಿನ ವಿಗ್ರಹಗಳನ್ನು ಇಟ್ಟಿರುತ್ತಾರೆ. ವಿನಾಯಕನ ವಾಹನ ಮೂಷಿಕ , ಷಣ್ಮುಖನ ವಾಹನ ನವಿಲು, ಸರಸ್ವತಿಯ ವಾಹನ ಹಂಸವಾದರೆ, ಲಕ್ಷ್ಮಿಯ ವಾಹನ ಗೂಬೆ. ಗೂಬೆಯಿಲ್ಲದೇ ಲಕ್ಷ್ಮಿಯ ವಿಗ್ರಹವನ್ನು ಅವರುಗಳು ಮಾಡುವುಜೇ ಇಲ್ಲ. ಲಕ್ಷ್ಮಿಯೊಂದಿಗೆ ಗೂಬೆಯೂ ಪೂಜೆಗೆ ಸಲ್ಲುತ್ತದೆ. ಆ ನಾಡಿನಲ್ಲಿ ನಾನು ನೋಡಿದ್ದು ಅಲ್ಲೇ ಮೊದಲು. ನಾವು ವಾಸವಾಗಿದ್ದ ಕ್ವಾರ್ಟರ್ಸ್‌ನಲ್ಲಿ ನಮಗಿಂತ ಮುಂಚೆ ಇದ್ದ ಬೆಂಗಾಲಿಯೊಬ್ಬರು ಲಕ್ಷ್ಮಿ ಪೂಜೆ ಮಾಡಿಸಿದ್ದರಂತೆ ಆ ಮಣ್ಣಿನ ವಿಗ್ರಹವನ್ನು ಅಲ್ಲೇ ಬಿಟ್ಟು ಹೋಗಿದ್ದರು. ನಿಂತಿರುವ ಲಕ್ಷ್ಮಿಯ ಕಾಲ ಬಳಿ ಗೂಬೆ! ಗೂಬೆಗೂ ಮಹತ್ವ ಕೊಡುವ ಪ್ರದೇಶವಿದೆ. ನಮ್ಮ ಭಾರತದಲ್ಲಿ ಅಲ್ಲವೇ?

ನಮ್ಮ ಕಡೆಯಂತೆ ನವರಾತ್ರಿ ಆಶ್ವೀಜ ಪಾಡ್ಯದಿಂದ ಪ್ರಾರಂಭವಾಗುವುದಿಲ್ಲ. ಸರಸ್ವತೀ ಪೂಜೆಯ ದಿನ, ದುರ್ಗೆಯನ್ನು ಆವಾಹನೆ ಮಾಡ್ಡಿ ಪೂಜಿಸುತ್ತಾರೆ. ಮನೆ ಮನೆಯಸಲ್ಲಿ ನಮ್ಮಂತೆ ಪೂಜೆ ಮಾಡುವುದಿಲ್ಲ. ಸಾಮೂಹಿಕ ಪೂಜೆಗೇ ಇಲ್ಲಿಯ ಪ್ರಾರ್ಥನೆ ಗಣಪತಿಯನ್ನು ಕೂರಿಸುವಂತೆ ಸಾರ್ವಜನಿಕರು ಸಂಘ, ಸಂಸ್ಥೆಗಳಲ್ಲಿ ಪೆಂಡಾಲ್ ಹಾಕಿ, ದುರ್ಗೆಯನ್ನು ಲಕ್ಷ್ಮಿ, ಸರಸ್ವತಿ, ಗಣೇಶ, ಷಣ್ಮುಖರೊಂದಿಗೆ ನಾನಾ ರೀತಿಯ ಅಲಂಕಾರಗಳೊಂದಿಗೆ ಕೂರಿಸುತ್ತಾರೆ. ಮೈಕುಗಳು ಇಡೀ ದಿವ ಅರಚಿಕೊಳ್ಳುತ್ತಿರುತ್ತವೆ. ದುರ್ಗಾಷ್ಟಮಿ, ಮಹಾನವಮಿ, ಹಾಗೂ ವಿಜಯ ದಶಮಿಯ ದಿನಗಳಂದು ವಿಶೇಷ ಪೂಜೆ. ಸಾಯಂಕಾಲದ ಹೊತ್ತಾ ಧೂಪಾರತಿ ಎತ್ತುತ್ತಾರೆ, ಕೈಯಲ್ಲಿ ಧೂಪದಾರತಿಯನ್ನು ಹಿಡಿದು ನರ್ತಿಸುತ್ತಾ ಆರತಿ ಎತ್ತುವುದು. ನಂತರ ಬರುವ ಹುಣ್ಣಿಂಎಯ ದಿನ ಲಕ್ಷ್ಮಿಪೂಜೆ. ಆನಂತರ ಲಕ್ಷ್ಮಿಯ ವಿಗ್ರಹಗಳನ್ನು ಮಾತ್ರ ಉಳಿಸಿಕೊಂಡು ಅದೇ ಪೆಂಡಾಲ್‌ನಲ್ಲಿ ಲಕ್ಷ್ಮಿಪೂಜೆಯನ್ನು ಪೌರ್ಣಮೆಯ ದಿನ ಆಚರಿಸುತ್ತಾರೆ. ವಿಸರ್ಜನೆ. ಇಲ್ಲಿಯ ಗಣಪತಿಯ ವಿಸರ್ಜನೆ

ಯಂತೆಯೇ ತಾಳ ಮೇಳ, ಗದ್ದಲಗಳೊಂದಿಗೆ ದೇವಿಯನ್ನು ಲಾರಿಗಳಲ್ಲಿ, ಟ್ರಕ್ಕುಗಳಲ್ಲಿ ಇರಿಸಿಕೊಂಡು ಬ್ರಹ್ಮಪುತ್ರಾ ನದಿಯವರೆಗೂ ಮೆರವಣಿಗೆ ಹೋಗಿ ನಂತರ ನದಿಯಲ್ಲಿ ವಿಸರ್ಜನೆ ಆ ನಂತರದ ವಿಶೇಷವಾದ ಪೂಜೆ ಎಂದರೆ ಕಾಳೀಪೂಜೆ.

ಆಶ್ವೀಜ ಅಮಾವಾಸ್ಯೆಯ ದಿನ ಮಹಾಕಾಳಿಯ ಪೂಜೆ. ಇಲ್ಲಿಯೂ ಸಹ ನೀಲಿ ಮುಖದ ಹದಿನೆಂಟು ದೇವಿಯ ಕೈಗಳ ವಿಗ್ರಹ, ಪೂಜೆಯ ನಂತರ ಸದ್ದು ಗದ್ದಲವಿಲ್ಲದೇ ಅರ್ಧರಾತ್ರಿಯ ನಂತರ ವಿಸರ್ಜಿಸುತ್ತಾರೆ. ಇದು ಅವರವರ ನಂಬಿಕೆ ಅವರವರ ಪದ್ಧತಿ. ಕಾಳೀ ಮಂದಿರ, ಕಾಳೀ ಪೂಜೆ ರಾಮಕೃಷ್ಣ ಪರಮಹಂಸರ ನೆನಪನ್ನು ಹೊತ್ತು ತರುತ್ತದೆ. ಅಲ್ಲಿಯ ಬೆಂಗಾಲಿ ಗಳಲ್ಲಿ ಕೆಲವರು ರಾಮಕ್ರಷ್ಣ ಪರಮಹಂಸರ ಭಕ್ತರು ಅನುಯಾಯಿ ಗಳು ಅವರುಗಳ ಮನೆಯಲ್ಲಿ ರಾಮಕ್ರಷ್ಣರನ್ನು ಕುರಿತ ಭಜನಾ ಕಾರ್ಯಕ್ರಮ ಗಳೂ ನಡೆಯುತ್ತವೆ. ಕಲ್ಕತ್ತಾದ ಸಮೀಪದ ಬೇಲೂರು ಮಠವನ್ನು ಎಲ್ಲರೂ ಬಲ್ಲರು. ಬೆಂಗಾಲಿಗಳಲ್ಲಿ ರಾಮಕೃಷ್ಣಪರ ಮಹಂಸರ ಭಕ್ತರು ಬಹಳ.

ಅಂತಹ ಒಬ್ಬರು ಪಕ್ಕಾ ರಾಮಕ್ರಷ್ಣರ ಭಕ್ತರೊಬ್ಬರು ನಮ್ಮ ಮನೆಯ ಎದುರುಗಡೆ ಸಾಲಿನಲ್ಲಿ ವಾಸವಾಗಿದ್ದರು. ಅವರು ಬೆಂಗಾಲಿಯ ವರು. ಅವರ ಹೆಸರು ಬಿದುಭೂಷಣರಾಯ್. (ವಿದ್ಯಾಭೂಷಣರಾಯ್) ಎಲ್ಲರೂ ಅವರನ್ನು ಬಿ.ಬಿ. ರಾಯ್ ಎಂದೇ ಕರೆಯುತ್ತಿದ್ದರು. ನಾವು ಇಬ್ಬರು ಮಾತ್ರ ಅವರನ್ನು ಕರಡಿ ಎಂದು ಹೇಳುತ್ತಿದ್ದೆವು. ಅದಕ್ಕೆ ಕಾರಣ ಯಾವಾಗ ನೋಡಿದರು ಅವರ ಬಾಯಲ್ಲಿ ಸಿಗರೇಟು ಉರಿಯುತ್ತಿದ್ದುದೇ, ಅದಕ್ಕೆ ಹಿನ್ನೆಲೆಯಲ್ಲಿ ನಾನಾ ಓದಿದ ಒಂದು ಕತಯನ್ನು ತಿಳಿಸುತ್ತೇನೆ. ಕಾಡಿನಲ್ಲಿ ವಾಸವಾಗಿದ್ದ ಒಂದು ಕರಡಿಗೆ,ಒಬ್ಬ ಬೇಟೆಗಾರ ಬೀಳಿಸಿಕೊಂಡು ಹೋದ ಒಂದು ಪೈಪ್ ಸಿಗುತ್ತದೆ. ಕುತೂಹಲದಿಂದ ಕರಡಿ ಪೈಪ್‌ನಿಂದ ಹೊಗೆಯನ್ನ ಎಳೆದುಕೊಂಡು ಧೂಮಪಾನದ ದುರಾಭ್ಯಾಸ ಮಾಡಿಕೊಳ್ಳುತ್ತದೆ ದುರಾ ಭ್ಯಾಸ ಎಷ್ಟಾಗಿತ್ತೆಂದರೆ, ಹೊಗೆಸೊಪ್ಪಿನ ಪುಡಿಯ ಬದಲಿಗೆ ಒಣಗಿದ ಎಲೆಗಳ ಪುಡಿಯನ್ನೇ ಮಾಡಿಕೊಂಡು ಅದನ್ನು ಪೈಪ್‌ಗೆ ತುಂಬಿಕೊಂಡು ಉರಿಸಿ ಉರಿಸಿ ಧೂಮಪಾನ ಮಾಡುತ್ತಿದ್ದಂತೆ. ಆ ಚಟಕ್ಕೆ ಅದು ಎಷ್ಟು ದಾಸನಾಗಿ ಹೋಗಿ

ತ್ತೆಂದರೆ, ಅದಕ್ಕೆ ಬೇರೆ ಹಣ್ಣು ಹಂಪಲುಗಳನ್ನು ತಿನ್ನುವ ಆಸೆ ಸಹ ಹೊರಟು ಹೋಗಿ, ಏಕಾಂಗಿಆಗಿ ಒಂದು ಮರದ ಕೆಶಗೆ ಕೂತು ಸದಾ ಧೂಮಪಾನ ಮಾಡುತ್ತಿತ್ತಂತೆ. ನಿಶ್ಯಕ್ತಿಯಾಗಿದ್ದರೂ ಸದಾ ಆ ಹೊಗೆಯ ಮದ್ಯೆ ತನ್ನನ್ನು ತಾನೇ ಮರೆತು ಹಾಗೇ ಒಂದು ದಿನ ಪ್ರಾಣ ಬಿಟ್ಟಿತಂತೆ.

ಹಾಗೇ ಈ ರಾಯ್ ಎಷ್ಟು ಕೃಶವಾಗಿ ಹೋಗಿದ್ದರೆಂದರೆ ಜೋರಾಗಿ ಗಾಳಿ ಬೀಸಿದರೆ ಬಿದ್ದು ಹೋಗುವ ಹಾಗಾಗಿದ್ದರು. ಆದರೂ ಧೂಮಪಾನದ ಆಸೆ ಮಾತ್ರ ಕಡಿಮೆ ಆಗಿರಲ್ಲಿಲ್ಲ. ಬ್ರಹ್ಮಚಾರಿಯಾಗಿ ಏಕಾಂಗಿಯಾಗಿ ವಾಸ ವಾಗಿದ್ದ ಅವರಿಗೆ ಹಾಗೆ ಮಾಡಿ, ಹೀಗೆ ಮಾಡಬೇಡಿ ಎಂದು ಹೇಳುವವರೇ ಇರಲ್ಲಿಲ್ಲ. ಅವರನ್ನು ನೊಡಿದಾಗಲೆಲ್ಲ ನಮಗೆ ಆ ಕರಡಿಯ ಕತೆ ನೆನಪಿಗೆ ಬರುತ್ತಿತ್ತು. ಹಾಗಾಗಿ ಅವರಿಗೇ ಕರಡಿ ಎಂದು ನಾಮಕರಣ ಮಾಡಿಕೊಂಡ್ದೆವು. ಅದು ನಾವಿಬ್ಬರು ಗಂಡ ಹೆಂಡತಿಯರಲ್ಲಿ ಮಾತ್ರ. ಮಾತಾಡಿಕೊಳ್ಳುವಾಗ.

ಕರಡಿಯ ಪಕ್ಕದ ಮನೆಯಲ್ಲಿ ವಾಸವಾಗಿದ್ದವರು ಘೋಷ್ ಕುಟುಂಬದವರು. ಅವರೂ ಹೆಂಗಾಲಿಗಳೇ. ಘೋಷ್ ಹೇಗಿದ್ದರೆಂದರೆ ಕರಡಿಗೆ ತದ್ವಿರುದ್ದ. ಭಿಮನಂತಹ ಪರ್ಸನಾಲಿಟಿ. ಘೋಷ್ ಒಮ್ಮೆ ಜೋರಾಗಿ ಉಸಿರು ಬಿಟ್ಟರೆ ಸಾಕು,ಕರಡಿ ಹಾರಿ ಹೋಗಬೇಕು, ಆದರೆ, ಘೋಷ್ ಅಂತಹ ಜೋರಿನ ಮನುಷ್ಯನಲ್ಲ. ಕರಡಿಯ ಬಗ್ಗೆ ಅತಿ ಗೌರವ, ಕರಡಿಯನ್ನು ಕಂಡರೆ ಅಲ್ಲಿಯ ಎಲ್ಲರಿಗೂ ಗೌರವ. ಏಕೆಂದರೆ ಅವರು ಹೋಮಿಯೋಪತಿ ವೈದ್ಯರೂ ಸಹ. ಅವಶ್ಯಕತೆ ಬಿದ್ದಾಗ ಔಷದಿ ಮಾತ್ರೆಗಾಗಿ ಅವರ ಬಳಿಗೆ ಓಡಿ ಬರುತ್ತಿದ್ದರು. ಹೋಮಿಯೋಪತಿ ವೈತ್ಯ ಪದ್ದತಿಯನ್ನು ಹವ್ಯಾಸವಾಗಿ ಸಾಮಾನ್ಯವಾಗಿ ಬೆಂಗಾಲಿಗಳು ಅಭ್ಯಾಸ ಮಾಡಿರುವುದನ್ನು ನಾನು ಅಲ್ಲಿ ಕೇಳಿದೆ ನೋಡಲು ಸಣ್ಣ ಸಣ್ಣ ಒಂದೇ ರೀತಿಯ ಗುಳಿಗೆಗಳು. ಆದರೆ ಬೇರೆ ಬೇರೆ ಖಾಯಿಲೆಗೆ ಬೇರೆ ಬೇರೆ ಗುಳಿಗೆಗಳು. ನನಗಂತೂ ವ್ಯತ್ಯಾಸ ಗೊತ್ತಾಗುತ್ತಿರಲಿಲ್ಲ. ಹೋಮಿಯೋ ಪತಿಯ ಪದ್ದತಿಯಿಂದರೋಗವಾಸಿ ಯಾಗುವುದು ನಿಧಾನ ಎಂದು ತಿಳಿದಿದ್ದರಿಂದ ನನಗೆ ಅದರಲ್ಲಿ ಆಸಕ್ತಿ ಇರ ಲಿಲ್ಲ. ಆದರೆ, ಯಾವುದೇ ದುಷ್ಪರಿಣಾಮಗಳಿಲ್ಲದ ಔಷಧಿ ಮಾತ್ರೆಗಳು ಎಂದು, ಆಯುರ್ವೇದ ವೈದ್ಯ ಪದ್ದತಿಯಂತೆ, ಹೋಮಿಯೋಪತಿ ವೈದ್ಯ

ಪದ್ಧತಿಗೂ ಮನ್ನಣೆಯನ್ನು ಎಷ್ಟೋ ಜನ ಕೊಡುತ್ತಾರೆ. ನಾವು ಇದ್ದ ಆ ಸ್ಥಳದಲ್ಲಿ ಹೋಮಿಯೋಪತಿ ವೈದ್ಯಕೀಯ ಪದ್ದತಿಗೆ ಬೆಲೆ ಜಾಸ್ತಿ.

ನಾವು ಅಲ್ಲಿ ಹೋಗಿ ಇರಲು ಪ್ರಾರಂಭಿಸಿದ ಮೇಲೆ ಮೊದಲ ಚಳಿಗಾಲ ಪ್ರಾರಸಭವಾಗಿತ್ತು. ಬೇಸಗೆ, ಮಳೆ, ಎಷ್ಟು ತೀವ್ರವೋ ಹಾಗೇ ಚಳಿ ಸಹ. ಅಸಹನೀಯ ಬೇಸಗೆಯಲ್ಲಿ ಸೂರ್ಯೋದಯ ಬೆಳಗಿನ ಝಾವ ನಾಲ್ಕು ಗಂಟೆಯ ಹೊತ್ತಿಗೇ ಆಗುತ್ತದೆ. ಎನ್ನುವುದನನು ಅನುಭವಿಸಿ ತಿಳಿದವಷ್ಟೆ. ಅಸ್ಸಾಮಿನ ಸಮೀಪದ 'ಮೊಹನ ಬಾರಿ'ಎಂಬ ಊರಿನಲ್ಲಿ ಬೆಳಗಿನ ಝಾವ ಮೂರುವರೆ ಗಂಟೆಗೆ ಸೂರ್ಯೋದಯವಾಗುತ್ತಂದೆ.ಅಂತ ಈ ಮೊದಲೆ ತಿಳಿಸಿದ್ದೇವೆ. ಅಂದರೆ ಬೆಳಗಿನ ಆರು ಗಂಟೆಯ ಹೊತ್ತಿಗೆ ಇಲ್ಲಿನ ಒಂಭತ್ತು ಹತ್ತು ಗಂಟೆಯಂತೆ. ಆಬ್ಬಾ!ದಿನ ಪ್ರಾರಂಭಗೊಳ್ಳುವುದು ಬೇಗ ಹಾಗೇ ಆದರೆ, ದಿನ ಅಂತ್ಯಗೊಳ್ಳುವುದೂ ನಿಧಾನ.

ಕಾರ್ತಿಕ ಮಾಸ, ಅಂದರೆ ನವೆಂಬರ್ ತಿಂಗಳಿನಲ್ಲಿ ಸಾಯಂಕಾಲ ಬೆಗ ಬೇಗ ಕತ್ತಲಾಗ ತೊಡಗುತ್ತದೆ. ಮದ್ಯಾಹ್ನ ಎರಡು ಗಂಟೆಯಾಗುತ್ತಿದ್ದಂತೆಯೇ ಸೂರ್ಯನ ತಾಪ ಕಡಿಮೆಯಾಗುತ್ತದೆ. ಎಂದರೆ ನಂಬ್ತೀರಾ ಅಲ್ಲವೆ? ನಮ್ಮವರ ಆಫೀಸು ಐದು ಗಂಟೆಗೆ ಮುಗಿಯುತ್ತಿತ್ತು. ಕೇವಲ ಹತ್ತು ನಿಮಿಷದ ನಡಿಗೆ, ಆಫೀಸಿನಿಂದ ಮನೆಗೆ. ಇವರು ಮನೆಗೆ ಬರುವ ಹೊತ್ತಿಗೆ ನಾನು ಮನೆಯಲ್ಲಿದ್ದ ಎಲ್ಲಾ ದೀಪಗಳನ್ನು ಹಚ್ಚಿ, ಕೈಯಲ್ಲಿ ಟಾರ್ಚು ಹಿಡಿದು, ಮುಂಬಾಗಿಲ ಮೆಟ್ಟಿಲ ಬಳಿ ಇವರಿಗಾಗಿ ಕಾದು ಕೂತಿರುತ್ತಿದ್ದೆ. ಅಷ್ಟೇ ಹೊತ್ತಿಗೆ ನೀಲಿಯಾಕಾಶದಲ್ಲಿ ಅನೇಕ ನಕ್ಷತ್ರಗಳನ್ನು ನಾವು ಕಾಣಬಹುದಾಗಿತ್ತು. ಅಷ್ಟು ಚೆನ್ನಾಗಿ ಕತ್ತಲೆ ಆಗಿರುತ್ತಿತ್ತು.

ಇಲ್ಲಿಯ ಹಾಗೆ ಚಂದ್ರ ಆರೂವರೆ ಹೊತ್ತಿಗೆ ಹುಟ್ಟಿ ಬರುತ್ತಾನೆ. ಬೆಟ್ಟಗಳ ನಡುವೆ ಎದ್ದು ಬರುವ ಚಂದ್ರನನ್ನು ನೋಡುವ ಆಸೆಯಿಂದ ನಾವಿಬ್ಬರೂ ಬ್ರಹ್ಮಪುತ್ರಾ ಸೇತುವೆಯ ಮೇಲೆ ಕಾದು ಕೂತಿದ್ದೆವು. ಎಷ್ಟು ಹೊತ್ತಾದರೂ ಚಂದ್ರನ ಆಗಮನವೇ ಆಗದಿದ್ದಾದ ಬೇಸರದಿಂದ ಎದ್ದು, ಮನೆಯ ದಾರಿ ಹಿಡಿದೆವು. ಮನೆಗೆ ಬರುವ ಹೊತ್ತಿಗೆ ನಮಗಿಂತ ಮುಂಚೆ ಚಂದ್ರ ನಮ್ಮ ಮನೆಯ ಮೇಲೆ ಇದ್ದು ನಮ್ಮ ಕಡೆ ನೋಡಿ ನಗುತ್ತಿದ್ದ.

ಸೂರ್ಯಾಸ್ತಮಾನ ಬೇಗ ಆಗಿದ್ದರಿಂದ ಚಂದ್ರೋದಯ ಸಹಬೇಗ ಆಗಿತ್ತು. ಈ ವಿಷಯ ನಮಗೆ ಹೊಳೆಯದೇ, ಪೂರ್ವದಿಕ್ಕಿಗೆ ಕಾಣುವ ಸುಂದರ ಬೆಟ್ಟಗಳ ನಡುವೆ ಚಂದಿರ ಎಂದಿಗೆ ಹುಟ್ಟಿ ಬಂದಾನೋ ಎಂದು ಕಾಯುತ್ತಾ ಕುಳಿತ್ತಿದ್ದೆವು. ಅವನು ನಾವು ಆ ಪ್ರದೇಶವನ್ನು ತಲಪುವ ಮೊದಲೆ ಸ್ವಲ್ಪ ಬದಲಾದ ದಿಕ್ಕಿನಲ್ಲಿ ಹುಟ್ಟಿ ಬಂದು ನಮ್ಮನ್ನು ಮೂರ್ಖರನ್ನಾಗೆ ಮಾಡಿದ್ದ!

ನಮಗೆ ಅಲ್ಲಿ ಕಳ್ಳಕಾಕರ ಭಯವಿಲ್ಲ. ಸ್ವಭಾವತಃ ಅಲ್ಲಿಯ ಜನರು ಒಳ್ಳೆಯವರು ಇನ್ನೊಬ್ಬರ ತಂಟೆಗೆ ಬರುವವರಲ್ಲ. ಭಯ ಇದ್ದದ್ದು ಹುಳು ಹುಪ್ಪಟೆಗಳದ್ದು. ಮಲೆನಾಡಿನ ಪ್ರದೇಶಗಳಂತೆ ಪರಿಸರವಿದ್ದ ಮೇಲೆ, ವನ್ಯ ಜಂತುಗಳು ಅಲ್ಲಿಯಂತೆ ಇರುತ್ತವೆ ಎಂಬ ಭಯ. ಬ್ರಹ್ಮಪುತ್ರಾ ನದಿಯಲ್ಲಿ ಪ್ರವಾಹ ಬಂದರೆ, ಪ್ರವಾಹದ ನೀರು ನಾನಾ ದಿಕ್ಕಿಗೂ ತುಂಬಿ ಹರಿಯುತ್ತಿದ್ದವು. ಹೊರಗೆ ಕಾಲನ್ನಿಡಲು ಹೆದರಿಕೆಯೇ ಜಾಸ್ತಿ. ಒಬ್ಬಳೇ ಇದ್ದಾಗ, ಮರೆತೂ ಮನೆಯ ಹೊರಗೆ ಕಾಲಿಡುತ್ತಿರಲಿಲ್ಲ. ಮಳೆಗಾಲದಲ್ಲಿ ಏರ್ ಪೋರ್ಟ್ ರಸ್ತೆಯಲ್ಲಿ ಅಲ್ಲಲ್ಲಿ ಜೀವಂತವಾಗಿರುವ, ಸತ್ತಿರುವ ಹಾವುಗಳು ಇದ್ದೇ ಇರುತ್ತಿದ್ದವು. ಎಂದು ತಿಳಿದ ಮೇಲೆ ಧೈರ್ಯವಾಗಿ ಕಾಲಿಡುವುದಾದರೂ ಹೇಗೆ?

ಹೀಗಾಗಿ ನಾನು ಮನೆಯಲ್ಲಿ ಬಂಧಿ ಆಫೀಸರ್ ಇನ್ ಚಾರ್ಜ್ ಇವರೇ ಆಗಿದ್ದುದರಿಂದ, ಉಳಿದವರೆಲ್ಲರೂ ಇವರ ಕೆಳಗಿನವರು. ಯಾರ ಮನೆಗೂ ಫ್ರೀಯಾಗಿ ಹೋಗಿ ಬೆರೆಯುವಂತಿಲ್ಲ. ಯಾರೊಡನೆ ಹೆಚ್ಚಿಗೆ ಮಾತನಾಡುವಂತಿಲ್ಲ. ಇದು ನಮ್ಮವರ ಆಜ್ಞೇ. ಅಷ್ಟು ದೊಡ್ಡ ಮನೆಯಲ್ಲಿ ಬೆಳಗಿನ ಹೊತ್ತು ಮನೆಗೆಲ್ಲಾ ನಾನೊಬ್ಬಳೆ.

ಬೇಗ ಎದ್ದು ಏನು ಮಾಡಬೇಕು ಎಂಬ ಧೋರಣೆಯಿಂದ ಏಳುತ್ತಿದ್ದುದೇ ತಡವಾಗಿ ಎದ್ದ ನಂತರ ಒಂದೆರಡು ಸಲ ಕಾಫಿ, ಕಾಫಿ ನಂತರ ಸ್ನಾನ, ತಿಂಡಿ ತಯಾರು ಮಾಡಿ ಇಬ್ಬರೂ ಒಟ್ಟಿಗೇ ಕೂತು ತಿಂತಿಂದು ಕಾಫಿ ಕುಡಿದರೆ, ಅಡಿಗೆಗೆ ಏನೂ ಅವಾಂತರವಿಲ್ಲ. ಮಧ್ಯಾಹ್ನ ಒಂದು ಗಂಟೆಗೆ ಊಟಕ್ಕೆ ಬರುತ್ತಿದ್ದರು. ಇಬ್ಬರಿಗೆ ಅಡಿಗೆ ಮಾಡಲು ಎಷ್ಟು ಸಮಯ ಬೇಕು, ಹನ್ನೆರಡು ಗಂಟೆಗೆ ಅಡಿಗೆ ಕೆಲಸ ಶುರು ಮಾಡಿದರೂ ಆಗುತ್ತದೆ. ಕಿಟಕಿಯ ಬಳಿ ನಿಂತು,

ರಸ್ತೆಯಲ್ಲಿ ಹೋಗಿ ಬರುವ ಗಾಡಿಗಳನ್ನು ಸ್ಕೂಲಿಗೆ ಹೋಗುವ ಮಕ್ಕಳನ್ನು ಆಗ ಈಗ ಮೇಲೆ ಹಾರುವ, ಕೆಳಗೆ ಇಳಿಯುವ ವಿಮಾನಗಳನ್ನು ನೋಡುತ್ತಾ ಕಾಲ ಕಳೆಯುವುದು ಬಹಳ ಕಷ್ಟವೆನಿಸುತ್ತಿತ್ತು.

ಮಧ್ಯಾಹ್ನ ಊಟದ ನಂತರ ಇವರು ಮತ್ತೇ ಆಫೀಸಿಗೆ ಹೊರಟು ಹೋದರೆ, ಮತ್ತೆ ಏನೂ ಕೆಲಸವಿಲ್ಲ. ಲೈಬ್ರರಿಯಿಂದ ತಂದ ಯಾವುದಾದರೂ ಕತೆ ಪುಸ್ತಕಗಳನ್ನು ಓದುವುದು. ಹತ್ತಿರದಲ್ಲಿ ಆಫೀಸನವರೇ ನಡೆಸುತ್ತಿದ್ದ ಒಂದು ಸರ್ಕ್ಯುಲೇಟಿಂಗ್ ಲೈಬ್ರರಿ ಇತ್ತು. ಆದರೆ ಅಲ್ಲಿ ಸಿಗುತ್ತಿದ್ದುದು ಬರೀ ಇಂಗ್ಲೀಷ್ ಮತ್ತು ಹಿಂದಿ ಪುಸ್ತಕಗಳು... ಹಿಂದಿ ಪುಸ್ತಕಗಳ ಬಗೆಗೆ ನಮ್ಮ ವರಿಗೆ ಆಸಕ್ತಿ ಇಲ್ಲ. ಹಾಗಾಗಿ ಅವರು ತರುತ್ತಿದ್ದುದು ಬರೀ ಇಂಗ್ಲೀಷ್ ಕಾದಂಬರಿಗಳನ್ನೇ. ಇದು ಓದು ಚನ್ನಾಗಿದೆ. ಎಂದು ಮತ್ತೇ ಮತ್ತೇ ಹೇಳು ತ್ತಿದ್ದರು. ನಾನೋ ಪಕ್ಕಾ ಮಲೆನಾಡಿನವಳು ನಮಗೆಲ್ಲಾ ಓದುವ ಹವ್ಯಾಸ ವನ್ನು ಬೆಳೆಸಿದುರು. ಪರಿ ಜಂಬದರೊಬ್ಬರ ಲೈಬ್ರರಿಯಿಂದ ಒಬ್ಬ ಹುಡುಗ ವಾರಕ್ಕೊಮ್ಮೆ ಓದಲು ಕಾದಂಬರಿಗಳನ್ನು ಓದುವ ಅಭ್ಯಾಸವೇ ಇಲ್ಲ. ಯಾವ ಪುಸ್ತಕವೂ ಇಲ್ಲದಿದ್ದಾಗ, ಅದನ್ನೇ ಓದಲು ಪ್ರಾರಂಭಿಸಿದೆ.ನಾವುಗಳು ಓದು ತ್ತಿದುದು ಕೇವಲ ಕನ್ನಡ ಪುಸ್ತಕಗಳನ್ನು. ನಮ್ಮ ತಂದೆ ನಮಗೆ ಓದುವ ಹವ್ಯಾಸವನ್ನು ಬೆಳೆಸಿದ್ದರು. ಹತ್ತಿರದ ಲೈಬ್ರರಿಯಿಂದ ಒಬ್ಬ ಹುಡುಗ ವಾರ ಕ್ಕೊಮ್ಮೆ ಮನೆಗೇ ಪುಸ್ತಕಗಳನ್ನು ತಂದು ಕೊಡುತ್ತಿದ್ದ. ತ್ರಿವೇಣಿ, ಎಂ.ಕೆ ಇಂದಿರಾ, ಅನಕೃ, ತರಾಸು, ಮುಂತಾದವರ ಕಾದಂಬರಿಗಳನ್ನು ಓದುವ ಹವ್ಯಾಸ ಬೆಳೆಯಿತು. ಓದಿದ್ದು ಕೇವಲ ಪಠ್ಯಪುಸ್ತಕಗಳಲ್ಲಿ, ಕಲಿತಿದ್ದು ಪರೀಕ್ಷೆ ಯಲ್ಲಿ ಚೆನ್ನಾಗಿ ಅಂಕಗೊಳಿಸಿ ಪಾಸಾಗುವಷ್ಟು. ಇಂಗ್ಲಿಷ್ ಕಾದಂಬರಿಗಳನ್ನು ಓದುವ ಹವ್ಯಾಸ ಪ್ರಾರಂಭವಾಯಿತು. ಲೈಬ್ರರಿಯಲ್ಲಿ ಸಿಗುತ್ತಿದ್ದ, ಪೆರ್ರಿ ಮೆಸನ್, ಜೇಮ್ಸ್ ಹ್ಯಾಡ್ಲೀಚೇಸ್., ಆರ್ಥರ್ ಹ್ಯಾಲಿ, ಹೆರಾಲ್ಡ್ ರಾಬಿನ್ಸ ರವರ ಅನೇಕ ಕಾದಂಬರಿಗಳನ್ನು ಓದಿದೆ. ನನ್ನ ಮನಸೂರೆಗೊಂಡದ್ದು ಜೇಮ್ಸ್ ಹ್ಯಾಡ್ಲಿ ಚೇಸ್‌ರವರ ಪತ್ತೇದಾರಿ ಕಾದಂಬರಿಗಳು. ಕಾದಂಬರಿಯನ್ನು ಓದುವ ಹವ್ಯಾಸ ಹೆಚ್ಚಿಸಿಕೊಂಡಂತೆ, ಇಂಗ್ಲೀಷ್ ಭಾಷಾ ಜ್ಞಾನವೂ ಹೆಚ್ಚಿತು.

ಏನಿದ್ದರೂ ನಾವುಗಳು,ಕನ್ನಡಿಗರು ನಮ್ಮ ನಮ್ಮ ಮನೆಯಲ್ಲಿ

ಆಡುತ್ತಿದ್ದುದು ಕನ್ನಡ ಅಥವಾ ಹಿಂದಿ ಸಿನಿಮಾ. ಕೇಳುತ್ತಿದಲುದು ಕನ್ನಡ ಅಥವಾ ಹಿಂದಿ ನವೀನ ಹಾಡುಗಳು.ನೋಡುತ್ತಿದ್ದುದು ಕನ್ನಡ ಅಥವಾ ಹಿಂದಿ ಸಿನಿಮಾ, ಕೇಳುತ್ತಿದ್ದುದು ಹಿಂದಿ ಅಥವಾ ಕನ್ನಡ ಸಿನಿಮಾ ಹಾಡುಗಳು ಇಂಗ್ಲೀಷಿನ ಪ್ರಭಾವವೇ ಇಲ್ಲ. ಇಂಗ್ಲೀಷೊ ಪ್ರಭಾವವೇ ಇಲ್ಲ. ಇಂಗ್ಲೀಷ್ ಭಾಷೆಯನ್ನೂ ಕೆವಲ ಪಠ್ಯಪುಸ್ತಕಗಳಲ್ಲಿ ಓದಿ ತರಗತಿಯಲ್ಲಿ ಕವಿತದ್ದು ಕೇವಲ ಪರೀಕ್ಷೆಯಲ್ಲಿ ಪಾಸಾಗುವಷ್ಟರ ಮಟ್ಟಿನ ರೀತಿಯಲ್ಲಿ. ಇಂಗ್ಲೀಷ್‌ನಲ್ಲಿ ಮಾತನಾಡಲು ಭಯ... ಸಧ್ಯ ನನಗೆ ಆ ತೊಂದರೆಯೇ ಬರಲಿಲ್ಲ. ನನಗೆ ಚೆನ್ನಾಗಿ ಹಿಂದಿಯಲ್ಲಿ ಮಾತಾನಾಡಲು ಬರುತ್ತಿದ್ದುದರಿಂದ ಯಾವ ಭಯವೂ ಇರಲಿಲ್ಲ. ಅಕ್ಕಪಕ್ಕದ ನಿವಾಸಿಗರಿಗೆ ಏನೋ ಸಂದೇಹ ಈ ಮದ್ರಾಸಿ ಹೆಂಗಸಿನೊಡನೆ ಯಾವ ಭಾಷೆಯಲ್ಲಿ ಮಾತನಾಡಬೇಕು?ಹಿಂದಿ ಬರುತ್ತದೋ ಇಲ್ಲವೋ..ಅಂತ ಆದರೆ ಅವರುಗಳು ಯಾರೂ ನಮ್ಮಂತೆ ಮನೆ ಬಾಗಿಲು ಭದ್ರ ಪಡಿಸಿ ಕೊಂಡು ಒಳಗೇ ಕೂತುಕೊಳ್ಳುವವರಲ್ಲ ಒಬ್ಬೊಬ್ಬರಾಗಿ ಅವರುಗಳೇ ಪರಿಚಯ ಮಾಡಿಕೊಂಡು ನಮ್ಮ ಮನೆಗೆ ಬರತೊಡಗಿದರು, ಅದೂ ನನ್ನ ಪತಿ ಮನೆಯಲ್ಲಿ ಇಲ್ಲದ ಸಮಯದಲ್ಲಿ ಹೆಂಗಸರಿಗೆ ಮಾತು ಬೇಕು. ಮಾತನಾಡಲು ಯಾವಭಾಷೆಯೂ ಅಡ್ಡ ಬರುವುದಿಲ್ಲ. ಹಿಂದಿಯಲ್ಲಿ ನಿರರ್ಗಳವಾಗಿ ಮಾತನಾಡಿ ವಿಚಾರ ವಿನಿಮಯ ಮಾಡಿ ಕೊಳ್ಳುತ್ತಿದ್ದೆವು. ಊಟ ತಿಂಡಿ, ಆಚಾರ, ವಿಚಾರ, ಉಡುಗೆ ತೋಡುಗೆ ಸಿನಿಮಾ, ಸಾಹಿತ್ಯ.. ಹ್ಞಾಂ ಹ್ಞಾಂ ಸಾಹಿತ್ಯದ ಬಗ್ಗೆ ಯಾವ ಚರ್ಚೆಯೂ ಬರುತ್ತಿರಲಿಲ್ಲ. ಯಾಕೆಂದರೆ ಯಾರಿಗೂ ಸಾಹಿತ್ಯದ ಬಗ್ಗೆ ಆಸಕ್ತಿ ಇರಲಿಲ್ಲ. ನಿಜ ಹೇಳಬೇಕೂಂದ್ರೆ ಅವರಲ್ಲಿ, ಕೆಲವರಿಗೆ ಕನ್ನಡ ನಾಡು ಅಂತ ಬಂದಿದೆ. ಅದಕ್ಕೆ ತನ್ನದೇ ಆದ ಒಂದು ಇತಿಹಾಸವಿದೆ. ಭಾಷೆ ಇದೆ, ಸಾಹಿತ್ಯವಿದೆ ಎಂದು ತಿಳಿದಿರಲಿಲ್ಲ. ಹೋಗಲಿ ಎಂದರೆ, ಅವರಿಗೆ ಮದ್ರಾಸಿಗಳ ಬಗ್ಗೆ ತಿಳಿದದ್ದು ಅಷ್ಟರಲ್ಲೇ ಇದೆ. ಮದ್ರಾಸಿಗಳು ಅಂದರೆ ಮದ್ರಾಸಿ ಹೆಂಗಸರು ಸದಾ ಅಡಿಗೆ ಮನೆಯಲ್ಲಿ ಕಾಲ ಕಳೆಯುತ್ತಾರೆ. ಇಡ್ಲಿ, ದೋಸಾ , ವಡೆ, ಚಟ್ನಿ ಚನ್ನಾಗಿ ಮಾಡ್ತಾರೆ. ಅಷ್ಟೆ ಅವರ ಬಗ್ಗೆ ಸಾಮಾನ್ಯ ಜ್ಞಾನ. ನಾನು ಒಬ್ಬಳೇ ಒಬ್ಬಳು ಕನ್ನಡದವಳು, "ಕನ್ನಡ ಕನ್ನಡ" ಅಂತ ಹೇಳಿಕೊಡರೆ ಕೋಣನ ಮುಂದೆ ಕಿಂದರಿ ಬಾರಿಸಿದಂತೆ

ಆಗುತ್ತಿತ್ತೆನೋ, ಹಾಗಂತ ಈಗ ಅನ್ನಿಸುತ್ತೆ. ಆಗ ಏನೂ ಅನ್ನಿಸುತ್ತಿರಲಿಲ್ಲ. ಏಕೆಂದರೆ, ಸಧ್ಯ ನನಗೆ ಸ್ನೇಹಿತೆಯರು ಸಿಕ್ಕಿದರಲ್ಲ, ಅವರೇನು ಅಡ್ತಾರೋ ಅದನ್ನೆ ಕೇಳ್ತೀನಿ. ನನ್ನ ಬಗ್ಗೆನನ್ನ ಊರಿನ ಬಗ್ಗೆ ನಾನು ಏನೂ ಹೇಳಿಕೊಳ್ಳು ವುದಿಲ್ಲ. ಅಂತ ಅಂದುಕೊಳ್ಳುತ್ತಿದ್ದೆ. ಅದು ಆಗುತ್ತಿದ್ದುದು ಹಾಗೇ ಅವರು ಗಳೆಲ್ಲಾ ಎಲ್ಲಾ ಮಾತನಾಡುತ್ತಿದ್ದರು ನಾನು ಕೇಳಿಕೊಳ್ಳುತ್ತಿದ್ದೆ. ಕೇಳಿದ್ದಷ್ಟಕ್ಕೆ ಮಾತ್ರ ನಾನು ಉತ್ತರ ಕೊಡುತ್ತಿದ್ದೆ.

ನನ್ನ ವಾರಗಿತ್ತಿಯ ಸಂಬಂಧಿಕರೊಬ್ಬರು ಅನೇಕ ವರ್ಷಗಳಿಂದ ಗೌಹಾಟಿಯಲ್ಲೆ ಇದ್ದರು. ಅಲ್ಲೇ ಬಿಸಿನೆಸ್ ಮಾಡುತ್ತಿದ್ದರು. ಅತ್ತಿಗೆಯ ಸಂಬಂಧ ಎಂಬ ಗೌರವದಿಂದ ನಮ್ಮವರು ಅವರ ಮನೆಗೆ ಕರೆದುಕೊಂಡು ಹೋಗಿದ್ದರು. ಆದರೆ ಅವರಿಗೆ ನಮ್ಮನ್ನು ನೋಡಿ ಅಷ್ಟೇನೂ ಖುಷಿಯಾಗ ಲಿಲ್ಲ. ಕರ್ಣಾಟಕದವರು, ಹೊಸದಾಗಿ ಇಲ್ಲಿಗೆ ಬಂದವರು, ನಮ್ಮಿಂದ ಇವರಿಗೆ ಏನಾದರೂ ಸಹಾಯ ಬೇಕಾದರೆ ಮಾಡಬಹುದು. ಎನ್ನುವ ಸಜ್ಜನಿಕೆ ಅವರ ನಡೆ ನುಡಿಯಲ್ಲಿ ಇರಲಿಲ್ಲ. ಏನೋ ಬಂದಿದಾರೆ, ತಿಂಡಿ ತೀರ್ಥ ಕೊಟ್ಟರಾಯಿತು. ಎನ್ನುವಂತೆ ಕಾಫಿ ತಿಂಡಿ ಕೊಟ್ಟು ಕಳಿಸಿದರು. ಆಗಾಗ್ಗೆ ಬರುತ್ತಿರಿ ಎಂದು ಸಹ ಹೇಳಲಿಲ್ಲ. ನಮಗೆ ನಮ್ಮವರೇ ಮಾಡುವ ಉಪಚಾರ ಇದು. ಬೇಸರ, ಅಪಮಾನಗಳಿಂದ ಇನ್ನು ಹೀಗೆ ಯಾರನ್ನು ಹುಡುಕಿಕೊಂಡು ಹೋಗುವುದು ಬೇಡವೆಂದು ತೀರ್ಮಾನಿಸಿ ಕೊಂಡೆವು.

ಮತ್ತೂ ಒಮ್ಮೆ ಹಾಗೇ ಆಯಿತು. ನರಕೇಸರಿ ಅಯ್ಯಂಗಾರಿ ಅನ್ನೋದು ಒಬ್ಬರು ಸಿವಿಲ್ ಏವಿಯೇಷನ್ ಡಿಪಾರ್ಟ್‌ಮೆಂಟ್‌ನವರು ವರ್ಗವಾಗಿ ಬಂದು, ಅಲ್ಲಿಯ ಕ್ವಾರ್ಟರ್ಸ್‌ನಲ್ಲಿದ್ದರು. ಹತ್ತಿರದಲ್ಲೇ ಮನೆ. ಯಾವುದೋ ಒಂದು ಹಬ್ಬದಲ್ಲಿ ಕರೆದಿದ್ದರು. ಆಕೆ ನಾವೂ ಕನ್ನಡದವರೇ ಎಂಬ ಹೆಮ್ಮೆಯನ್ನಾಗಲೀ ಸಡಗರವನ್ನಾಗಲೀ ತೋರದೇ ಉದಾಸೀನತೆ ಯಿಂದ ಇದ್ದುದು, ಯಾಕೆ ಹೀಗೆ ಎಂದು ಚಿಂತಿಸುವಂತಾಗಿತ್ತು. ಪರಿಚಯ ಹೆಚ್ಚಾದರೆ ನಾವು ಪದೇ ಪದೇ ಹೋಗಿ ತೊಂದರೆ ಕೊಡಬಹುದು ಎಂದು ಭಾವಿಸಿರಬಹುದು. ಆದರೆ ಅವರುಗಳು ನಮ್ಮ ಬಗ್ಗೆ ಹಾಗೇನಾದರೂ ಅಂದುಕೊಂಡಿದ್ದರೆ ಶುದ್ದ ತಪ್ಪು ನಮ್ಮವರಿಗೆ ಜನರೇ ಬೇಕಿಲ್ಲ. ನಾನು

ನಾನಾಗಿಯೇ ನಾನು ಯಾರ ಮನೇಗೂ ಅಷ್ಟು ಸುಲಭವಾಗಿ ಹೋಗುತ್ತಿರಲಿಲ್ಲ. ಹಾಗಾಗಿ, ನಾವುಗಳು ಮತ್ತೆಂದೂ ಅವರುಗಳ ಮನೆಗೆ ಹೋಗಲೇ ಇಲ್ಲ.

ಇದೇ ಸಮಯದಲ್ಲಿ ಪೂನಾದಿಂದ, ದೇಸಾಯಿ ಎಂಬುವರೊಬ್ಬರಿಗೆ ಆ ಊರಿಗೆ ವರ್ಗವಾಗಿತ್ತು. ಅವನೂ ಕನ್ನಡದವನೇ. ಬೆಳಗಾಂ ಕಡೆಯವವನು. ಅವನು ಕನ್ನಡದಲ್ಲಿ ಮಾತನಾಡಿರಲಿಲ್ಲ. ಅವನೇ ಪ್ರಯತ್ನಪಟ್ಟರೂ, ಇವರು, ಆಫೀಸಿನಲ್ಲಿ ಕನ್ನಡದಲ್ಲಿ ಮಾತನಾಡುವುದು ಬೇಡ ಅಂದಿದ್ದರಂತೆ. ಒಂದು ದಿನ ಅವನನ್ನು ಮನೆಗೆ ಕರೆ ತಂದಿದ್ದರು. ಧಾರವಾಡ ಸೀಮೆಯ ಕನ್ನಡ ನನಗೆ ಅರ್ಥವಾಗುತ್ತಿತ್ತು. ಆದರೆ, ಅವನೊಡನೆ ಹೆಚ್ಚಿಗೆ ಏನು ಮಾತನಾಡಲು ಇರುತ್ತದೆ? ಕಾಫಿ ತಿಂಡಿ ಕೊಟ್ಟು, ಮತ್ತೆ ಆಗಾಗ್ಗೆ ಬರುತ್ತಿರುವಂತೆ ಹೇಳಿದೆ. ಅವನು ಒಂದು ರೂಂನಲ್ಲಿದ್ದ ಮೆಸ್‌ನಲ್ಲಿ ಊಟ ಮಾಡುತ್ತಿದ್ದ. ಅವನು ಒಬ್ಬಂಟಿಗನಾಗಿದ್ದುದರಿಂದ, ಹೆಚ್ಚಿಗೆ ಬರುತ್ತಿರಲಿಲ್ಲ.

ಈ ಮಧ್ಯೆ ನಾನು ತಾಯಿಯಾಗಲಿರುವ ಸೂಚನೆಗಳು ಕಂಡು ಬಂದವು. ಆದರೆ ಇದರಿಂದ ನಮ್ಮವರಿಗೆ ಖುಷಿಯೇನೂ ಆಗಿರಲಿಲ್ಲ. ಕೆಲವು ತಿಂಗಳ ಹಿಂದಷ್ಟೆ ಊರಿಗೆ ಹೋಗಿ ಬಂದಿದ್ದೆವು. ರಜ ಇಲ್ಲ ಮತ್ತೆ ಹೋಗಲು ಸಾಧ್ಯವಿಲ್ಲ ಎಂಬ ಅಸಮಾಧಾನ. ಅವರ ಅಸಮಾಧಾನ ಕಂಡು ನನ್ನಿಂದ ಏನೋ ಅಪಚಾರ ನಡೆದಿದೆ ಎಂಬ ಭಾವನೆ ನನ್ನಲ್ಲಿ "ನಿಮ್ಮ ತಂದೆಗೆ ಬಂದು ಕರೆದುಕೊಂಡು ಹೋಗು ಅಂತ ಕಾಗದ ಬರಿ ಅಂತ ಒತ್ತಾಯ ಮಾಡುತ್ತಿದ್ದರು. ಅಷ್ಟು ದೂರ ನಮ್ಮ ತಂದೆಗೆ ಬಂದು ಕರೆದುಕೊಂಡು ಹೋಗಿ ಅಂತ ಕಾಗದ ಬರೆಯಲು ನನಗೆ ಇಷ್ಟವಿಲ್ಲ. ನಮ್ಮವರ ಆತಂಕ ಹೆಚ್ಚಾಯಿತು. ಆಗಾಗ್ಗೆ ಡಾಕ್ಟರ ಬಳಿಗೆ ಹೋಗಿ ಬರಬೇಕು, ಆರೋಗ್ಯ ಚನ್ನಾಗಿ ನೋಡಿಕೊಳ್ಳಬೇಕು. ಇವೆಲ್ಲಾ ಅತೀ ಜವಾಬ್ದಾರಿಯುತ ಕೆಲಸವೆಂಬ ಚಿಂತೆ. ಆಗ ಈಗೆ ತಮಾಷೆಗೆಂದು ಸೇದುತ್ತಿದ್ದ ಸಿಗರೇಟಿನ ಸಂಖ್ಯೆ ಜಾಸ್ತಿಯಾಗ ತೊಡಗಿತು.

ಆತಂಕ ಹೆಚ್ಚಾದರೆ ಸುಮ್ಮನೇ ಇರಲು ಸಾಧ್ಯವೇ? ದಿನ ಕಳೆದಂತೆ, ಬಾಣಂತನಕ್ಕೆ ಬಿಟ್ಟು ಬರುವ ಸಿದ್ದತೆಗಳನ್ನು ಮಾಡಲೇ ಬೇಕಾಯ್ತು. ರಜ ಸಾಂಕ್ಷನ್ ಆಗಿತ್ತು. ಈ ಸಾರಿ, ಗೌಹಾಟಿಯಿಂದ ಕಲ್ಕತ್ತಾವರೆಗೆ ಪ್ಲೈನ್‌ನಲ್ಲಿ

ಹೋಗುವುದು. ಕಲ್ಕತ್ತಾದಿಂದ ಹೌರಾಎಕ್ಸ್‌ಪ್ರೆಸ್‌ನಲ್ಲಿ ಮದ್ರಾಸಿಗೆ ಬಂದ ನಂತರ ಮದ್ರಾಸಿನಿಂದ ಬೆಂಗಳೂರಿಗೆ ಬೃಂದಾವನ್ ಎಕ್ಸ್‌ಪ್ರೆಸ್‌ನಲ್ಲಿ ಹೋಗುವುದು. ಎಂದು ಯೋಚನೆ ಮಾಡಿಕೊಂಡೆವು. ಒಂದು ಸಾರಿ ಬೆಂಗಳೂರು ತಲುಪಿದೆನೆಂದರೆ ಯೋಚನೆ ಅಲ್ಲ. ಶಿವಮೊಗ್ಗದಿಂದ ಯಾರಾದರೂ ಬಂದು ನನ್ನನ್ನು ಕರೆದುಕೊಂಡು ಹೋಗ್ತಾರೆ ಅಂತ. ಇಷ್ಟು ನಾವು ಮಾಡಿಕೊಂಡ ಪ್ಲಾನು. ಪ್ಲಾನಿನಂತೆ ಪ್ರಯಾಣ ಹೊರಟೆವು.

ಆ ದಿನ ಅಗಸ್ಟ್ ಹದಿನೈದನೇ ತಾರೀಖು. ಸರಕಾರಿ ರಜವಾದುದರಿಂದ ಎಲ್ಲೂ ಹೆಚ್ಚು ಜನ ಸಂಚಾರವಿಲ್ಲ. ಬೆಳಿಗ್ಗೆ ೭.೩೦ ಗಂಟೆಗೆ ಕಲ್ಕತ್ತಾಕ್ಕೆ ಹೊರಡುವ ಪ್ಲೇನ್ ಹತ್ತಿದ್ದಾಯಿತು. ಶ್ರಾವಣಮಾಸ ವಿಪರೀತ ಮಳೆ ಮೋಡ, ಹವಾಮಾನ ಚೂರೂ ಚೆನ್ನಾಗಿರಲಿಲ್ಲ. ಪ್ಲೇನ್‌ನಲ್ಲಿ ಹೋಗುವುದರಿಂದ ಚೆನ್ನಾಗಿರಲಿ ಕೊಳಕು ಆಗುವುದಿಲ್ಲವೆಂದುಕೊಂಡು, ಒಳ್ಳೆಯ ಸಿಲ್ಕ್ ಸೀರೆಯನ್ನೇ ಉಟ್ಟಿದ್ದೆ. ಪ್ಲೇನ್ ಹವಾಮಾನದ ಅಡ್ಡಿಯಿಂದ ತಡವಾಗಿ ಹೊರಟಿತು. ಅದು ನನ್ನ ಮೊದಲ ಪ್ಲೇನ್ ಪ್ರಯಾಣ. ಕಿಟಕಿಯ ಬಳಿ ಕುಳಿತು ಕೆಳಗಿನ ಪ್ರಪಂಚ ಹೇಗೆ ಕಾಣುತ್ತದೆ. ಎಂದು ನೋಡುವ ಕುತೂಹಲ ಆದರೆ ಕಳಚಿ ಬೀಳುವಂತಹ ಮೋಡದ ನಡುವೆ ಏನೂ ಸರಿಯಾಗಿ ಕಾಣುವಂತಿರಲಿಲ್ಲ.ನಾವು ಮೋಡಗಳ ಮದ್ಯೆ ಪ್ರಯಾಣ ಮಾಡುತ್ತಿದ್ದೆವು. ನನಗೆ ನಿರಾಸೆಯಾಗಿತ್ತು. ಕಲ್ಕತ್ತಾ ತಲುಪಲು ಕೇವಲ ಮುಕ್ಕಾಲು ಗಂಟೆ ಸಾಕು ಗಗನ ಸಖಿಯ ಮಾತಿನಂತೆ, ನಮ್ಮ ನಮ್ಮ ಸೀಟಿಗೆ ನಮ್ಮನ್ನು ಸೇರಿಸಿಕೊಂಡು ಬೆಲ್ಟ್ ಕಟ್ಟಿಕೊಂಡಾಯಿತು. ಪ್ಲೇನ್ ಮೇಲೆ ಹಾರಿತು. ಎಷ್ಟು ದೂರ ಪ್ರಯಾಣ ಮಾಡಿದ್ದೆವೋ ತಿಳಿಯದು, ಇದ್ದಕ್ಕಿದ್ದಂತೆ ಏರೋಪ್ಲೇನ್ ತೂಯ್ದಾಡಲಾರಂಭಿಸಿತ್ತು. ಪ್ಲೇನ್ ಆಕಾಶದಲ್ಲಿ ತೂಯ್ದಾಡಲು ಪ್ರಾರಂಭಿಸಿದಾಗ, ಹೊಟ್ಟೆ ತೊಳೆಸಿ ಬಂದಿತ್ತು. ತಡೆಯಲಾಗದೇ ಬೆಳಿಗ್ಗೆ ಹೊರಡುವ ಮುಂಚೆ ತಿಂದಿದ್ದ ಬ್ರೆಡ್ಡು ಕಾಫಿ ಆಚೆಗೆ ಬಂದಿತ್ತು. ಉಟ್ಟಿದ್ದ ಸಿಲ್ಕ್ ಸೀರೆ ಕೊಳೆಯಾಗಿತ್ತು. ಹ್ಯಾಂಡ್ ಬ್ಯಾಗ್‌ನಲ್ಲಿದ್ದ ನ್ಯಾಪ್‌ಕಿನ್‌ನಿಂದ ಒರೆಸಿಕೊಂಡಿದ್ದರು ಸಹ ಕರೆ ಉಳಿದಿತ್ತು. ಎದ್ದು ಟಾಯ್ಲೆಟಿಗೆ ಹೋಗಲಾರದಷ್ಟು ಪ್ಲೇನ್ ಅಲುಗಾಡುತ್ತಿತ್ತು.

ಹವಾಮಾನ ಅಷ್ಟು ಕೆಟ್ಟದಾಗಿತ್ತು. ಮಳೆಯ ಆರ್ಭಟದಲ್ಲಿ ಕಲ್ಕತ್ತಾದಲ್ಲಿ ಪ್ಲೇನ್‌ಗೆ ಇಳಿಯುವ ಸಿಗ್ನಲ್ ಸಿಗಲಿಲ್ಲ. ಎರಡು ಮೂರು ರೌಂಡ್ ತಿರುಗಿದರೂ, ರನ್‌ವೇ ಸರಿಯಾಗಿ ಕಾಣದಿದ್ದರಿಂದ ಮತ್ತೆ ಅಲ್ಲಿಂದ ಹಾಗೇ ಪ್ಲೇನ್‌ನ್ನು ಗೌಹಾತಿಗೆ ಹಿಂತಿರುಗಿವ ಸೂಚನೆ ನೀಡಿದ್ದರು. ಪ್ಲೇನ್ ಹಿಂದಿರುಗಿ ಮತ್ತೇ ಗೌಹಾತಿಯ ಬೋರ್ಜಾರ್ ಏರ್‌ಪೋರ್ಟ್‌ನಲ್ಲಿ ಇಳಿಯ ಬೇಕಾಯಿತು. ನಮ್ಮವರ ಆತಂಕಕ್ಕೆ ಕೊನೆ ಮೊದಲಿಲ್ಲ. ಮಳೆಯ ಕಾರಣದಿಂದ ಪ್ರಯಾಣಕ್ಕೆ ಅನಾನುಕೂಲವಾಗಿತ್ತು.

ಆಫೀಸಿನವರೊಬ್ಬರಿಗೆ ಹೇಳಿ, ಕಲ್ಕತ್ತಾದಿಂದ ಹೊರಡುವ ಹೌರಾ ಎಕ್ಸ್‌ಪ್ರೆಸ್‌ಗೆ ಎರಡು ಫಸ್ಟ್ ಕ್ಲಾಸ್ ಟಿಕೇಟ್ಟುಗಳನ್ನು ರಿಸರ್ವ್ ಮಾಡಿಸಿಯಾಗಿತ್ತು. ಅವರು ಕಲ್ಕತ್ತಾದ ಡಂ ಡಂ ಏರ್‌ಪೋರ್ಟ್‌ಲ್ಲಿ ಟಿಕೆಟ್ಟುಗಳು ನಮಗೆ ಕೊಡುವವರಿದ್ದರು. ಈಗ ನೋಡಿದರೆ ಹೀಗೆ! ನಾವು ಮತ್ತೇ ಹೊರಟ ಸ್ಥಳಕ್ಕೆ ಬಂದು ಸೇರಿದ್ದೇವೆ. ಹವಾಮಾನದ ಪರಿಸ್ಥಿತಿ ಸ್ವಲ್ಪ ಸುಧಾರಿಸಿದರೆ, ಮತ್ತೇ ಆ ಪ್ಲೇನು ಹೊರಡಬಹುದು. ಅಥವಾ ಮಧ್ಯಾಹ್ನ ಒಂದೂವರೆ ಗಂಟೆಗೆ ಕಲ್ಕತ್ತಾಕ್ಕೆ ಹೊರಡುವ ಬೋಯಿಂಗ್‌ನಲ್ಲಿ ನಮಗೆ ಸೀಟು ಸಿಗಬಹುದು. ಏನೇ ಆಗಲಿ ನಾವು ಮತ್ತೆ ಮನೆಗೆ ಹೋಗುವಂತಿಲ್ಲ. ಮನೆಗೆ ಹೋಗಿ ಸೀರೆ ಬದಲಾಯಿಸುವಂತಿದ್ದರೇ ಅಂತನ್ನಿಸಿದ್ದರೂ ಇವರಿಗೆ ಹೇಳುವ ಧೈರ್ಯವಿಲ್ಲ. ಟಾಯ್ಲೆಟ್‌ಗೆ ಹೋಗಿ ಒದ್ದೆ ಬಟ್ಟೆಯಲ್ಲಿ ಸೀರೆಯನ್ನು ಒರೆಸಿ ಕೊಂಡಿದ್ದಾಗಿತ್ತು. ಅಲ್ಲಿರದ ಸೆಕ್ಯೂರಿಟಿ ಲೌಂಚ್‌ನಲ್ಲಿ ಪ್ಲೇನು ಮತ್ತೆ ಯಾವಾಗ ಹೊರಡುವುದೋ ಎಂದು ಕಾಯುತ್ತಾ ಕುಳಿತೆವು. ಕಲ್ಕತ್ತಾದಲ್ಲಿ ಪ್ಲೇನು ಇಳಿಯಲಾಗದೇ ಮತ್ತೇ ವಾಪಸ್ಸು ಬಂದ ಸುದ್ದಿ ಕೇಳಿ ಕೆಲವರು ನಮ್ಮನ್ನು ನೋಡಲು ಬಂದಿದ್ದರು, ಮುಜುಗರವಾಗಿತ್ತು. ಮಾತಾನಾಡಲು ಮುಜುಗರವೆನಿಸುತ್ತಿತ್ತು.

ಪ್ಲೇನ್‌ನಲ್ಲಿದ್ದ ಪ್ಯಾಸೆಂಜರ್ಸ್‌ಗೆಲ್ಲಾ ಏರ್‌ಲೈನ್ಸ್ ಹೋಟೆಲ್ಲಿನಲ್ಲಿ ಊಟಕ್ಕೆ ಸಿದ್ದತೆ ಮಾಡಿದ್ದರು ನನಗೇನೋ ಹೊಟ್ಟೆ ಹಸಿಯುತ್ತಿತ್ತು. ಅಲ್ಲದೆ ಯಾರೋ ಕೂರಿಸಿ ಬಡಿಸಿದರೆ ತಿನ್ನಲು ಬೇಡ ಅಂದೋರು ಉಂಟೆ? ಅಂತ ಎಂದುಕೊಂಡು ಊಟ ಮಾಡಿದೆ. ನಮ್ಮವರಿಗೆ ಆತಂಕದಿಂದ ಅಸಮಾಧಾನ

ಹೆಚ್ಚಾಗಿತ್ತು. ಅಸಮಾಧಾನದಿಂದ ಊಟ ಸೇರಲಿಲ್ಲ. ಪ್ಯಾಂಟ್ ಜೇಬುಗಳಲ್ಲಿ ಕೈ ತೂರಿಸಿ, ಅಲ್ಲಿಂದಿಲಿಗೆ ಇಲ್ಲಿಂದಲ್ಲಿಗೆ ಪರದಾಡ್ತಾ ಸಮಯ ಕಳೆದರು.

ಏರ್‌ಪೋರ್ಟ್‌ನಲ್ಲಿ ಪರಿಚಯದವರೊಬ್ಬರೂ ಇದ್ದುದರಿಂದ ಒಂದೂವರೆ ಗಂಟೆಗೆ ಹೊರಡಲಿರುವ ಬೋಯಿಂಗ್‌ನಲ್ಲಿ ನಮ್ಮಿಬ್ಬರಿಗೆ ಸೀಟು ಸಿಕ್ಕಿತು. ಮತ್ತೇ ಪ್ಲೇನು ಹತ್ತಿದೆವು. ಆದರೆ ಅದೂ ಸಹ ಹೊರಟಿದ್ದು ಬಹಳ ತಡವಾಗಿ, ಮೂರು ಗಂಟೆಗೆ ಪ್ಲೇನ್ ಬಾನಂಗಳದಲ್ಲಿ ಹಾರಿತ್ತು.ಆದರೆ ಮತ್ತೇ ಅದೇ ಮೋಡ ಅದೇ ಮಳೆ, ಅದೇ ಕೆಟ್ಟ ಹವ. ಬಾನಿನಲ್ಲಿ ಪ್ಲೇನಿನಲ್ಲಿ ಕೂತಿದ್ದರೂ ಆತಂಕ ತಪ್ಪಿರಲಿಲ್ಲ. ಆದರೆ ಕಲ್ಕತ್ತಾದಲ್ಲಿ ಸ್ವಲ್ಪ ಮಳೆಯ ಭರಾಟೆ ಕಡಿಮೆ ಆಗಿದ್ದರಿಂದ ಪ್ಲೇನು ಸಾವಕಾಶವಾಗಿ ಕೆಳಗೆ ಇಳಿಯಿತು. ನಾವುಗಳು ಇಳಿದು ಬಸ್ ಹತ್ತಿ, ಸೆಕ್ಯೂರಿಟಿ ಲೌಂಜ್ ಸೇರಿದೆವು ಅಷ್ಟೆ. ಮತ್ತೇ ಮಳೆ ಧೋ ಎಂದು ಸುರಿಯಲು ಪ್ರಾರಂಭವಾಗಿತ್ತು. ನಮಗಾಗಿ ಕಾಯುತ್ತಿದ್ದ ಸ್ನೇಹಿತುರು ಮುಗುಳ್ನಗುತ್ತಾ ನುಡಿದಿದ್ದರು. ಪ್ಲೇನ್ ತಲಪುವುದು ಇನ್ನು ಹತ್ತು ನಿಮಿಷ ತಡವಾಗಿದ್ದರೆ ಪ್ಲೇನು ಇಳಿಯಲಾಗುತ್ತಿರಲಿಲ್ಲ., ನೀವು ಮತ್ತೇ ಗೌಹಾತಿಗೇ ವಾಪಸ್ಸು ಹೋಗಬೇಕಾಗುತ್ತಿತ್ತಾ ಎಂದಾಗ ನಾವು ಇವತ್ತು ಮನೆ ಬಿಟ್ಟ ಗಳಿಗೆ ಸರಿ ಇಲ್ಲವೇನೋ, ಇನ್ನು ಏನೇನು ಕಾದಿದೆಯೋ ಎಂದು ಚಿಂತಿಸುವುದಾಗಿತ್ತು.

ಆ ಸ್ನೇಹಿತರಿಂದ ಟಿಕೆಟ್ಟುಗಳನ್ನು ಪಡೆದುಕೊಂಡು ಟ್ಯಾಕ್ಸಿ ಹತ್ತಿದೆವು. ಡಂ ಡಂ ಏರ್‌ಪೋರ್ಟ್‌ನಿಂದ ಹೌರಾ ರೈಲ್ವೇ ಸ್ಟೇಷನ್‌ಗೆ ಸುಮಾರು ೨೨ ಕಿ.ಮೀ. ಮಳೆ ಸುರಿಯುತ್ತಲೇ ಇದೆ. ರಸ್ತೇಯೆಲ್ಲಾ ನೀರಿನಿಂದ ತುಂಬಿ ಹೋ ಗಿದೆ. ಟ್ಯಾಕ್ಸಿ ಎಷ್ಟು ವೇಗವಾಗಿ ಹೋಗಲು ಸಾಧ್ಯ? ಆಗಲೇ ಸಾಯಂಕಾಲ ಐದು ಗಂಟೆಯಾಗಲಿದೆ. ನಾವು ಆದಷ್ಟು ಬೇಗ ಹೌರಾ ಸ್ಟೆಷನ್ ತಲುಪಲೇ ಬೇಕು.

ಡ್ರೈವರ್ ಹೇಳಿದ..."ಇವತ್ತು ಇಂಡಿಪೆಂಡೆನ್ಸ್ ಡೇ ಸಾಬ್. ಆಫೀಸಿಗೆ ರಜಾ. ಆದ್ದರಿಂದ ವಾಹನ ಸಂಚಾರ ಕಡಿಮೆ. ಇಲ್ಲದಿದ್ದರೆ ಕಲ್ಕತ್ತಾದಲ್ಲಿ ಟ್ರಾಫಿಕ್ ಜ್ಯಾಮ್ ಆದರೆ ಎರಡೆರಡು ಗಂಟೆಯಾದರೂ ಕ್ಲಿಯರ್ ಆಗುಲ್ಲ. ಇವತ್ತು ನಾನು ನಿಮ್ಮನ್ನು ಟೈಮಿಗೆ ಸರಿಯಾಗಿ ಸ್ಟೇಷನ್ ತಲುಪಿಸ್ತೀನಿ."

ಅವನು ಆಶ್ವಾಸನೆ ನೀಡಿದರೂ ಶಂಕೆಯಿಂದ ಉಸಿರು ಕಟ್ಟುವಂತಾಗಿತ್ತು. ಒಂದು ವೇಳೆ ಸಮಯಕ್ಕೆ ಸರಿಯಾಗಿ ಹೋಗಲಾಗದೇ ಟ್ರೈನ್ ತಪ್ಪಿ ಹೋದರೇ .... ಏನಾದರೂ ಆಡಲೂ ಹೆದರಿ ಸುಮ್ಮನಾಗಿದ್ದೆ. ಇವರ ಕಡೆ ನೋಡುವ ಧೈರ್ಯವಿರಲಿಲ್ಲ.

ಸ್ಟೇಷನ್‌ನಲ್ಲಿಳಿದು, ಕೂಲಿಯವನೊಡನೆ ಲಗೇಜನ್ನು ಹೊರಿಸಿಕೊಂಡು, ಅವನೆಲ್ಲಿ ಮರೆಯಾಗಿ ಬಿಡುವನೋ ಎನ್ನುವ ಆತಂಕದಿಂದ ಆ ಜನ ಜಂಗುಳಿಯಲ್ಲಿ ಬೇಗ ಬೇಗ ಅವನ ಹಿಂದೆ ಹಿಂದೆ ನಡೆದು ನಮ್ಮ ಕಂಪಾಟ ೯ ಮೆಂಟ್ ಸೇರಿದೆವು. ನಮಗೆ ಕೂಪೆಗೆ ಬುಕ್ ಮಾಡಿಸಲಾಗಿತ್ತು.. ಲಗೇಜನ್ನು ಇಳಿಸಿ, ಕೂಲಿಯವನಿಗೆ ದುಡ್ಡು ಕೊಟ್ಟು ಹಾಯಂತ ಕುಳಿತ ಕೆಲ ಹೊತ್ನಲ್ಲೇ ಸಮಯಕ್ಕೆ ಸರಿಯಾಗಿ ಟ್ರೈನು ಹೊರಟಿತು. ಆ ದಿನದ ಚಮತ್ಕಾರದ ಗುಂಗಿನಿಂದ ನಾನಿನ್ನು ಹೊರ ಬಂದಿರಲಿಲ್ಲ.

ಹೌರಾ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಮಾಡುವುದೇ ಒಂದು ಅನುಭವ. ಬೋಗಿಗಳನ್ನು ಎಳೆಯಲು ಎರಡೆರಡು ಇಂಜಿನ್ನುಗಳು. ಜಗ್. ಜಗ್. ಜಗ್. ಜಗ್. ಎಂದು ಸದ್ದು ಮಾಡುತ್ತಾ ಹಳಿಗಳ ಮೇಲೆ ಓಡುವ ರೈಲಿನ ವೇಗ ಹೆಚ್ಚಿದಂತೆ, ಮಾವು ಇರುವ ಲೋಕವೇ ಬೇರೆ ಎಂದೆನಿಸುತ್ತದೆ. ನಂತರವೂ ಒಂದೆರಡು ದಿನಗಳು ರೈಲಿನಲ್ಲಿ ಕೂತಿರುವಂತೆಯೇ ಭಾಸವಾಗುತ್ತದೆ.

ಸುಮಾರು ರಾತ್ರಿ ಒಂಭತ್ತು ಒಂಭತ್ತೂವರೆ ಗಂಟೆಯ ಸಮಯ. ಕಲ್ಕತ್ತಾ ಬಿಟ್ಟು ಸುಮಾರು ಮೂರೂವರೆ ಗಂಟೆ ಕಳೆದಿದೆ. ಖರಗಪುರದ ರೈಲ್ವೆ ಸ್ಟೇಷನ್ನನ್ನೂ ಸಮೀಪಿಸುತ್ತಿದೆ, ಇದ್ದಕ್ಕಿದ್ದಂತೆ ಕರ್ಕಶವಾದ ಸದ್ದನ್ನು ಮಾಡುತ್ತಾ ರೈಲು ತನ್ನ ವೇಗವನ್ನು ಕಡಿಮೆ ಮಾಡಿತು. ಇವತ್ತಾ ಏನೋ ಅಪಘಾತವಾಗಲಿದೆ ಎಂದುಕೊಂಡು ಮಿಟಿ ಮಿಟಿ ಒಬ್ಬರನ್ನೊಬ್ಬರು ನೋಡಿದೆವು. ನಮ್ಮವರು ಮತ್ತೆ,ಮೇಲೆ ಮೇಲೆ ಸಿಗರೇಟು ಸೇದಲು ಪ್ರಾರಂಭಿಸಿದ್ದರು. ಸಿಗರೇಟಿನ ವಾಸನೆಯಿಂದ ಕೂಪೆಯೆಲ್ಲಾ ತುಂಬಿ ಹೋಗಿತ್ತು. ನಾನು ಕೆಳಗಿನ ಸೀಟಿನಲ್ಲಿ ಮಲಗಿದ್ದೆ. ಇವರು ಮೇಲಿನ ಬರ್ತ್ ಮೇಲೆ ಮಲಗಿದ್ದರು. ಕೆಳಗಿಳಿದು ಬಂದು ಹೊರಗೆ ಇಣುಕಿದರು. ಹೊರಗೆ ಗಾಡಾಂಧ

ಕಾರ. ಏನೂ ಕಾಣುವಂತಿಲ್ಲ. ಭರೋ ಎಂದು ಬೀಸುತ್ತಿರುವ ಚಂಡಮಾರುತ. ಪ್ರಳಯವಾಗುತ್ತೇನೋ ಎನ್ನುವಂತೆ ಕೇಳಿ ಬರುತ್ತಿರುವ ಭೀಕರವಾದ ಸದ್ದು... ಓಡುತ್ತಿರುವ ರೈಲಿಗೆ ಅಡ್ಡಲಾಗಿ ಬೀಸುತ್ತಿರುವ ಚಂಡಮಾರುತ, ರೈಲನ್ನೇ ಬೀಳಿಸುತ್ತದೆಯೋ ಎನ್ನುವಷ್ಟು ತೀವ್ರತೆ.

ನಮ್ಮವರಿಗೆ ದಿಗಿಲು, ಈ ಅಲುಗಾಟ ಕುಲುಕಾಟದಿಂದ ಇವಳಿಗೆ ಈ ಕೂಪೆಯಲ್ಲೇ ಹೆರಿಗೆಯಾಗಿ ಬಿಟ್ಟರೇ ತನ್ನ ಗತಿ ಏನು ಅಂತ.. ಸುಮ್ಮನೆ ಬಾರಿ ಬಾರಿಗೆ ಹೇಗಿದೀಯಾ ಅಂತ ವಿಚಾರಿಸಿಕೊಳ್ಳಲಾರಂಭಿಸಿದರು. ನನಗೂ ಆತಂಕ ಶುರುವಾಗಿತ್ತು. ಇದು ಮರೆಯಾಲಾಗದ ಒಂದು ಅನುಭವ.

ಚಂಡಮಾರುತದ ಕಾರಣದಿಂದ, ರೈಲು ಅತಿ ತಡವಾಗಿ ಎರಡು ದಿನಗಳ ನಂತರ ಮದ್ರಾಸನ್ನು ತಲುಪಿತು. ನಮಗೆ ಬೆಳಿಗ್ಗೆ ಹೊರಡುವ ಬೃಂದಾವನ್ ಎಕ್ಸ್‌ಪ್ರೆಸ್ ಸಿಗಲಿಲ್ಲ.ನಾವು ಮದ್ರಾಸಿನ ರೈಲ್ವೇ ಸ್ಟೇಶನ್‌ನ ಫಸ್ಟ್ ಕ್ಲಾಸ್ ವೆಯಿಟಿಂಗ್ ರೂಂನಲ್ಲಿ ಕೂರಬೇಕಾಯಿತು. ಟ್ರೈನಿನಲ್ಲಿ ಕೇಟರಿಂಗ್ ಸರ್ವಿಸ್ ಚನ್ನಾಗಿತ್ತು. ಹೊತ್ತು ಹೊತ್ತಿಗೆ ಸರಿಯಾಗಿ ಆರ್ಡರ್ ತೆಗೆದುಕೊಂಡು ಬ್ರೇಕ್‌ಫ್ರಾಸ್ಟ್, ಮೀಲ್ಸ್ ಸಪ್ಲೈ ಮಾಡುತ್ತಿದ್ದರು. ಈಗಂತೂ ಮದ್ರಾಸು ತಲುಪಿದ್ದೇನೆ. ಇಲ್ಲಿ ಊಟ ಕಾಫಿಗೆ ಕೊರತೆ ಇಲ್ಲ. ಪಕ್ಕದಲ್ಲೇ ಒಳ್ಳೆ ರೆಸ್ಟೋರೆಂಟ್‌ಇದೆ. ಆದರೆ ಒಳ್ಳೆ ಊಟ ತಿಂಡಿಯ ರುಚಿ ಈಗ ಯಾರಿಗೆ ಬೇಕಾಗಿದೆ ?

ಮಧ್ಯಾಹ್ನ ಅಲ್ಲಿಂದ ಹೊರಡುವ ಒಂದು ಟ್ರೈನ್ ಹತ್ತಿದೆವು. ಅದು ಷೆಡ್ಯೂಲ್ ಪ್ರಕಾರ ಬೆಂಗಳೂರನ್ನು ರಾತ್ರಿ ಒಂಭತ್ತರ ಹೊತ್ತಿಗೆ ತಲಪಬೇಕು. ಆದರೆ ಏನು ಕಾರಣವೋ ಏನೋ ಅದು ಬೆಂಗಳೂರನ್ನು ತಲುಪಿದಾಗಮಧ್ಯ ರಾತ್ರಿ ಒಂದು ಗಂಟೆ. ರಾತ್ರಿ ಈ ಹೊತ್ನಲ್ಲಿ ಟ್ಯಾಕ್ಷಿಯಲ್ಲಿ ಹೋಗೋದು ಬೇಡ. ಅಲ್ಲೇ ವೈಯಿಟಿಂಗ್ ರೂಂನಲ್ಲಿದ್ದು ಬೆಳಗಾಗುತ್ತಲೇ ಹೊರಡೋಣ ಎಂದೆ. ನಮ್ಮವರು ಬಡಪಟ್ಟಿಗೂ ಒಪ್ಪಲಿಲ್ಲ. ''ಸಧ್ಯ ಮಹಾರಾಯಿತಿ ಮೊದಲು ನಿನ್ನನ್ನು ಮನೆ ತಲುಪಿಸಿದರೆ ಸಾಕಾಗಿದೆ''ಎಂದು ಹೇಳಿ ಟ್ಯಾಕ್ಸಿ ಗೊತ್ತು ಮಾಡಿದರು.

ಇಲ್ಲಿ ಇನ್ನು ಒಂದು ಫಜೀತಿಯನ್ನು ತಿಳಿಸಲೇಬೇಕು.. ನನ್ನ ಅತ್ತೆ

ತಮ್ಮ ಮಗಳಿಗೆ ಹೆರಿಗೆ ಸಮಯದಲ್ಲಿ ಸಹಾಯ ಮಾಡಲೆಂದು ಅಮೆರಿಕಾಕ್ಕೆ ಹೊರಟು ಹೋಗಿದ್ದರಿಂದ, ನಮ್ಮ ಮಾವ ಮನೆಯನ್ನು ಬಾಡಿಗೆಗೆ ಕೊಟ್ಟು ಚಂಡೀಘರ್‌ಗೆ ಹೊರಟು ಹೋಗಿದ್ದರು. ಹಾಗಾಗಿ, ನಾವು ಸೀದಾ ನಮ್ಮ ಅಕ್ಕನ ಮನೆಗೆ ಬಂದೆವು. ಮಧ್ಯೆ ರಾತ್ರಿ ಎರಡು ಗಂಟೆಯ ಹೊತ್ತಿನಲ್ಲಿ ಮಲಗಿದ್ದವರನ್ನು ಎಬ್ಬಿಸಿ, ಒದ್ದೆ ಮುದ್ದೆಯಾದ ಲಗೇಜನ್ನು ಇಳಿಸಿ, ನನ್ನನ್ನು ನನ್ನ ಅಕ್ಕನ ಸುಪರ್ದಿಗೆ ವಹಿಸಿ, ಇವರು ಸಮೀಪದಲ್ಲಿದ್ದ ತಮ್ಮ ಚಿಕ್ಕಪ್ಪನ ಮನೆಗೆ ಹೋದರು. ಅಲ್ಲಿಗೆ ದಡ ಸೇರಿದಂತಾಗಿತ್ತು.

ಎರಡು ದಿನಗಳ ನಂತರ ಇವರು ವಾಪಸ್ಸು ಗೌಹಾಟಿಗೆ ಹೊರಟು ಹೋದರು. ನಾನು ನನ್ನ ತಮ್ಮನ ಜತೆ ಟ್ರೇನ್‌ನಲ್ಲಿ ಪ್ರಯಾಣ ಮಾಡಿ ಶಿವಮೊಗ್ಗ ಸೇರಿದೆ. ಇದು ನನ್ನ ಜೀವಮಾನದಲ್ಲೇ ಮರೆಯಲಾಗದ ವಿಚಿತ್ರ ಅನುಭವ. ಬಹುಶಃ ಇನ್ಯಾರೂ ಇಂತಹ ಅನುಭವಕ್ಕೆ ಸಿಕ್ಕಿರಲಾರರು ಅಂತ ನನಗೆ ಅನ್ನಿಸುತ್ತೆ. ದೂರಾದೇಶ, ಸಮಯ ಅಂದರೆ ಯಾವ ಸ್ಥಿತಿ ಒದಗುತ್ತೇ ಎನ್ನುವುದಕ್ಕೆ ಈ ಅನುಭವವೊಂದೇ ಸಾಕು. ಇಂಥ ಪರಿಸ್ಥಿತಿ ಒದಗಿರಲಿ ಎಂದೇ, ಹಿಂದಿನವರು ತಮ್ಮ ತಮ್ಮ ಹೆಣ್ಣು ಮಕ್ಕಳನ್ನು ಹತ್ತಿರ ಹತ್ತಿರದಲ್ಲೇ ಕೊಟ್ಟು ಮದುವೆ ಮಾಡುತ್ತಿದ್ದರೇನೋ.

ಒಂದು ವೇಳೆ ಖರಗಪುರದ ಬಳಿ, ನನಗೆ ಟ್ರೈನಿನಲ್ಲೆ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಏನು ಮಾಡ್ತಿದ್ರಿ? ಎಂದು ತಮಾಷೆಗೆ ಕೇಳಿದರೆ ಇವರಲ್ಲಿ ಉತ್ತರವಿಲ್ಲ. ನನಗೆ ಈ ಜವಾಬ್ದಾರಿಯೆಲ್ಲಾ ಇಷ್ಟವಿಲ್ಲ. ಅದಕ್ಕೆ ಮದುವೇನೇ ಬೇಡಾಂತ ಅಮ್ಮನಿಗೆ ಹೇಳಿದೆ. ಅಮ್ಮ ಕೇಳಲಿಲ್ಲ. ಮದುವೆ ಮಾಡಿಸಿ ಬಿಟ್ಟಳು. ಕಷ್ಟ ಎಲ್ಲಾ ನನಗೆ ಎಂಥಂಥ ಪರಿಸ್ಥಿತಿಯೆನ್ನೆಲ್ಲಾ ಅಂತ ಅನ್ನುತ್ತಾರೆ.

ಇಷ್ಟೆಲ್ಲಾ ಕಷ್ಟಗಳನ್ನು ಅವಾಂತರಗಳನ್ನು ಎದುರಿಸಿ ಹುಟ್ಟಿದ ಮಗಳ ಮೇಲೆ ಇವರಿಗೆ ಅಪಾರ ಪ್ರೀತಿ. ಹುಟ್ಟೋಕೆ ಮುಂಚೇನೇ ನನ್ನನ್ನು ಎಷ್ಟು ಹೆದರಿಸಿದೆ ಎಂದು ಮುದ್ದಾಡಿದ್ದರು.

ನಾವು ಅಸ್ಸಾಂನಲ್ಲಿದ್ದಾಗ ಹುಟ್ಟಿದ ನಮ್ಮ ಮಗಳನ್ನು ಆಸ್ಪತ್ರೆಯಲ್ಲಿ ಎಲ್ಲರೂ ಅಸ್ಸಾಮಿ ಎಂದೇ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ಲೇಡಿ

ಡಾಕ್ಟರ್ ಡಾ. ಕ್ರಷ್ಣವೇಣಿ ಸಹ, ಹೇಗಿದಾಳೆ ನಮ್ಮ ಅಸ್ಸಾಮಿ ಹುಡುಗಿ? ಏನಾಂತಳೆ ನಮ್ಮ ಅಸ್ಸಾಮಿ? ಅಂತ ವಿಚಾರಿಸುತ್ತಿದ್ದರು. ಹೀಗಾಗಿ ಅವಳಿಗೆ ಅಸ್ಸಾಮಿ ಆಗಿ, ಅದು ಚಿಕ್ಕದಾಗಿ, ಆಚೂ, ಆಚಿಯಾಗಿ ಬಿಟ್ಟಿತ್ತು. ಬೇರೆ ನಾಮಕರಣ ಶಾಸ್ತ್ರ ಇನ್ನೂ ಮಾಡಿರಲಿಲ್ಲ. ಆದರೆ, ಆಕಿದು ಎದೆಂತಹ ವಿಚಿತ್ರ ಹೆಸರು ಎಂದು ಯಾರಾದರೂ ಕೇಳುವ ಮೊದಲೇ, ನಾವು ಬೇರೆ ಹೆಸರನ್ನು ಇಟ್ಟೆವು. ಕ್ರಮೇಣ ಆಚಿ ಹೆಸರನ್ನು ಮರೆತರು. ಆದರೆ ಯಾರಾದ್ರೂ ಕೇಳಿದ್ದರೂ, ಸಕಾರಣವಾಗಿ ಹೇಳಬಹುದಾಗಿತ್ತು.. ಆದರೂ ಸ್ಕೂಲಿಗೆ ಸೇರಿಸುವಾಗ ಬೇರೆ ಹೆಸರನ್ನು ಕೊಡಲೇ ಬೇಕಲ್ಲವೇ? ಕ್ರಮೇಣ ಇಟ್ಟ ಹೆಸರಿಗೆ ಹೊಂದಿಕೊಂಡೆವು. ಮಾತು ಕಲಿತ ಮೇಲೆ ಯಾರಾದರೂ, ನಿನ್ನ ಹೆಸರೇನು ಎಂದು ಕೇಳಿದರೆ ಪುಚ ಎನ್ನುತ್ತದ್ದಳು. ಆಚಿಗಿಂತ ವಿಚಿತ್ರವಾದ ಹೆಸರಲ್ಲವೇ ಪುಚ?

ಬಾಣಂತನ ಮುಗಿದ ನಂತರ ಮತ್ತೆ ನಮ್ಮಿಬ್ಬರನ್ನು ಕರೆದೊಯ್ಯಲು ಇವರೇ ಪುನಃ ಬಂದಿದ್ದರು, ಕೆಲವು ದಿನಗಳ ರಜೆಯ ಮೇಲೆ. ಅಷ್ಟು ಹೊತ್ತಿಗಾಗಲೇ ಮಗುವಿಗೆ ಏಳು ತಿಂಗಳು ಚೆನ್ನಾಗಿ ನಕ್ಕು ಆಟ ಆಡುವ ವಯಸ್ಸು. ಮಗಳನ್ನು ನೋಡಿ ಖುಷಿಯಾಗಿತ್ತು. ಮಗು ಎಂದರೆ ಹೇಗೆ ಹೇಗೋ ಇರುತ್ತೆ ಅಂತ ಅಂದ್ಕೊಂಡಿದ್ದೆ. ಆದರೆ ಪರವಾಗಿಲ್ಲ, ಚೆನ್ನಾಗಿದ್ದಾಳೆ ಎಂದಿದ್ದರು.

ಇವಳೇನೂ ಹೊಲೆ ಮನೆ ಕೂಸಲ್ಲ. ಅಂಬೆಗಾಲಿಡುವ ವಯಸ್ಸಾಗಿದೆ. ಚೆನ್ನಾಗಿಲ್ಲದೇ ಏನೂ ದಾಡಿ? ಎಂದು ನಾನೂ ನುಡಿದಿದ್ದೆ.

ಮತ್ತೆ ಮರು ಪ್ರಯಾಣ ಶಿವಮೊಗ್ಗದಾದ ಬೆಂಗಳೂರಿಗೆ ಲಕ್ಷುರಿ ಬಸ್‌ನಲ್ಲಿ ಬಂದೆವು. ಒಂದೆರಡು ದಿನಗಳು ಇವರ ಚಿಕ್ಕಮ್ಮನ ಮನೆಯಲ್ಲಿದ್ದು, ಬೃಂದಾವನ್ ಎಕ್ಷ್‌ಪ್ರೆಸ್ ಹತ್ತಿದೆವು. ಎರಡು ದಿನಗಳ ನಂತರ ಕಲ್ಕತ್ತಾ ಸೇರಿದೆವು. ಅಲ್ಲಿಂದ ಪುನಃ ಏರೋಪ್ಲೇನ್ ಹತ್ತಿ ಗೌಹಾತಿಯ ದಿಕ್ಕಿಗೆ ಹಾರಿದೆವು. ಆದರೆ ಮಗಳು ಒಂದುಗಳಿಗೆ ಅಳು ನಿಲ್ಲಿಸಲಿಲ್ಲ. ತೊಡೆಯ ಮೇಲೆ ಕೂರಲೂ ಇಲ್ಲ. ಅತ್ತೂ ಅತ್ತೂ ಹೆದರಿಸಿದ್ದಳು. ಇಳಿದರೆ ಸಾಕು ಎನಿಸವಂತೆ.

ಈ ನಮ್ಮ ಪ್ರಯಾಣದ ವೈಖರಿ ಹೇಗಿದೆ? ಏರೋ ಪ್ಲೈನ್‌ನಲ್ಲಾಗಲೀ, ಫಸ್ಟ್‌ಕ್ಲಾಸ್ ಬೋಗಿಯಲ್ಲಾಗಲೀ, ಟ್ಯಾಕ್ಷಿಯಲ್ಲಾಗಲೀ, ನಾವು

ಎಂಜಾಯ್ ಮಾಡಲಿಲ್ಲ. ಆತಂಕದ ತುಟ್ಟತುದಿಯಲ್ಲಿ ಕುಳಿತು, ಯಾವ ಗಳಿಗೆಯಲ್ಲಿ ಏನೋ ಎಂಬ ಅಧೀರತೆಯಲ್ಲಿ ಕ್ಷಣಗಳನ್ನು ತಳ್ಳಿದೆವು.

ಮನೇಲಿ ಚಿಕ್ಕ ಮಕ್ಕಳಿದ್ದರೆ, ಸಮಯ ಎಷ್ಟಿದ್ದರೂ ಸಾಲದು. ಈಗ ಮಗಳನ್ನು ನೋಡಿಕೊಳ್ಳುವ ಕೆಲಸ ಕೈತುಂಬಾ. ಕೆಳಗೆ ಬಿಡಲು ಹೆದರಿಕೆ. ಮಲಗಿ ಲಿದ್ರಿಸಿದ್ದಾಗ ಮನೆ ಕೆಲಸ ಮಾಡಿಕೊಳ್ಳಬೇಕು. ಜೋಲಿ ಕಟ್ಟಿ ಮಲಗಿ ಸಿದ್ದರೆ, ಜೋಲಿಯಿಂದ ತಲೆ ಇಳಿ ಬಿಟ್ಟು ಹೆದರಿಸಿದ್ದಳು. ಮಂಚದ ಮೇಲೆ ಮಲಗಿಸಿ, ಹೊರಳಾಡಿ ಬೀಳದಂತೆ ಸುತ್ತಲೂ ದಿಂಬುಗಳನ್ನಿಟ್ಟು, ಬೆಳಗಿನ ಹೊತ್ತಿನಲ್ಲೂ ಸಹ ಸೊಳ್ಳೆ ಪರದೆ ಕಟ್ಟಿ ಮಲಗಿಸಿದರೇ ಧೈರ್ಯ.

ಬೆಳ್ಳಿಗ್ಗೆ ಆರು ಗಂಟೆಗೆ ಎದ್ದು ನಾವುಗಳೂ ಏಳುವಂತೆ ರೊಪ ಮಾಡು ತ್ತಿದ್ದಳು. ಅಷ್ಟು ಹೊತ್ತಿಗಾಗಲೇ ಬೆಟ್ಟಂ ಬೆಳಕಾಗಿ, ಸೂರ್ಯನ ತಾಪ ಹೆಚ್ಚಿ ಬೆವರಿಳಿಯುವಂತೆ ಮಾಡುತ್ತಿತ್ತು. ಆಫೀಸಿಗೆ ಹೊಗುವವರೆಗೂ, ಇವರು ನೋಡಿ ಕೊಂಡರೆ, ನಂತರ ಆ ಕೆಲಸ ನನ್ನದು. ಕೆಲಸದ ರಾಶಾಳಿಗೆ ಇವಳು ಅತಿ ಪ್ರೇಮದವಳಾದಳು ಟೂ... ಟೂ.. ಎಂದು ಕರೆದು ಮುದ್ದಾಡಿಸುತ್ತಿ ದ್ದಳು. ಬಿಹೂ ಹಾಡು ಹೇಳಿ ಕುಣಿದು ನಗಿಸುತ್ತಿದ್ದಳು. ಅವಳು ಕೆಲಸ ಮುಗಿಸಿ ಹೊರಟರೆ ಅವಳ ಜತೆ ಹೋಗ್ತಿನಿ ಅಂತ ಹಠ ಮಾಡಿ ಅಳುತ್ತಿದ್ದಳು.

ಲಾಲನೆ ಪಾಲನೆ ಶುಶ್ರೂಷೆಯಲ್ಲಿ ದಿನಗಳು ಸರಿದವು. ನಡೆಯುವ ದನ್ನು ಕಲಿತ್ತಿದ್ದಳು. ಮಾತಾಡುವುದನ್ನು ಕಲಿತ್ತಿದ್ದಳು. ಈಗ ಸುಧಾರಿಸುವುದು ಇನ್ನು ಕಷ್ಟ. ರಾಶಾ ರಾಶಾ ಅಂತ ಕೂಗುತ್ತಾ ಅವಳ ಹಿಂದೆ ಓಡಿ ಬಿಡುತ್ತಿ ದ್ದಳು. ಒಮ್ಮೆ ಹಾಗೆ ಆಯಿತು. ಅವಳು ತನ್ನ ಕೆಲಸ ಮುಗಿಸಿ, ಕಾಣದಂತೆ ಮೆಲ್ಲಗೆ ಹೋಗಿದ್ದರೂ, ಯಾವುದೋ ಮಾಯದಲ್ಲಿ ಅವಳು ಹೊದುದನ್ನು ಕಂಡು ಓಡಿ ಬಿಟ್ಟಿದ್ದಳು. ನನಗೆ ಅವಳ ಹಿಂದೆ ಓಡಿ ಓಡಿ ಹಿಡಿಯಲು ನಾಚಿಕೆ. ರಾಶಾ ಅಂತ ಕೂಗಿದರೂ ಅವಳಿಗೆ ಕೇಳಿಸಿರಲಿಲ್ಲ. ಅವಳು ಅವಳ ಪಾಡಿಗೆ ನಡೆದು ಮರೆಯಾದಳು. ಇವಳು ಅವಳ ಹಿಂದೆ ಓಡಿದಳು. ನಾನು ಬಾಗಿಲಲ್ಲಿ ನಿಂತು ಕೂಗಿದರು ಅವಳಿಗೆ ಕೇಳಿಸಿರಲಿಲ್ಲ, ಅವಳು ಅವಳ ಪಾಡಿಗೆ ನಡೆದು ಮರೆಯಾದಳು. ಇವಳು ಅವಳ ಹಿಂದೆ ಓಡಿದಳು. ನಾನು ಬಾಗಿಲಲ್ಲಿ ನಿಂತು ಕೂಗಿದರೂ ಹಿಂತಿರುಗಿ ಬಂದಿರಲಿಲ್ಲ. ರಸ್ತೆಯಲ್ಲಿ ಹೋಗಿತ್ತಿದ್ದವರೊಬ್ಬರು

ಬಲವಂತವಾಗಿ ಎಳಕೊಂಡು ಮನೆ ಬಳಿಗೆ ಕರೆತಂದು ಬಿಟ್ಟರು. ಚೆನ್ನಾಗೆ ನಾಲ್ಕೇಟು ಬಿಗಿದಿದ್ದೆ. ಯಾಕೋ ಬೇಸರವೆನಿಸಿತ್ತು. ಮಗುವಿನ ಜೊತೆ ಆಟ ವಾಡಲು ಬೇರೆಯಾರಿಲ್ಲ. ಹತ್ತಿರ ನಮ್ಮವರು ಯಾರಿಲ್ಲ. ಮಗು ಒಂಟಿ ಎನಿಸುತ್ತಿತ್ತು. ದೂರಾದೇಶ ಎಲ್ಲಾ ಕಷ್ಟ..ಏನೋ

ದಿಬ್ರೂಗರ್‌ನಲ್ಲಿ ನಮ್ಮವರ ಸೋದರಮಾವನ ಮಗಳು ಅಳಿಯ ಇದ್ದರು. ಅವರು ಬೆಂಗಳೂರಿಗೆ ಹೋಗುವುದಾದರೆ, ಗೌಹಾತಿಯ ಮುಖಾಂತ ರವೇ ಹೋಗಬೇಕು. ಒಮ್ಮೆ ಹಾಗೆ ಹೋಗುವಾಗ, ನಮಗೆ ಮೊದಲೇ ತಿಳಿದಿ ದ್ದರಿಂದ ನಾವು ಅವರನ್ನು ಏರ್‌ಪೋರ್ಟ್‌ನಲ್ಲಿ ಭೇಟಿಯಾಗಿ ಮಾತನಾಡ ಲೆಂದು ಹೋಗಿದ್ದವು. ಅವರ ಮಗಳು ನಮ್ಮ ಮಗಳಿಗಿಂತ ಎರಡು ವರ್ಷಕ್ಕೆ ದೊಡ್ಡವಳು. ಆದರೆ ಎತ್ತರ ಗಾತ್ರದಲ್ಲಿ ನಮ್ಮ ಮಗಳಿಗಿಂತ ಚಿಕ್ಕವಳಾಗಿ ಕಾಣುತ್ತಿದ್ದಳು. ಇವಳು ಅವಳನ್ನು ಕಂಡೊಡನೆ ಎಷ್ಟು ವರ್ಷದಿಂದ ಪರಿಚಯ ವೋ ಎಂಬಂತೆ ಅವಳ ಕೈಲಿದ್ದ ಕಾಮಿಕ್ಸ್ ಪುಸ್ತಕವನ್ನು ಕಿತ್ತುಕೊಂಡು ಓದು ವಂತೆ ನಟಿಸುತ್ತಾ ಕೂತಿದ್ದಳು. ನಾವುಗಳು ನಮ್ಮ ನಮ್ಮ ಮಾತಿನಲ್ಲಿ ಮುಳುಗಿ ಹೋಗಿದ್ದೆವು. ಬಹುಶಃ ಆ ಹುಡುಗಿ ಮುನಿಸಿಕೊಂಡು ಬೇರೆ ಕಡೆ ಹೊರಟು ಹೋದಾಗ ಇವಳೂ ಎದ್ದು ಬಿಟ್ಟಿದ್ದಾಳೆ. ನಾವು ಗಮನಿಸಲೇ ಇಲ್ಲ. ಅಲ್ಲಿ ಕೂತಿದ್ದವಳು ಎಲ್ಲಿ ಹೋದಳು ಅಂತ ಹುಡುಕಿದ್ದೇ ಹುಡುಕಿದ್ದು. ಏರ್ ಫೀಲ್ಡ್‌ನೆಲ್ಲಾ ನೋಡಿದ್ದಾಯಿತು. ಕಡೆಗೆ ಇಂಡಿಯನ್ ಏರ್‌ಲೈನ್ಸ್ ಆಫೀಸಿನ ಅಧಿಕಾರಿಯೊಬ್ಬ ಅವಳನ್ನು ಎತ್ತಿಕೊಂಡು ಹೊರಗೆ ಬಂದ. ಈ ಮಗು ಯಾರದ್ದು? ಅಂತ ಹಿಂದಿಯಲ್ಲಿ ಕೇಳಿದಾಗ, ಸಧ್ಯ ಸಿಕ್ಕಿದಳಲ್ಲ ಅಂತನ್ನಿಸಿ ದರೂ, ಕಾಲು ನಿಲ್ಲದೇ ಎಲ್ಲೆಲ್ಲಿಯೋ ತಿರುಗುವ ಅವಳ ಹುಡುಗಾಟಕ್ಕೆ ಹೊಡೆಯ ಬೇಕೆನಿಸಿತ್ತು.

ಎಷ್ಟು ತುಂಟಿಯಲ್ಲಾ ನಿಮ್ಮ ಮಗಳು ಅಂತ, ಕೆನ್ನೆ ಹಿಂಡಿ ಆತ ನುಡಿದಾಗ ಖುಷಿಯಾಗಿತ್ತು. ಆದರೆ ಆತಂಕದ ಆ ಗಳಿಗೆಗಳು, ಸಿಟ್ಟನ್ನು ಹೆಚ್ಚಿಸಿದ್ದವು.(ಚಿಕ್ಕ ಮಕ್ಕಳು ಎಂದ ಮೇಲೆ ಕೆಮ್ಮು, ನೆಗಡಿ, ಜ್ವರ ಇವೆಲ್ಲಾ ಸಾಮಾನ್ಯ. ತಕ್ಷಣಕ್ಕೆ ಬೇಕಾಗುವ ಸಿರಪ್, ಮಾತ್ರೆಗಳನ್ನೆಲ್ಲಾ ಮೊದಲೇ ತೆಗೆದು ಇಟ್ಟುಕೊಂಡಿರುತ್ತಿದ್ದೆವು. ಏಕೆಂದರೆ ನಾವು ಇದ್ದುದು ಸಿಟಿಯಿಂದ

ದೂರ ತಕ್ಷಣಕ್ಕೆ ಔಷಧಿ ಮಾತ್ರೆ ಸಿಗುವಂತಿರಲಿಲ್ಲ. ಹತ್ತಿರದಲ್ಲಿ ಯಾವ ಮೆಡಿಕಲ್ ಸ್ಟೋರ್ ಇರಲಿಲ್ಲ)

ಚಂಡಿಘರ್‌ನಿಂದ ನಮ್ಮ ಮಾವ ಬಂದಿದ್ದರು. ತಾತಾ-ಮೊಮ್ಮಗಳ ಜೋಡಿ ಸರಿ ಹೋಯಿತು. ಅವರಿಗೆ ಮನೇಲಿ ಕಾಲ ಕಳೆಯಲು ಆಗುತ್ತಿರ ಲಿಲ್ಲ. ದಿನಕ್ಕೆ ಎರಡು ಸರಿ ವಾಕಿಂಗ್ ಹೋಗುತ್ತಿದ್ದರು. ಒಮ್ಮೊಮ್ಮೆ ಸಿಟಿಗೂ ಒಬ್ಬರೇ ಹೋಗಿ ಬಿಡುತ್ತಿದ್ದರು. ಒಬ್ಬರೇ ಹೋಗಬೇಡಿ ಎಂದರೂ ಕೇಳುತ್ತಿರಲಿಲ್ಲ.

ಒಮ್ಮೆ ಅವರು, ಸಿಟಿಗೆ ಹೋದವರು, ಸಾಯಂಕಾಲ ಕತ್ತಲಾಗುತ್ತಾ ಬಂದಿದ್ದರು ಮನೆಗೆ ವಾಪಸ್ಸಾಗಿರಲಿಲ್ಲ. ಆಫೀಸಿನಿಂದ ಮನೆಗೆ ಬಂದ ಇವರಿಗೂ ಆತಂಕವಾಗಿತ್ತು. ಸಿಟಿಯಲ್ಲಿ ಎಲ್ಲಿ ಅಂತ ಹುಡುಕುವುದು? ಯಾರನ್ನು ಕೇಳುವುದು? ಅವರಿಗೆ ಸ್ವಲ್ಪ ಬಿ.ಪಿ. ಶುಗರ್ ಸಹ ಇತ್ತು. ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ..?ಆತಂಕದಿಂದ ಎದೆ ಢವ ಢವ ಹೊಡೆದು ಕೊಳ್ಳಲಾರಂಭಿಸಿತ್ತು. ನಮಗೂ ಅದು ಹೊಸ ಜಾಗವೇ

ಪೋಲಿಸರಿಗೆ ತಿಳಿಸೋಣ ಎಂದರೆ ಪೋಲಿಸ್ ಸ್ಟೇಷನ್ ಸಹ ಹತ್ತಿರ ವಿರಲಿಲ್ಲ. ಸಿಟಿಗೇ ಹೋಗಬೇಕಾಗಿತ್ತು. ಅಷ್ಟರಲ್ಲಿ ಪುಣ್ಯಾತ್ಮಾ ಬಂದರು. ಸೈಕಲ್ ರಿಕ್ಷಾದಲ್ಲಿ ಬಂದರು. ಅಲ್ಲಿ ಸಿಗುತ್ತಿದ್ದುದು ಕೇವಲ ಸೈಕಲ್ ರಿಕ್ಷಾಗಳೇ ಬಾಡಿಗೆ ಅತೀ ಕಡಿಮೆ. ನಾಲಕ್ಕಾಣೆ, ಎಂಟಾಣೆ ಅಷ್ಟೇ. ನನ್ನ ಮಗಳು ಕೂಡಾ. ರಿಕಿಚಾ ಎಂದೂ ಕೂಗಿ ರಿಕ್ಷಾ ನಿಲ್ಲಿಸುತ್ತಿದ್ದಳು. ಮಗ ಗದರಿಸುತ್ತಾನೆಂದು ಅವರಿಗೂ ಗೊತ್ತು. ಸುಮ್ಮನೇ ಕೈ ಕೈ ಉಜ್ಜುತ್ತಾ ನಿಂತರು. ಸ್ವಲ್ಪ ಬಿಸಿ ಬಿಸಿ ಯಾಗಿ ಟೀ ಮಾಡಿ ಕೊಡಮ್ಮ ಅಂತ ನನಗೆ ಹೇಳಿದರು. ಏನಾದರೂ ಆರೋಗ್ಯ ಹೆಚ್ಚು ಕಡಿಮೆ ಆಗಿರಬಹುದು ಎಂಬ ಭೀತಿ ಇದ್ದೇ ಇತ್ತು.

''ಅಲ್ಲಯ್ಯ.. ಎಷ್ಟು ಚೆನ್ನಾಗಿದೆ ಅಂತೀಯ ನಿಮ್ಮೂರು.. ಅದೇನು ಗಿಡ ಮರಗಳು ? ಅದೇನು ಹಕ್ಕಿ ಪಕ್ಷಿಗಳು? ನದೀ ತೀರದಲ್ಲಂತೂ ಕೂತರೆ ಎದ್ದು ಬರುಕ್ಕೇ ಮನಸ್ಸಾಗುಲ್ಲ. ನದಿ ಎಷ್ಟು ಚೆನ್ನಾಗಿದೆ ಅಂತೀಯ ಇಂಥ ದೊಡ್ಡ ನದಿಯನ್ನು ನಾನು ನೋಡಿರಲೇ ಇಲ್ಲ.'' ಅವರು ಬ್ರಹ್ಮಪುತ್ರಾ ನದಿಯ ವರ್ಣನೆ ಮಾಡಲು ಪ್ರಾರಂಭಿಸಿದ್ದರು.

"ನೀವು ನದೀ ಹತ್ತಿರ ಹೋಗಿದ್ರಾ? ಒಬ್ಬರೇ ಯಾಕೆ ಅಲ್ಲಿಗೆಲ್ಲಾ ಹೋಗಿದ್ರಿ?" ಗುಡುಗಿದರು ಇವರು.

"ಆ ನದೀ ಹಾಗಿದೆಯಯ್ಯಾ .. ಅದೇನು ನೀರು.. ನನ್ನ ಜೀವನ ಸಾರ್ಥಕವಾಗಿ ಹೋಯ್ತು... ಬ್ರಹ್ಮಪುತ್ರಾ ನದಿಯನ್ನು ನೋಡಾಯ್ತು.

ಹಾಗೆಲ್ಲಾ ನೀವು ಒಬ್ಬೊಬ್ರೇ ಹೋಗಬೇಡಿ ಅಲ್ಲೆಲ್ಲಾ. ಗುರುತು ಪರಿಚಯವಿಲ್ಲದ ಜನ. ನಿಮಗೋ ಭಾಷೆ ಬೇರೆ ಬರುಲ್ಲ.ಏನಾದ್ರೂ ಆದ್ರೆ

ಭಾಷೆ ಬರದಿದ್ರೇನು ಜನರು ಜನರೇ..ನಾನು ಎಲ್ಲಾದ್ರೂ ಬಿದ್ದೇ ಅಂತಿಟ್ಕೋ, ಎತ್ತಿ ಆಸ್ಪತ್ರೆಗೆ ಸೇರಿಸುಲ್ವೇ ಅಷ್ಟಕ್ಕೆಲ್ಲಾ ಹೆದರ್ತಾರೇನಯ್ಯಾ?s

ಅದಕ್ಕೇ ಬೇಡ ಅಂದಿದ್ದು. ನಿಮ್ಮನ್ನು ಹುಡುಕುವುದು ಹೇಗೆ. ಇಷ್ಟು ಹೊತ್ತಿನ ತನಕ ಸಿಟೀಲಿ ಏನು ಮಾಡ್ತಿದ್ರಿ ಬೆಳಕಿದ್ದ ಹಾಗೇ ಬರಬಾರದಾಗಿತ್ತಾ

ಹಾಳಾದ್ದು ನಿದ್ದೆ ಬಂದು ಬಿಡ್ತಾ ಎಚ್ಚರವೇ ಆಗಲಿಲ್ಲ. ಎಚ್ಚರವಾದ ಕೂಡಲೇ ಎದ್ದು ಬಂದು ಬಸ್ಸು ಹತ್ತಿ ಬಂದೆ...ಕೈ ಹೊಸಕುತ್ತಾ ನುಡಿದರು.

ಮಲಗಿದ್ರಾ? ಎಲ್ಲಿ? ಎಲ್ಲಿ ಮಲಗಿದ್ರಿ?

ನದೀ ತೀರದಲ್ಲಿ ಕಲ್ಲು ಹಾಸಿನ ಮೇಲೆ ಹಾಗೇ ಒರಗಿದ್ದೆ ಹಾಗೇ ತಂಗಾಳಿ ಬೀಸುತ್ತಿದ್ದ ಹಾಗೇ ಕಣ್ಣು ಎಳೆದುಕೊಂಡು ಹೋಯ್ತು. ಎಂಥಾ ಒಳ್ಳೆ ನಿದ್ದೆ ಬಂದಿತ್ತು ಅಂತೀಯಾ?ಜೀವನದಲ್ಲಿ ಇರುವರೆಗೂ ಒಂದು ದಿನವೂ ಇಂಥಾ ನಿದ್ದೆ ಬಂದಿರಲಿಲ್ಲ."

"ಚೆನ್ನಾಯ್ತು ಯಾರಾದ್ರೂ ಕೇಳಿದ್ರೆ ನಗ್ತಾರೆ. ಮನೆಯಿಂದ ಆಚೆ ಹೋಗಿ ನದೀ ತೀರದಲ್ಲಿ ಮಲಗಿದ್ದೆ ಅಂತ ಅಂದ್ರೆ..ಮನೆ ಮಠ ಇಲ್ಲದೋರ ಹಾಗೆ.

"ಹೋಗ್ಬೋಗು ಯಾರು ನಗಲ್ಲ. ಅಥವಾ ಇಷ್ಟರ ಮೇಲೆ ನಕ್ಕರೆ ನಗಲಿ ನಾನು ಕೇರ್ ಮಾಡುಲ್ಲ. ಅಪ್ಪ ಮಗನ ವಾಗ್ವಾದ ಹೀಗೆ ಮುಂದುವರೆಯಿತು. ನಾನು ಬಿಸಿ ಬಿಸಿ ಟೀ ತಂದಿತ್ತೇ. ಮಾವನವರು ಮಾತ್ರ ಸೊರ ಸೊರ ಅಂತ ಟೀ ಹೀರಿದರು. ಇವರಿಗೆ ಕೋಪ ಬಂದಿತ್ತಲ್ಲ. ಟೀ ಆರಿ ತಣ್ಣಗಾಗಿತ್ತು.

ಮಾರನೇ ಬೆಳಿಗ್ಗೆ ಆಫೀಸಿಗೆ ಹೋಗುವ ಮುನ್ನ ನನಗೆ ಹೇಳಿದರು. "ಅಣ್ಣನ್ನ ಒಬ್ಬೊಬ್ಬರನ್ನೇ ಎಲ್ಲಿಗೂ ಹೋಗಲು ಬಿಡಬೇಡ. ಅಮ್ಮ ಬೇರೆ

ಅಮೆರಿಕಾಕ್ಕೆ ಹೋಗಿದ್ದಾಳೆ. ನಮ್ಮ ಮನೆಗೆ ಬಂದಾಗ ಏನಾದ್ರೂ ಹೆಚ್ಚು ಕಡಿಮೆ ಆದರೆ.. ನನಗೆ ಅದೆಲ್ಲ ಸರಿ ಹೋಗುಲ್ಲ."

"ಅವರು ತಾನೇ ಹೇಗೆ ಕಾಲ ಕಳೆಯುತ್ತಾರೆ.. ಮಾತಿಗೂ ಯಾರೂ ಇಲ್ಲವಲ್ಲ"

"ಪೇಪರ್ ಓದಲಿ.."

"ಬರೋದು "ಅಮೃತ ಬಜಾರ್ ಪತ್ರಿಕೆ ಅದು ಈ ಕಡೆಯ ನ್ಯೂಸ್ ಅವರಿಗೆ ಏನು ಆಸಕ್ತಿ ಇರುತ್ತೆ.

ನಾವು ಎಲ್ಲಿರುತ್ತೇವೋ ಅಲ್ಲಿಯ ನ್ಯೂಸ್ ಓದಬೇಕು. ಬೇಕಾದ್ರೆ ಹಿಂದೂ ಪೇಪರ್ ತರಿಸೋಣ.

"ನಂಗೆದೆಲ್ಲಾ ಗೊತ್ತಿಲ್ಲ ನೀವೇ ಅದೇನು ಹೇಳ್ತೀರೋ ಹೇಳಿ ಬಿಟ್ಟು ಹೋಗಿ. ಅವರು ಹೋಗಿ ಬರ್ತೀವಿ ಅಂತ ಹೊರಟರೆ ನಾನು ಹೇಗೆ ಬೇಡ ಅಂತ ಅನ್ನಲಿ?" ಅವರಿಗೆ ತಿರುಗೋದು ಅಂದ್ರೆ ಮೊದಲೇ ಇಷ್ಟ.

"ಸರಿ ನಾನೇ ಹೇಳ್ತಿನಿ" ಆಮೇಲೆ ಅವರ ಅಪ್ಪನಿಗೆ ಅದೇನು ಹೇಳಿದರೋ ಒಂದೆರಡು ದಿನ ಅವರು ಮನೆ ಬಿಟ್ಟು ಕದಲಲಿಲ್ಲ. ಕಿಟಕಿಯ ಬಳಿ ನಿಂತು ರಸ್ತೆಯನ್ನೇ ನೋಡುತ್ತಿದ್ದರು. ಆಮೇಲೆ ನುಡಿದರು. ಮಗೂನಾದ್ದರೂ ಹೊರಗೆ ಸುತ್ತಾಡಿಸಿಕೊಂಡು ಬರ್ತೀವಿ. ನಡೆಯದೇ ಇದ್ದರೆ ಕಾಲು ಜಡ್ಡು ಗಟ್ಟಿದ ಹಾಗಾಗುತ್ತೆ. ಬೆಳೆಯುವ ಮಗುವನ್ನು ಹೊರಗೆ ಸುತ್ತಾಡಿಸಬೇಕು. ಸದಾ ಅದೇನದು ಬಾಗಿಲನ್ನು ಹಾಕಿಕೊಂಡು ಮನೇ ಒಳಗೆ ಕೂತಿದ್ರೇನು ಚೆನ್ನ? ಹೊರಗೆ ಪ್ರಪಂಚ ಎಷ್ಟು ದಿವಿನಾಗಿದೆ..? ಅವನಿಗಂತು ತಿರುಗಾಟ ಬೇಕಿಲ್ಲ. ನೀನೂ ಹೋಗುಲ್ಲ. ಮಕ್ಕಳನ್ನು ಹೀಗಲ್ಲ ಬೆಳೆಸೋದು. ನಾನು ಕರೆದುಕೊಂಡು ಹೋಗಿ ಬರ್ತೀನಿ. ಬೆಚ್ಚಗೆ ಸ್ವೆಟರ್, ಟೋಪಿ, ಕಾಲುಚೀಲ ಎಲ್ಲಾ ಹಾಕಿ ಡ್ರೆಸ್‌ಮಾಡು."ಮಾವ ಹಾಗೆ ನುಡಿದಾಗ ಇಲ್ಲವೆನ್ನಲಾಗಲಿಲ್ಲ.

ಸರಿ ಅಂದಿನಿಂದ ತಾತಾ ಮೊಮ್ಮಗಳು ಒಟ್ಟಾಗಿ ಸ್ವಲ್ಪ ದೂರ ಹೊರಗೆ ಸುತ್ತಾಡಿಕೊಂಡು ಬರುತ್ತಿದ್ದರು. ಕೋಳಿ ನೋಡು, ಕಾಗೆ ನೋಡು ಅಂತ ಹಕ್ಕಿ ಪಕ್ಷಿ ತೋರಿಸುತ್ತಾ ಮನೆಗೆ ಬರುವ ಹೊತ್ತಿಗೆ ಸಾಕಾಗಿರುತ್ತಿತ್ತು. ಮಳೆ ಬಂತು ಅಂತ ಒಂದು ದಿನ ಎತ್ತಿಕೊಂಡು ಬರುವಾಗ, ಕಾಲಿಗೆ ಹಾಕಿದ್ದ

ಪೂ ಎಲ್ಲೋ ಬಿದ್ದು ಹೋಗಿದೆ. ಅವರಿಗೂ ಗೊತ್ತಾಗಿಲ್ಲ.

"ಪೂ ಎಲ್ಲೋಬಿದ್ದು ಹೋಗಿದೆ. "ಅಂದ ತಕ್ಷಣ ಅದನ್ನು ಹುಡುಕಿ ಕೊಂಡು ಬರಲು ಹೊರಟರು. ಬೇಡ ಬಿಡಿ.. ಈಗೆಲ್ಲಿ ಸಿಗುತ್ತೆ ಅಂತ ಅಂದರೂ ಕೇಳದೇ ತಾವು ಹೋಗಿದ್ದ ಸ್ಥಳದವರೆಗೂ ಹೋಗಿ ಹಾಗೇ ಹಿಂತಿರುಗಿ ಬಂದರು. ಬರಿಗೈಲಿ ಬಂದ ಅವರು ಪೆಚ್ಚಾಗಿದ್ದರು.ಮಗ ಬೇಡ ಅಂತಂದ್ರೂ ತಿರುಗಾಡಲು ಹೋಗಿ ಕಳೆದದ್ದು ತಮ್ಮದೇ ತಪ್ಪು ಅಂತ ಅನ್ನಿಸಿತ್ತು. ಒಂದೆರಡು ದಿನ ಪೆಚ್ಚಾಗಿದ್ದರು. ರಸ್ತೆ ಚೆನ್ನಾಗಿಲ್ಲ. ಸಣ್ಣ ಪುಟ್ಟ ರಸ್ತೆಗಳು ಕೊಚ್ಚೆ ನೀರಿನಿಂದ ತುಂಬಿದ ಹಳ್ಳ ಹೊಂಡಗಳು. ತಿರುಗಾಡಲು ಓಡಾಡುವಂತಹ ಸೊಗಸಾದ ರಸ್ತೆಗಳಿರಲಿಲ್ಲ. ಹಾಗಿತ್ತು. ಆದರೂ ಇಲ್ಲಿ ಯೋರೆಲ್ಲಾ ಓಜಾಜುಲ್ವೇ..ನಾವೇನು ಅದಕ್ಕೆ ಹೊರತಲ್ಲ. ಅವರಂತೇ ನಾವುರಬೇಕು.

ನಮ್ಮ ಮಾವನಿಗೆ, ಹಲಸಿನ ಕಾಯಿ ಪಲ್ಯ ಎಂದರೆ ಬಹಳ ಇಷ್ಟ. ತೊಂಡೆಕಾಯಿ, ಹಾಗಲಕಾಯಿ, ಬೆಂಡೆಕಾಯಿ, ಸೊಪ್ಪು, ನುಗ್ಗೇಕಾಯಿ ಯಾವು ದನ್ನೇ ಕಂಡರೂ, ತಂದು ಬಿಡುತ್ತಿದ್ದರು. ನಮ್ಮವರಿಗೋ ಅದೆಲ್ಲ ಇಷ್ಟನ್ನೆ ಇಲ್ಲ. ಅಲ್ಲಿ ಸಿಗುತ್ತಿದ್ದುದೆಲ್ಲಾ ಹೆಚ್ಚು ಕಡಿಮೆ ತರಕಾರಿಯೇ.

ಇದೆಲ್ಲಿ ಏನು ತರಕಾರಿ ಅಂತ ತರ್ತೀರೋ.. ಒಂದಕ್ಕೂ ರುಚಿಯೇ ಇಲ್ಲ ಎಂದಿದ್ದರು.

ಹಾಗೆನ್ನ ಬೇಡವೋ ಮುಠ್ಠಾಳ. ನಿನಗೆ ಡೆಲ್ಲೀಲಿ ಇಂಥ ತರಕಾರಿ ಎಲ್ಲಾ ಎಲ್ಲಿ ಸಿಗುತ್ತಿತ್ತು? ಇಲ್ಲಿಯ ತರಕಾರಿಗಳ ರುಚಿಯೇ ಬೇರೆ. ನನಗಂತೂ ಈ ಊರು ಬಹಳ ಹಿಡಿಸಿದೆ. ಈ ಊರಲ್ಲೇ ಬದುಕಿರೋ ಅಷ್ಟು ದಿನಗಳನ್ನು ಕಳೆಯೋಣ ಅಂತ ಅನ್ನಿಸುತ್ತೆ.ಹಲಸಿನ ಕಾಯಿ ಪಲ್ಯ ಅಂತೂ ದಿನಾಗಿ ಮಾಡ್ತಾಳೆ ನಿನ್ನ ಹೆಂಡ್ತಿ. ನನ್ನ ಬರ ಬಿಟ್ಟು ಹೋಯ್ತು. ಇಂಥಾ ತಾಜಾ ಹಲ ಸಿನ ಕಾಯಿ ನಮಗೆ ಬೆಂಗಳೂರಿನಲ್ಲಿ ಎಲ್ಲಿ ಸಿಗುತ್ತೇ ? ಈ ಸಾರಿ ಊರಿಗೆ ಹೋಗುವಾಗ ಹತ್ತು ಹಲಸಿನಕಾಯಿ ಹೊತ್ಕೊಂಡು ಹೋಗ್ತೀವಿ.

ನಾವಿಬ್ಬರೂ ಮನಸಾರೆ ನಕ್ಕಿದೆವು. ಮೊದಲೇ ಹಲಸಿನಕಾಯಿ ಭಾರ. ಹತ್ತಾ ಹಲಸಿನ ಕಾಯಿ! ನಡೆಯುವ ಮಾತೆ?

ವಯಸ್ಸಾದುದರಿಂದ ಒಬ್ಬೊಬ್ಬರೇ ಮನಸ್ಸಿಗೆ ಬಂದಂತೆ ತಿರುಗುವಂತಿಲ್ಲ. ಎಲ್ಲೂ ಹೋಗದೇ ಮನೆಯಲ್ಲೇ ಕೈಕಾಲು ಕಟ್ಟಿ ಹಾಕಿದಂತೆ ಕುಳಿತಿರಲು ಅವರಿಗೆ ಬೇಜಾರು, ನಾನು ಊರಿಗೆ ವಾಪಸ್ಸು ಹೋಗ್ತೀನಿ ಅಂತ ಹೇಳಲು ಪ್ರಾರಂಭಿಸಿದರು. ಗೌಹಾತಿಗೆ ಬಂದು ಷಿಲ್ಲಾಂಗ್ ನೋಡದೇ ಹೋಗುವುದೇ? ಮೂರು ನಾಲ್ಕು ದಿನಗಳ ರಜ ಹಾಕಿ ನಮ್ಮವರು ಎಲ್ಲರನ್ನು ಷಿಲ್ಲಾಂಗ್‌ಗೆ ಕರೆದುಕೊಂಡು ಹೋದರು. ನಮಗೆ ಹತ್ತಿರದಲ್ಲಿತು.

ಅಹಾ! ಷಿಲ್ಲಾಂಗ್! ನಿಜವಾಗಿಯೂ ನೋಡಬೇಕಾದ ಸ್ಥಳ. ಮೇಘಾಲಯವೂ ಮೇಘಾಲಯವೇ. ತಲೆ ತಲೆಗೆ ತಾಗುವಂತೆ ಅಲ್ಲಿಂದಿಲ್ಲಿಗೆ ಸರಿಯುವ ಮೇಘಮಾಲೆಗಳು. ಮೇಘಾಲಯ ಅನ್ವರ್ಥನಾಮ ಕಂದರಗಳು, ಹಸಿರು ವನರಾಜಿ ನೋಡೋಕೆ ಎರಡು ಕಣ್ಣುಗಳು ಸಾಲದು. ಬೆಟ್ಟದ ಮಧ್ಯೆ ಮಧ್ಯೆ ಹರಿದು ಬರುವ ಜಲಪಾತಗಳು ಅನೇಕ. ಅದರಲ್ಲಿ ಪ್ರಖ್ಯಾತವಾದುದು ಎಲಿಫೆಂಟಾ ಜಲಪಾತ. ಮೇಲಿನಿಂದ ಕೆಳಗೆ ಬೀಳುವ ಜಲಪಾತವನ್ನು ನೋಡಲು, ಸೇತುವೆ ಸಹ ಕಟ್ಟಿಸಿದ್ದಾರೆ. ಹಗ್ಗದಿಂದ ಕಟ್ಟಿದ ಸೇತುವೆ. ತೂಗಾಡುತ್ತದೆ. ಆಯ ತಪ್ಪಿ ಬಿದ್ದರೆ ಪಾತಾಳವೇ ಗತಿ.! ಇತ್ತ ಕಡೆಯಿಂದ ಮತ್ತೊಂದು ಕಡೆಗೆ ಹೋದರೆ, ಅಲ್ಲಿ ಕಲ್ಲಿನಲ್ಲಿ ಕೊರೆದಿರುವ ಮೆಟ್ಟಿಲುಗಳು. ಮೆಟ್ಟಿಲಗಳನ್ನಳಿದು ಕೆಳಗೆ ಹೋಗಿ ಅಲ್ಲಿ ಕತ್ತನ್ನೆತ್ತಿ ಮೇಲಿನಿಂದ ಬೀಳುವ ಜಲಪಾತದ ಸೊಬಗನ್ನು ವೀಕ್ಷಿಸಬಹುದು. ಆನೋಟ ಅಪೂರ್ವವಾದುದು ಮೇಘಗಳೇ ಜಲಪಾತವಾಗಿ ಇಳಿಯುತ್ತಿದೆಯೋ ಜಲಪಾತವೇ ಮೇಘವಾಗಿ ಮೇಲೆ ಹಾರಿಹೋಗುತ್ತಿದೆಯೋ ಎಂಬ ಭ್ರಮೆ ಹುಟ್ಟಿಸುವಂತೆ ಪ್ರಪಾತದ ಧಾರೆ ಅಮೋಘವಾಗಿ ಭೀಳುತ್ತದೆ.

ವಯಸ್ಸಾಗಿದ್ದರೂ, ಮಾವ ಹುಮ್ಮಸ್ಸಿನಿಂದ ಕೆಳಗಿಳಿದರು. ನೀರು ಹಾರಿ ಕಲ್ಲಿನ ಮೆಟ್ಟಿಲುಗಳು ಒದ್ದೆಯಾಗಿತ್ತು. ಜಾರಿ ಬಿದ್ದರೆ, ಪಾತಾಳವೆ ಇನ್ನೇನಿಲ್ಲ. ಅಪ್ಪ ಕೆಳಗಿಳಿದು ಹೋದರು ಅಂತ, ಇವರೂ, ಮಗಳನ್ನು ಎತ್ತಿಕೊಂಡಂತೆಯೇ ಮೆಟ್ಟಿಲುಗಳನ್ನಿಳಿಯ ತೊಡಗಿದರು. ನಾನು ಮೇಲಿನಿಂದ ಬೇಡ ಬೇಡ ವಾಪಸ್ಸು ಬನ್ನಿ ಬನ್ನಿ ಅಂತ ಕೂಗಿದೆ ಕೇಳಿಸಲೇ ಇಲ್ಲ. ನನ್ನ ಮಗಳಿಗೆ ಕೆಂಪು ಬಣ್ಣದ ಫ್ರಾಕ್ ತೊಡಿಸಿದ್ದೆ. ಮೇಲಿನಿಂದ ಒಂದು ಚಿಕ್ಕ ಕೆಂಪು

ಬಣ್ಣದ ಬೊಂಬೆಯಂತೆ ಕಾಣತ್ತಿದ್ದವಳನ್ನು ಗುರುತಿಸಿದೆ. ಸ್ವಲ್ಪ ಹೊತ್ತಿನ ನಂತರ ಕೆಳಗಿದ್ದವರೆಲ್ಲಾ ಮೇಲೆ ಹತ್ತಿ ಬರಲು ಪ್ರಾರಂಭಿಸಿದರು. ಮೇಲೆ ಸೇತುವೆಯ ತನಕ ಅವರುಗಳು ಬರುವವರೆಗೂ ನನಗೆ ಜೀವದಲ್ಲಿ ಜೀವ ವಿರಲಿಲ್ಲ. ಈಗಲೂ ನೆನೆಪಿಸಿಕೊಂಡರೆ ಅದೇ ಭೀತಿ ಮನದಲ್ಲಿ ತುಂಬಿ ಕೊಳ್ಳುತ್ತೆ. ನಾನು ಕೆಳಗಿಳಿದು ಹೋಗಿ ನೋಡಲಿಲ್ಲವಲ್ಲ ಎನ್ನೋ ವ್ಯಥೆಯೂ ಆಗುತ್ತೆ.

ಎಂದೂ ಮರೆಯಲಾಗದ್ದು ಎಂದರೆ ಷಿಲಾಂಗಿನ ಬಟಾನಿಕಲ್ ಗಾರ್ಡನ್ಸ್. ಸೊಗಸಾದ ಉದ್ಯಾನವನ. ಸುಯೋಜನೆಯಿಂದ ನಿರ್ಮಿಸಿದ್ದು ಕೆರೆ, ಕೆರೆಗೆ ಸೇತುವೆ, ಕೆರೆಯಲ್ಲಿ ದೋಣಿ ಸಂಚಾರ ಪ್ರತಿಯೊಂದೂ ಎಂದೆಂದೂ ಮರೆಯದ ನೋಟಗಳು. ಹಸಿರು ಹುಲ್ಲಿನ ಹಾಸಂತೂ, ಎಷ್ಟು ರಮಣೀಯವಾಗಿತ್ತೆಂದರೆ, ಕೂತರೆ ಮೇಲೇಳಲು ಮನಸ್ಸು ಬಾರದಷ್ಟು

ಬ್ರಿಟಿಷರನ್ನು ನೆನೆಪಿಸುವ ಪ್ರಖ್ಯಾತ ಚರ್ಚು ಅಂದರೆ ಅಲ್ಲಿ ಕ್ರಿಶ್ಚಿಯನ್ನರು ವಾಸವಾಗಿದ್ದಾರೆ.

ಮಾವ ಸಹ ಹಿಗ್ಗಿ ಹೆಗ್ಗೋಡಾದರು. ಎಂತೆಂಥಾ ಒಳ್ಳೆಯ ಪ್ರೇಕ್ಷಣೀಯ ಸ್ಥಳಗಳಿವೆ. ಅದನ್ನೆಲ್ಲ ನೋಡಲು ಮನುಷ್ಯನಿಗೆ ಸಮಯವೇ ಸಾಲದಲ್ಲ. ಅಂತ ಅವರಿಗೆ ವ್ಯಥೆ. ಷಿಲ್ಲಾಂಗ್‌ನ ಬುರಾಬಚಾರ್ ವ್ಯಾಪಾರ ಕೇಂದ್ರ. ಆ ಕಡೆಯ ಅಪರೂಪದ ವಸ್ತುಗಳೆಲ್ಲ ಅಲ್ಲಿ ಸಿಗುತ್ತದೆ. ವ್ಯಾಪಾರಿ ಒಳಗೆ ಕೂತು ತನ್ನ ಸುತ್ತ ಎಲ್ಲಾ ವಸ್ತುಗಳನ್ನು ಇಟ್ಟುಕೊಂಡಿರುತ್ತಾನೆ. ಅತ್ತಿತ್ತ ಅಲ್ಲಾಡುವುದಿಲ್ಲ. ಆದರೆ ಹಣ ತೆಗೆದುಕೊಳ್ಳಲು ಕುಳಿತಲ್ಲಿಂದಲೇ, ಉದ್ದನೆಯ ಮಗುಚು ಸೌಟುನಂತಹ ಉದ್ದನೆಯದನ್ನು ನಮ್ಮ ಮುಂದೆ ನೀಡುತ್ತಾನೆ. ನಾವು ಅದರ ಮೇಲೆ ಹಣವನ್ನಿಟ್ಟರೆ, ಅದನ್ನೇಳೆದುಕೊಂಡು, ಚಿಲ್ಲರೆಯನ್ನು ಕೊಡಬೇಕಾಗಿದ್ದರೆ ಮತ್ತೆ ಅದೇ ರೀತಿ ನಮಗೆ ತಲುಪಿಸುವುದು. ತಮಾಷೆ ಎನಿಸಿತ್ತು. ಹೇಗಿದೆ ನೋಡಿ ಅವರ ಉಪಾಯ, ಕೂತಲ್ಲಿಂದ ಅಲ್ಲಾಡುವಂತಿಲ್ಲ. ಕೆಲಸ ಮಾತ್ರ ನಡೆಯುತ್ತೆ.

ಅಲ್ಲಿಯ ವಾತಾವರಣವೂ ಹಾಗೇ ಸದಾ ಸಣ್ಣಗೆ ತುಂತುರು ಹನಿ ಬೀಳುತ್ತಲೇ ಇರುತ್ತದೆ. ಆದ್ದರಿಂದಲೇ ಬ್ರಿಟಿಷರು ಷಿಲ್ಲಾಂಗ್‌ನ್ನು ಸ್ಕಾಟ್ಲಾಂಡ್

ಆಫ್ ದಿ ಈಸ್ಟ್ ಎಂದು ಕರೆದಿದ್ದಾರೆ. ಮೈತುಂಬಾ ತಲೆಯಿಂದ ಕಾಲಿನವರೆಗೂ ಬೆಚ್ಚಗೆ ಉಣ್ಣೆಯ ಬಟ್ಟೆ ಧರಿಸಿ ಬುಡು ಬುಡು ಓಡಾಡುವ ಅವರನ್ನು ನೋಡುವುದೇ ಒಂದು ಸೊಗಸು. ತಲೆಯ ಮೇಲೆ ಟೋಪಿ. ಕೈತುಂಬಾ ಸ್ವೆಟರ್, ಮೇಲೊಂದು ಶಾಲು ಇದು ಗಂಡಸು ಹೆಂಗಸರಿಬ್ಬರ ಉಡುಗೆ. ಅವರ ಆಡು ಭಾಷೆ ಇಂಗ್ಲೀಷ್ ಎಂದರೆ ನಂಬ್ತೀರಾ? ಬ್ರಿಟೀಷರ ಪ್ರಭಾವ ಹೆಚ್ಚು ಅಂತ ಅನ್ನಿಸಿತು.

ಅಸ್ಸಾಂ ಕಡೆಯ ಭೂಕಂಪನಗಳನ್ನೆಲ್ಲಾ ಮಾಪನ ಮಾಡುವ ಸೀಸ್ಮ ಲಾಜಿಕಲ್ ಇಲಾಖೆಯ ಕಚೇರಿ ಇಲ್ಲಿದೆ. ಸೀಸ್ಮಾಲಜಿ ಮೀಟರಾಲಕಜಿಯ ಸೋದರಿ. ಅಸ್ಸಾಂನಂತಹ ಗುಡ್ಡಗಾಡು ಪ್ರದೇಶಗಳಲ್ಲಿ ಭೂಕಂಪನ, ಭೂಕುಸಿತ ಇವುಗಳು ಸರ್ವೇಸಾಮಾನ್ಯ. ವಿಶ್ವ ವಿಖ್ಯಾತ ಚಿರಾಪುಂಚಿಯನ್ನು ತಲುಪಿದೆವು. ಹೆಸರು ವಾಸಿಯಾದ ಊರು ಆ ವಾತಾವರಣ, ಹಳ್ಳಿಯಾದರೂ ಅಲ್ಲಿ ಒಂದು ರಾಮಕೃಷ್ಣ ಮಠ ಇದೆ. ಧ್ಯಾನ ಮಂದಿರ ಇದೆ. ಧ್ಯಾನಮುದ್ರೆಯಲ್ಲಿ ಕುಳಿತಿರುವ ಸ್ವಾಮಿ ವಿವೇಕಾನಂದರ ಅಮೃತ ಶಿಲೆಯ ಮೂರ್ತಿ ಇದೆ. ನೋಡಲು ಸೊಗಸಾಗಿದೆ. ದೊಡ್ಡ ಶೀಷೆಗಳಲ್ಲಿ ಜೇನುತುಪ್ಪ ಮಾರುತ್ತಾರೆ. ಕಿತ್ತಲೆ ಹಣ್ಣಿನ ರಸದಲ್ಲಿ ಮಾಡಿದ್ದು. ಕಿತ್ತಲೆ ಬಣ್ಣದ ಜೆನುತುಪ್ಪವನ್ನು ಜ್ಯಾಮ್ ತರಹ ಉಪಯೋಗಿಸಬಹುದು. ತುಂಬಾ ರುಚಿಯಾಗಿರುತ್ತದೆ. ಇಲ್ಲಿಯ ವೈಶಿಷ್ಟ್ಯವಾದ ಜೇನುತುಪ್ಪ

ಆಕರ್ಷಕ ಬಣ್ಣದ, ಹಲವು ಡಿಸೈನ್‌ಗಳ ಮಣಿಪುರಿ ಶಾಲುಗಳು ಅಲ್ಲಿ ದೊರೆಯುತ್ತವೆ. ಬೆಲೆ ಏನೂ ಕಡಿಮೆ ಇಲ್ಲ. ಆದರೆ ನಾವು ಅಲ್ಲಿಗೆ ಹೋಗಿ ಬಂದೆವು ಎನ್ನುವ ಗುರುತಿಗೋಸ್ಕರ ಒಂದಿಷ್ಟನ್ನು ಕೊಂಡೆವು. ನನ್ನ ಅತ್ತೆಗೆ ನನ್ನ ತಾಯಿಗೆ, ಅಕ್ಕಂದಿರಿಗೆ, ನನ್ನ ಓರಗಿತ್ತಿಯರಿಗೆ, ನನ್ನ ನಾದಿನಿಗೆ ಹಾಗೇ ನನಗೊಂದು ಸಿಲ್ಕಿನ ದಾರದಿಂದ ಕರಕುಶಲತೆಯಿಂದ ನೇಯ್ದಿರುವ ಶಾಲುಗಳು, ಹೊದೆಯುವುದು ಕೇವಲ ಫ್ಯಾಷನ್ನಿಗಾಗಿ! ಆದರೆ ಬೆಲೆ ಮಾತ್ರ ಕಡಿಮೆ ಇಲ್ಲ. ದುಬಾರಿ.

ಎರಡು ದಿನ ಸುತ್ತಾಡಿದರೂ, ಸುಸ್ತಾಗಿರಲಿಲ್ಲ. ಹೀಗೇ ಎಲ್ಲಾದರೂ ಸುತ್ತಾಡುತ್ತಿರಲೇ ಬೇಕೆಂಬ ಆಸೆ. ಮನೆಗೆ ವಾಪಸ್ಸು ಬರಲೇ ಇಷ್ಟವಿಲ್ಲ.

ಆದರೆ ವಿಧಿ ಇಲ್ಲ. ವಾಪಸ್ಸು ಬಂದೆವು. ಮತ್ತೇ ನಮ್ಮ ನಮ್ಮ ಕೆಲಸಗಳಿಗೆ ಹೊಂದಿಕೊಂಡೆವು. ನಾವು ಷಿಲ್ಲಾಂಗ್‌ಗೆ ಹೋಗಿ ಬಂದ ವಿಷಯ ಕುರಿತು, ನನ್ನ ತಾಯಿಗೆ, ನನ್ನಕ್ಕನಿಗೆ ಕಾಗದಗಳನ್ನು ಬರೆದೆ. ಆಗ ಇನ್ನು ಕುಶಲ ಕ್ಷೇಮಕ್ಕಾಗಿ ಕಾಗದ ಬರೆಯುವ ವಾಡಿಕೆ ಇತ್ತು. ಈಗಿನಂತೆ ಕಡಿಮೆ ಆಗಿರಲಿಲ್ಲ. ಮನೆ ಮನೆಯಲ್ಲಿ ಫೋನುಗಳಿರಲಿಲ್ಲ. ಇದ್ದರೂ ಎಸ್.ಟಿ.ಡಿ. ಸೌಲಭ್ಯವಿಲ್ಲ. ನಾನು ಬರೆದ ಕಾಗದ, ನಾಲ್ಕೈದು ದಿನದ ನಂತರ ನಮ್ಮೂರನ್ನು ತಲಪುತ್ತಿದ್ದವು. ಆದರೂ ಕಾಗದ ಪತ್ರ ವ್ಯವಹಾರದ ಪದ್ಧತಿ ಜಾರಿಯಲ್ಲಿತ್ತು.

ನನ್ನ ತಂದೆಗೆ ಅರವತ್ತು ವರ್ಷದ ಶಾಂತಿಯನ್ನು ಮಾಡುವವರಿದ್ದರು. ಜತೆಗೇ ನನ್ನ ತಮ್ಮ ಹಾಗೂ ನನ್ನ ಅಕ್ಕನ ಮಗನಿಗೆ ಉಪನಯನ. ನಾವುಗಳು ಬರಲೇ ಬೇಕೆಂದು ಮುಂಚಿತವಾಗಿ ತಿಳಿಸಿದ್ದರು. ಆದರೆ ಅಷ್ಟು ದೂರದಿಂದ ಮತ್ತೆ ಮತ್ತೆ ಹೋಗಿ ಬರುವುದೆಂದರೆ! ವಿದೇಶದಲ್ಲಿರುವವರು, ಎಣಿಸುವಂತೆ, ನಾನು ಅಲ್ಲಿದ್ದರೂ ನನ್ನ ಮನಸ್ಸೆಲ್ಲಾ ನಮ್ಮ ಮನೆಯಲ್ಲಿ ನಡೆಯುತ್ತಿರುವ ಸಮಾರಂಭವನ್ನೇ ಕುರಿತು ಚಿಂತಿಸುತ್ತಿತ್ತು. ಇಷ್ಟು ದೂರ ಇಲ್ಲದಿದ್ದರೆ ಬಹುಶಃ ಹೋಗಿ ಬರಬಹುದಾಗಿತ್ತು ಅಂತ ಅನೇಕ ಸಾರಿ ಅನ್ನಿಸಿತ್ತು. ಆದರೆ ದೂರವಿದ್ದರೇನಂತೆ! ಹೋಗಿ ಬರಲು ಅಸಾಧ್ಯವೇನಲ್ಲ ಮನಸ್ಸು ಮಾಡಿದ್ದರೆ ಅಂತ ಸಹ ಅನ್ನಿಸಿತ್ತು. ಅಂತೂ ಸಮಾರಂಭದಲ್ಲಿ ಪಾಲ್ಗೊಳ್ಳುವ ಅವಕಾಶ ತಪ್ಪಿ ಹೋಯಿತು. ಎಲ್ಲರಿಂದಲೂ ಆಕ್ಷೇಪಣೆಯ ಪತ್ರಗಳು ಬಂದವು. ತಲೆ ಕೆಡಿಸಿಕೊಂಡವಳು ನಾನು ಮಾತ್ರ.

ನಮ್ಮವರಿಗೆ ಗ್ರಹಗಳನ್ನು ವೀಕ್ಷಿಸುವುದೆಂದರೆ ಬಹಳ ಆಸಕ್ತಿ. ಚಂದ್ರ ಗ್ರಹಣ ಉಂಟಾದರೆ ಅದಕ್ಕೆ ಹೆಚ್ಚಿನ ತಯಾರಿ ಇಲ್ಲ. ಸೂರ್ಯಗ್ರಹಣವಾದರೆ ಒಂದು ವಾರದ ಮೊದಲೇ, ಕಪ್ಪು ಹಿಡಿಸಿದ ಗಾಜಿನಿಂದ ಗ್ರಹಣ ನೋಡಲು ತಯಾರಿ ನಡೆಸುತ್ತಿದ್ದರು. ನಾವು ಅಲ್ಲಿದ್ದಾಗ ಒಂದು ಅಪರೂಪದ ಪೂರ್ಣ ಸೂರ್ಯಗ್ರಹಣ ನಡೆಯಿತು. ಸೂರ್ಯನ ಮೇಲೆ ಭೂಮಿಯ ನೆರಳು ಬಿದ್ದಾಗ, ಹೊರ ಪರಿಧಿ ಬಳೆಯಂತೆ ದುಂಡಗೆ ಕಾಣಿಸುತ್ತದೆ, ನೀನು ನೋಡಲೇ ಬೇಕು ಅಂತ ನಮ್ಮವರ ಬಲವಂತ. ನನಗೆ ಆಸೆಯೂ ಇರಲಿಲ್ಲ. ಜತೆಗೆ ಹೆದರಿಕೆ. ಸೂರ್ಯಗ್ರಹಣ ವೀಕ್ಷಿಸಿ ಕಣ್ಣಿಗೇನಾದರೂ ಅಪಾಯವಾದರೆ ಅಂತ. ನಮ್ಮ

ವರಿಗೆ ಭಂಡ ಧೈರ್ಯ. ತಾನೂ ನೋಡಿದ್ದಲ್ಲದೇ ಮಗಳಿಗೂ ಬಲವಂತ ಮಾಡಿ ತೋರಿಸಿದರು. ನಮ್ಮ ಮಾವ, ಕಣ್ಣಿನ ತೊಂದರೆಯಿಂದ ನೋಡುವುದಿಲ್ಲವೆಂದು ಬಿಟ್ಟರು. ಮಾರನೇ ದಿನ ಪೇಪರ್‌ನಲ್ಲಿ ಫೋಟೋ ಸಹಿತ ವಿಚಾರ ಪ್ರಕಟವಾಗಿತ್ತು. ಕಾಶ್ಮೀರದಲ್ಲಿ ಗ್ರಹಣದ ನೋಟ ಅತಿ ಅದ್ಭುತವಾಗಿ ಕಂಡು ಬಂದಿತ್ತು. ಎಂದು ತಿಳಿಸಿ ಬರೆದಿದ್ದರು.

ನಮ್ಮ ಮನೆಯ ಹಿತ್ತಿಲಿನಲ್ಲಿ ಅನೇಕ ಹೂವಿನ ಗಿಡಗಳಿದ್ದವು. ಹೂ ಬಿಡುತ್ತಿದ್ದವು. ಆದರೆ ಹೋಗಿ ಕೀಳಲು ಹೆದರಿಕೆ, ಹಾವುಗಳು ಎಲ್ಲಿ ಅಂದರೆ ಅಲ್ಲಿ ಹರಿದಾಡುತಿದ್ದವು. ಹೂ ಗಿಡದ ಮೇಲೆಲ್ಲಾ ಜೇಡರ ಬಲೆಗಳು ಕಟ್ಟಿಕೊಂಡಿರುತಿದ್ದವು. ಒಂದು ಕಾಡು ಜೇಡ ತನ್ನ ಬಲೆ ಕಟ್ಟಿತ್ತು. ಜೇಡ ಎಷ್ಟು ದೊಡ್ಡದಾಗಿತ್ತೆಂದರೆ, ಸುಮಾರು ಒಂದು ಊಟದ ತಟ್ಟೆಯಷ್ಟು ದೊಡ್ಡದು. ಅದರ ಬಲೆಯ ವಿಸ್ತೀರ್ಣ ಅದರ ಹತ್ತರಷ್ಟು. ನಿಂತಲ್ಲಿಂತಲೇ ಬಲೆಗೆ ಕಡ್ಡಿ ಗಿಡ್ಡಿ ತಗುಲಿಸಿ ಅಲ್ಲಾಡಿಸಿದರೆ, ಕಣ್ಣು ಬಿಟ್ಟು ಸುತ್ತಲೂ ಅತ್ತಿತ್ತ ನೋಡುತ್ತಿತ್ತು. ಕಪ್ಪಗೆ ಫಳ ಫಳನೆ ಹೊಳೆಯುವ ಕಣ್ಣುಗಳು ಹೆದರಿಸುವಂತಿತ್ತು. ಕಪ್ಪಗೆ ರಾಕ್ಷಸನಂತಿದ್ದ ಆ ಜೇಡ ಕಚ್ಚಿದರೆ ವಿಷ ಎಂದು ರಾಶಾ ಹೆದರಿಸುತ್ತಿದ್ದಳು. ಅಂಥ ಜೇಡನನ್ನು ನಾನು ಮತ್ತೆ ಎಂದೂ ನೋಡಿಯೇ ಇಲ್ಲ. ಜೇಡ ಹೇಗೆ ಹೆದರಸುತ್ತಮ್ಮಾ ಎಂದು ಮಗಳನ್ನು ಕೇಳಿದರೆ. ಮುಖ ಕೈಗಳನ್ನು ಮುಂದೆ ತಂದು ಭೋ ಎಂದು ಹೇಳಿ ತೋರಿಸುವಷ್ಟು ನನ್ನ ಮಗಳು ಜಾಣೆಯಾಗಿ ಬಿಟ್ಟಿದ್ದಳು. ಇದರೊಂದಿಗೆ ಶಂಖದ ಹುಳುಗಳ ಹಾವಳಿ.

ಹಾವಳಿ ಎಂದೇ ಹೇಳಬೇಕು. ಮೊದ ಮೊದಲು ಕಂಡಾಗ ಅಪರೂಪ ಎನಿಸಿತು. ಸಡಗರದಿಂದ ಅವರ ಹೊರಕವಚವನ್ನು ಶೇಖರಿಸಿದ್ದಾಯಿತು. ಆದರೆ ಎಲ್ಲಿ ನೋಡಿದರೂ ಅವೇ ಅವುಗಳ ಸಾಮ್ರಾಜ್ಯ. ಅವುಗಳ ಸಂತತಿ ಬೆಳೆಯುತ್ತಲೇ ಇತ್ತು. ಎಲ್ಲಿ ನೋಡಿದರೂ ಹತ್ತಿ ಹತ್ತಿ ಬಂದು ಬಿಡುತ್ತಿದ್ದವು. ಮೋರಿಯ ನೀರುಗಳಲ್ಲೆಲ್ಲಾ ಓಡಾಡುತ್ತಿದ್ದುದರಿಂದ ಅವುಗಳಿಂದ ಖಾಯಿಲೆ ಹರಡುತ್ತದೆ ಎಂದು ಹೆದರಿಸುತ್ತಿದ್ದರು. ನಮಗೂ ಭಯವಾಗತೊಡಗಿತು. ಆದರೆ ನೋಡಲು ಮಾತ್ರ ಚೆನ್ನ. ತನ್ನ ದೇಹದ ಮೇಲೆ ಬಣ್ಣದ ಪಟ್ಟೆಯ ಟೋಪಿಯನ್ನು ಸುತ್ತಿಟ್ಟುಕೊಂಡಂತೆ ಬೆನ್ನ ಮೇಲೆ ಚೂಪೆನೆಯ ಆಕಾರದ

ಶಂಖವನ್ನ ಹೊತ್ತಿ ತಿರುಗಾಡುವ ಹಾಮೂಖ್‌ಗಳು, ಮುಟ್ಟಿದೊಡನೆ ತನ್ನ ಚಿಪ್ಪಿನೊಳಗೆ ದೇಹವನ್ನು ಎಳೆದುಕೊಂಡು, ನಿರ್ಜೀವವಾಗಿ ಕುಳಿತಿರುವ ಪ್ರಾಣಿ, ಉರುಳಿಸಿದರೂ, ಹೆದರಿ ಹೊರಗೆ ಬರುತ್ತಿರಲಿಲ್ಲ. ಸುಮಾರು, ಒಂದು ಚಿಕ್ಕ ತೆಂಗಿನಕಾಯಿಯ ಸೈಜಿನಷ್ಟು ಶಂಖಗಳು ಬೆಳೆಯುತ್ತಿದ್ದವು. ಆದರೆ ಚಿಪ್ಪುಗಳು ಮಾತ್ರ ಹಗುರ. ಅವುಗಳನ್ನು ಹೋಗಿ ಮುಟ್ಟಿ ಆನಂದಿಸು ಆಸೆ ನನ್ನ ಮಗಳಿಗೆ. ನನಗೆ ಭಯ, ಒಂದು ಆಶ್ಚರ್ಯದ ಸಂಗ್ಧತಿ ಎಂದರೆ, ಹಾವುಗಳು ಹೇರಳವಾಗಿ ಸಿಗುತ್ತಿದ್ದ ಶಂಖದ ಹುಳುಗಳನ್ನು ನುಂಗುತ್ತಿರಲಿಲ್ಲ. ಏಕೋ?

ನನ್ನ ಮಗಳಿಗೆ ನಮ್ಮ ಮಾವ ತಿರುಗುವ ಅಭ್ಯಾಸ ಮಾಡಿಸಿಬಿಟ್ಟಿದ್ದರು. ಸದಾ ಅಲ್ಲಿಗೆ ಹೋಗೋಣ, ಇಲ್ಲಿಗೆ ಹೋಗೋಣ ಎಂದು ಹಠ ಮಾಡುತ್ತಿದ್ದಳು. ಅವರೋ, ಬೆಳೆಯುವ ಮಕ್ಕಳನ್ನು ಹಾಗೆ ಬಂಧಿಗಳಂತೆ ಮನೆಯಲ್ಲೇ ಕೂಡಿಟ್ಟುಕೊಂಡಿರಬಾರದು. ಅವನು ಕರೆದುಕೊಂಡು ಹೋಗದಿದ್ದರೇನಾಯ್ತು? ನೀನು ಅವರಿವರ ಮನೆಗೆ ಕರೆದುಕೊಂಡು ಬಾ. ಎನ್ನುತ್ತಿದ್ದರು.ಆ ನಂತರವೇ, ನಾನು ಆಫೀಸಿನವರ ಕೆಲವರ ಮನೆಗೆ ಹೋಗಿ ಬರುತ್ತಿದ್ದುದು. ಒಮ್ಮೆ ಹಾಗೆ, ಹೋಗಿದ್ದಾಗ ನಡೆದ ಘಟನೆಯನ್ನು ತಿಳಿಸ್ತಿವಿ. ಬಹುಶಃ ಯಾರ ಮನೆಯಲ್ಲೂ ನಡೆದಿರಲಾರದು ಅಂತ ನನಗೆ ಅನ್ನಿಸುತ್ತೆ..

ನಮ್ಮ ಮನೆಯ ಎದುರಿಗೆ ಖನ್ನಾ ದಂಪತಿಗಳು ವಾಸವಾಗಿದ್ದರು. ಅವರಿಗೆ ಒಬ್ಬ ಮಗ, ಒಬ್ಬ ಮಗಳು. ಮಗ ಸ್ಕೂಲಿಗೆ, ಸಿಟಿಗೆ ಹೋಗುತ್ತಿದ್ದ. ಮಗಳು ಚಿಕ್ಕದು. ಆ ಹುಡುಗಿಯ ಹೆಸರು ನಿಖಿತಾ ನನ್ನ ಮಗಳಿಗಿಂತ ಒಂದೆರಡು ವರ್ಷಕ್ಕೆ ದೊಡ್ಡವಳಿರಬಹುದು. ಆ ಹುಡುಗಿ, ನಮ್ಮ ಮನೆಗೆ ಇವಳೊಡನೆ ಆಟ ಆಡಲು ಆಗಾಗ ಬರುತ್ತಿದ್ದುದು ಉಂಟು. ಆ ದಿನ ನಾನು ಇವಳನ್ನು ಎತ್ತಿಕೊಂಡು ಅವಳ ಮನೆಗೆ ಹೋದೆ. ನಿಖಿತಾ ಮಲಗಿದ್ದಳು. ನನ್ನ ಮಗಳು, ಅವಳು ಮಲಗಿದ್ದೆಡೆಗೇ ಹೋಗಿ ಎಬ್ಬಿಸಲು ಪ್ರಯತ್ನ ಮಾಡಿರಬಹುದು. ಆದರೆ ಆ ಹುಡುಗಿ ಎದ್ದಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಕೆಟ್ಟ ಮುಖ ಹಾಕಿಕೊಂಡು 'ವ್ಯಾ' ಎಂದು ಅಸಹ್ಯಿಸಿಕೊಂಡು ಹೊರಗೆ ಬಂದಳು. ನನ್ನ ಮಗಳು ಏನಾಯ್ತೋ ಅಂತ ಗಾಭರಿಯಿಂದ ಕೇಳಿದಾಗ, ಮಣ್ಣುತಿಂದ

ಕೃಷ್ಣನಂತೆ ಬಾಯಿ ಬಿಟ್ಟಳು. ಆದರೆ ಅವಳ ಬಾಯಲ್ಲಿ ಜಗವನ್ನೇನೂ ಕಾಣಲಿಲ್ಲ ನಾನು. ಬಾಯಿಯಲ್ಲಿ ಬೆಳ್ಳ ಬೆಳ್ಳಗೆ ಪುಡಿಪುಡಿಯಂತಹ, ಪಾಚಿ ಹಸಿರಿನಂತಹ ಲೋಳೆಯಾದ ಎಂಥದೋ ವಸ್ತು. ಏನಿರಬಹುದು ಎಂದು ಗೊತ್ತಾಗಲಿಲ್ಲ. ಮಡಿಚಿದ್ದ ಇನ್ನೊಂದು ಕೈಯನ್ನ ಬಿಡಿಸಿ, ತೋರಿದಳು. ಅಂಗೈಯಲ್ಲಿ ಒಂದು ಹಲ್ಲಿಯ ಮೊಟ್ಟೆ, ತಕ್ಷಣ ನನ್ನ ಹ್ರದಯವೇ ನಿಂತಂತಾಯಿತು. ಹಲ್ಲಿಯ ಮೊಟ್ಟೆಯೂ ಅಗಿದು ಬಿಟ್ಟಿದ್ದಾಳೆ. ಹೊಟ್ಟೆಗೆ ಹೋಗಿ ಸೇರಿರಲೂ ಬಹುದು. ಹಲ್ಲಿ ವಿಷ ಎನ್ನುತ್ತಾರೆ. ಹಲ್ಲಿ ಮೊಟ್ಟೆಯ ವಿಷವೇ, ಇನ್ನೇನಪ್ಪಾ ಗತಿ. ಎಂದುಕೊಂಡು ತಕ್ಷಣವೇ ನಾಲಿಗೆಯ ಮೇಲಿದ್ದ ಮೊಟ್ಟೆಯ ಅವಶೇಷಗಳನ್ನೆಲ್ಲಾ ಕರ್ಚೀಫ್‌ನಿಂದ ಬಳಿದು ತೆಗೆದೆ. ಆದರೂ ನುಂಗಿಬಿಟ್ಟಿದ್ದರೇ ಎನ್ನುವ ದಿಗಿಲು. ನೀರಿನಲ್ಲಿ ತೊಳೆದು ಒರೆಸಿದ್ದಾಯಿತು. ಮಿಸೆಸ್ ಖನ್ನಾ ಸಹ ಗಾಭರಿಯಾಗಿದ್ದಳು. ಹೊಟ್ಟೆಗೆ ಏನೇ ವಿಷ ಸೇರಿದ್ದರೂ, ಉಪ್ಪಿನ ನೀರು ಕುಡಿಸಿದರೆ, ವಿಷ ಹೊರಗೆ ಬರುತ್ತದೆ ಎಂದು ಹೇಳಿ, ಬೆಚ್ಚನೆಯ ನೀರಿನಲ್ಲಿ ಉಪ್ಪನ್ನು ಕದರಿ ಕುಡಿಸಿದಳು ಮತ್ತೆ ಮತ್ತೆ ಕುಡಿಸಿದೆವು. ನಮ್ಮ ಬಲವಂತಕ್ಕೆ ಅಳತೊಡಗಿದಳು. ತಕ್ಷಣವೇ ಮನೆಗೆ ವಾಪಸ್ಸು ಬಂದು ಬಿಟ್ಟೆ. ಸೈಕಲ ಮೆಲೆ ಹೋಗುತ್ತಿದ್ದ ಕರಡಿಯನ್ನು ನಿಲ್ಲಿಸಿ, ನಮ್ಮವರಿಗೆ ವಿಷಯ ತಿಳಿಸಲು ಕೇಳಿಕೊಂಡೆ. ಕೆಲವೇ ನಿಮಿಷಗಳಲ್ಲಿ ನಮ್ಮವರು, ಭಾಟಿಯಾ ಎಂಬುವನೊಡನೆ ಸ್ಕೂಟರ್ರಿನಲ್ಲಿ ಬಂದಿಳಿದರು. ಅವರಿಗೂ ಮುದ್ದಿನ ಮಗಳು ಹಲ್ಲಿಯ ಮೊಟ್ಟೆಯನ್ನು ತಂದಿದ್ದಾಳೆಂದರೆ ಹೇಗೆ ಹೇಗೋ ಆಗದೇ ಇರುತ್ತದೆಯೆ? ಆತಂಕದಿಂದ ಮುಖ ಕೆಟ್ಟು ಹೋಗಿತ್ತು.

ಏನಾದರೂ ಆಗಲಿ, ಡಾಕ್ಟರ ಹತ್ತಿರ ಹೋಗುವುದೇ ಸರಿ ಎಂದು ತೀರ್ಮಾನಿಸಿದೆವು. ನಮ್ಮ ಮಾವ ಸಹ ಪೆಚ್ಚಾಗಿದ್ದರು. ಇವರು ತಮ್ಮ ಸ್ಕೂಟರನ್ನು ಆಫೀಸಿನಲ್ಲೆ ಬಿಟ್ಟು ಬಂದಿದ್ದರಲ್ಲ, ಹಾಗಾಗಿ, ಭಾಟಿಯಾ ಹೇಳಿದ, "ನನ್ನ ಸ್ಕೂಟರ್ನಲ್ಲಿ ಹೋಗಿ ಬನ್ನಿ."ಅಂತ ಇಬ್ಬರೂ ಹೊರಟೆವು. ಮಲೆಗಾಂವ್ ಸಮೀಪ ಒಬ್ಬ ಡಾಕ್ಟರರ ಮನೆ. ಅವರು ಅದೇ ತಾನೆ ಕ್ಲಿನಿಕ್‌ನಿಂದ ವಾಪಸ್ಸು ಬಂದು ಊಟ ಮಾಡುತ್ತಿದ್ದರು. ಅವರ ಹೆಸರು ಡಾ. ಡೇಕ. ಅಂತ ಕಾಯುತ್ತಾ ಕುಳಿತೆವು. ಹೊಟ್ಟೆಯೊಳಗೆ ಕುಡಿಸಿದ ಉಪ್ಪು ನೀರು

ಆಟವಾಡಿಸುತ್ತಿರಬಹುದು. ಅಳತೊಡಗಿದ್ದಳು. ಕ್ಷಣ ಕ್ಷಣಕ್ಕೂ ಇನ್ನೇನೋ ಎನ್ನುವಂತೆ ತುದಿ ಕುರ್ಚಿಯಲ್ಲಿ ಕೂತಿದ್ದೆವು. ನಾವು.

ಡಾಕ್ಟರು ಹೊರಗೆ ಬಂದರು. ಕೂಲಂಕಷವಾಗಿ ಪರೀಕ್ಷಿಸಿದರು. ''ಹೊಟ್ಟೆಗೆ ವಿಷ ಸೇರಿರುವಂತೆ ಅನ್ನಿಸುವುದಿಲ್ಲ. ಏನಾದರಾಗಲೀ ವಿಷದ ಪ್ರಭಾವ ಹೋಗುವಂತಹ ಒಂದು ಇಂಜಕ್ಷನ್ ಕೊಡ್ತಿನಿ.'' ಅಂತ ಹೇಳಿ ಇಂಜೆಕ್ಷನ್. ಕೊಟ್ಟರು. ನಾವು ಥ್ಯಾಂಕ್ಸ್ ಹೇಳಿ ಹೊರಗೆ ಬಂದೆವು. ಸಂಕಟ ದಿಂದ ಒದ್ದಾಡುತ್ತಿದ್ದವಳು ಒಂದೆರಡು ಬಾರಿ ವಾಂತಿ ಮಾಡಿ ಶಾಂತವಾದಳು. ನಂತರ ಮನೆಗೆ ವಾಪಸ್ಸು ಹೊರಟೆವು. ನಮ್ಮ ಮನೆಯ ಬಾಗಿಲಿನಲ್ಲಿ ನಮ ಗಾಗಿ ಕಾಯುತ್ತಾ ಎಲ್ಲರೂ ನಿಂತಿದ್ದಾರೆ. ಆಫೀಸಿ ಬಿಟ್ಟಿದ್ದರಿಂದ ಆಫೀಸಿನವ ರೆಲ್ಲಾ ಬಂದು ಸೇರಿದದಾರೆ. ಏನೋ ಒಂದು ಅಪಘಾತ ನಡೆದಿದೆ ಎಂದು ನಮಗೇ ಗಾಭರಿಯಾಗುವಂತೆ ಆ ಜನ ಸಮೂಹವನ್ನು ಕಂಡು ಮುಜುಗರ ವಾಗಿತ್ತು. ಎಲ್ಲರಿಗೂ ವಿಷಯ ತಿಳಿದು ಹೋಗಿತ್ತು. ಎಲ್ಲರೂ ಸ್ಕೂಟರನ್ನು ಸಮೀಪಿಸಿದರು. ಎಲ್ಲಾ ವಿಚಾರಿಸುವವರೇ. ಸಿಗರೇಟು ಸೇದುತ್ತಾ ನಿಂತಿದ್ದ ಕರಡಿ ಮಾತ್ರ ಹತ್ತಿರಕ್ಕೆ ಬರದೇ ದೂರದಿಂತಲೇ ಕ್ಷೇಮವಾಗಿರುವ ಇವಳನ್ನು ನೋಡಿ, ತನ್ನ ಪಾಡಿಗೆ ತಾನು ತನ್ನ ಮನೆಗೆ ಹೊರಟು ಹೋಯಿತು.

ದೇಸಾಯಿ ಹತ್ತಿರ ಬಂದು,''ಏನ್ ತಾಯೀ ನೀನೂ ಛಲೋ ಇದೀಯ ಎಲ್ರೂ ಕೋಳಿ ಮೊಟ್ಟೆಯ ಆಮ್ಲೇಟ್ ತಿನ್ನಲಿಕ್ಕೆ ಬಯಸಿದ್ರೇ, ನೀನು ಹಲ್ಲಿ ಮೊಟ್ಟೆ ಆಮ್ಲೆಟ್ ತಿನ್ನೋಕೆ ಹೊಂಟಿದ್ದಯೇನು?''ಎಂದು ತಮಾಷೆ ಮಾಡಿದ. ಸುರಕ್ಷಿತವಾಗಿದ್ದವಳನ್ನು ಕಂಡು, ಎಲ್ಲರೂ ಚದುರಿದರು. ನಾನು ಒಳಗೆ ಬಂದೆ. ಇವರು ಸ್ಕೂಟರ್ ತರಲೆಂದು ಮತ್ತೆ ಭಾಟಿಯಾನ ಜತೆ ಆಫೀಸ್ ಕಡೆಗೆ ಹೋದರು. ಉಪ್ಪ ನೀರು, ಕುಡಿದೋ, ಅತ್ತೂ ಅತ್ತೂ ಸುಸ್ತಾ ಗಿದ್ದರಿಂದಲೋ ಇವಳು ಮಲಗಿದಳು. ನಮ್ಮ ಮಾವ ತಮ್ಮ ಬಳಿ ಎದ್ದ ಒಂದು ಪುಟ್ಟ ಬೊಂಬೆಯನ್ನು ಇವಳ ಕೈಗೆ ಕೊಟ್ಟಿದ್ದರು. ಅದನ್ನು ಕೈಯಲ್ಲಿ ಹಿಡಿದು ಮಲಗಿದವಳು ಎದ್ದಿದ್ದು ಮಾರನೇ ದಿನ ಬೆಳಿಗ್ಗೇನೆ. ಅವಳು ಉಸಿ ರಾಡುತ್ತಿದ್ದುದನ್ನು ಆಗಾಗ್ಗೆ ಗಮನಿಸುತ್ತಿದ್ದರೂ ವಿಷದ ಅಮಲು ಏರಿ, ಹಾಗೆ ನಿದ್ರಿಸುತ್ತಿದ್ದಾಳೋ ಏನೋ.. ನಿದ್ದೆಯಿಂದ ಎಚ್ಚರಗೊಲ್ಲುತ್ತಾಳೋ

ಇಲ್ಲವೋ ಅಂತ ಸಹ ಅನ್ನಿಸಿದ್ದುಂಟು. ಆದರೆ ಅದನ್ನು ಒಬ್ಬರಿಗೊಬ್ಬರು ಹೇಳಲು ಅಂಜಿದೆವು. ಆ ರಾತ್ರಿ ನಮಗ್ಯಾರಿಗೂ ನಿದ್ದೆ ಇಲ್ಲ ಅಷ್ಟೆ. ಆಗಾಗ್ಗ ಅವಳ ಕಡೆ ನೋಡುವುದೇ ಕೆಲಸ. ಆ ವಿಷಯಕ್ಕೇ ವಾಗ್ವಾದ, ಮನಸ್ತಾಪ

ನಮ್ಮ ಮಾವ ಊರಿಗೆ ಹೊರಡಲು ಅವಸರಿಸಿದರು. ಅವರಗೆ ಮನೆಯಲ್ಲೇ ಕೂತಿರುವುದೆಂದರೆ ಬೇಸರ. ನಮ್ಮವರಿಗೆ ಹೊರಗೆ ತಿರುಗುವುದೆಂದರೇ ಆಗದು.

ದಸಾರ ಹಬ್ಬದ ನಂತರ, ಡೋಲಿಕ್ ಬಾರಿಸುವವರು ಮನೆ ಮನೆಗೂ ಬಂದು ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುತ್ತಾರೆ. ಇಲ್ಲಿಯ ಕೋಟೇ ಬಸವನ್ನ ಕರೆದುಕೊಂಡು ಬಂದು ವಾಲಗ ಊದಿ ಧವಸ ಧಾನ್ಯ, ಹಣ ಬಟಟೆ ವಸೂಲು ಮಾಡುವವರಂತೆ. ಒಂದು ದಿನ ಒಬ್ಬ ಢೋಲಕ್ ಬಾರಿಸುವವನು ಮನೆ ಮನೆ ಬಾಗಿಲಿಗೆ ಬಂದು ಬಾರಿಸುತ್ತಿದ್ದ. ತಾಳ ಬದ್ದವಾಗಿ ಅವನು ಬಾರಿಸುತಿದ್ದುದು ಕೇಳಲು ಹಿತವಾಗಿತ್ತು. ನಮ್ಮ ಮಾವನವಿಗೆ, ಹುಲಿವೇಷ ಕೋತಿ ಬಸವ, ಆಲಿ ದು ಉಲ್ಲಾ ಅಂತ ಬರೋರು, ಇಂಥದ್ದನ್ನೆಲ್ಲಾ ನೋಡಿ ಖುಷಿ ಪಡುವುದು, ಕಾಸು ಕೊಡುವುದು ಎಂದರೆ ತುಂಬಾ ಆಸೆ.

ಸರಿ. ಡೋಲಕ್‌ನವನ ಮುಂದೆ ನಾಲ್ಕಾಣೆ ಹಿಡಿದು ಕುಳಿತರು. ಅವನು ಯಾವ ತಾಳ ಬಾರಿಸಿದನೋ, ಇವರಿಗೆ ಏನು ಅರ್ಥವಾಯಿತೋ ಗೊತ್ತಿಲ್ಲ. ಕಣ್ಣು ಮುಚ್ಚಿ ತಾಳ ಹಾಕುತ್ತಾ ಕುಳಿತವರು, ಅವನು ನಿಲ್ಲಿಸಿದ ಕೂಡಲೇ, ಏಕ್ ವರಸೆ ಔರ್ ಬಜಾವೋ..ಎಂದು ನುಡಿದಿದ್ದರು. ಅವನೋ ಪಕ್ಕ ಅಸ್ಸಾಮಿ. ಅವನಿಗೆ ಹಿಂದಿಯೇ ಬರುಲ್ಲ ಅಂಥಾದ್ದರಲ್ಲಿ ಕನ್ನಡ ಬೆರೆತ ಹಿಂದಿ ಅವನಿಗೆ ಹೇಗೆ ಅರ್ಥವಾದೀತು. ನಮ್ಮ ಮಾವನಿಗೆ ಬರುತ್ತಿದ್ದ ಹಿಂದಿಯೂ ಉರ್ದು ಕನ್ನಡ ಬೆರೆತ ಜಟಕಾ ಸಾಬಿ ಹಿಂದಿಯೇ. ವರಸೆ ಅನ್ನೋಕೆ ಹಿಂದಿ ಪದ ಇವರಿಗೆ ಗೊತ್ತಿಲ್ಲ. ಅವನಿಗೆ ಅರ್ಥವಾಗಲಿಲ್ಲ. ಮಿಕಿ ಮಿಕಿ ಇವರನ್ನೆ ನೋಡಿದ. ನಾನು ನಕ್ಕಿದ್ದೆ. ನಮ್ಮವರಿಗೆ ತಿಳಿದು ಅವರು ಅಪ್ಪನನ್ನು ಗದರಿದ್ದರು. ಅಂಥಾರೋನ್ನೆಲ್ಲಾ ಮನೆ ಬಾಗಿಲಿನಲ್ಲಿ ಕೂರಿಸಿ ಕೊಂಡು, ಅವನ ಮುಂದೆ ಕೂತ್ಕೊಳೋದಾ, ಇದು ಕಲಾಸಿ ಪಾಳ್ಯಂ ಅಲ್ಲ. ಇಲ್ಲಿಯೋರೆಲ್ಲಾ ನಗ್ತಾರೆ."

"ನಗಲೀ ಬಿಡೋ.. ಅವರು ನಗ್ತಾರೆ ಅಂತ ನಮ್ಮ ಖುಷೀನ ನಾವು ಹಾಳು ಮಾಡಿಕೊಳ್ಳೋಕೆ ಆಗುತ್ತಾ? ನಮ್ಮ ಪಾಪು ಎಷ್ಟು ಖುಷಿ ಪಡ್ತು ಗೊತ್ತಾ?"

"ಇಂಥ ಹಳ್ಳಿ ವಿದ್ಯನೆಲ್ಲಾ ನನ್ನ ಮಗಳಿಗೆ ಕಲಿಸಬೇಡಿ."

"ಅಯ್ಯೋ ಬೆಪ್ಪಾ. ಈಗ ನೀನಿರೋದು ಹಳ್ಳೀನೇ. ಷಹರಲ್ಲ."

ಅದಕ್ಕೇ ನಿಮಗೆ ಇಲ್ಲಿ ವಾತಾವರಣ ಸರಿ ಹೋದದ್ದು. ಅಲ್ವಾ?"

"ಹೌದಪ್ಪಾ. ಆದರೆ ನಿನ್ನ ಮನೆ ವಾತಾವರಣ ನನಗೆ ಸರಿ ಹೋಗ ಲಿಲ್ಲ. ಮನೆ ಬಿಟ್ಟು ಕದಲುಲ್ಲ ಯಾರೂನೂ. ಅದೇನೂ ಒಳಗೇ ಸದಾ ಇರೋದು."

"ಇಲ್ಲಿ ಹಾಗೆಲ್ಲಾ ಎಲ್ಲಿ ಅಂದರೆ ಅಲ್ಲಿ ತಿರುಗಾಡಿದರೆ ನಗ್ತಾರೆ. ಆಫೀಸಿನ ಜನರು. ಇಲ್ಲಿಯ ರೀತಿ ನೀತೀನೇ ಬೇರೆ."

"ನಿನಗೆ ಯಾರೋ ನಗ್ತಾರೆ ಅಂತ ಅದೇ ಚಿಂತೆ. ಇಂಥ ಸುಂದರವಾದ ಊರಿನಲ್ಲಿದ್ದು ಏನೂ ನೋಡುಲ್ಲವಲ್ಲ ನೀವುಗಳು ಅಂತ ನನಗೆ ಅದೇ ಚಿಂತೆ. ಸರಿ, ನಿಮ್ಮ ನಿಮ್ಮ ಇಷ್ಟ. ಊರಿಗೆ ಕಳಿಸಿಬಿಡು ನನ್ನನ್ನು. ನಾನು ಮತ್ತೂರಿಗೆ ಹೋಗ್ತೀನಿ."

"ಮತ್ತೂರಿಗೆ ಹೋಗಿ ಏನು ಮಾಡ್ತೀರಿ ? ಅಲ್ಲಿ ಯಾರಿದಾರೆ?"

"ಯಾಕೆ ಯಾರೂ ಇಲ್ಲದ ಊರೇನಲ್ಲ ಅದು. ನನ್ನಂಥೋನಿಗೆ ಅದೇ ಸರಿ. ನನ್ನನ್ನು ರೈಲು ಹತ್ತಿಸು. ನಾನು ಇಲ್ಲಿ ಇನ್ನಿರುಲ್ಲ."

ಆಗಲಿ, ಇನ್ನು ಹದಿನೈದು ದಿನ ತಡೀರಿ. ನನಗೆ ಟೂರ್ ಹೋಗ ಬೇಕಾಗಿದೆ. ಹೋಗಿ ಬಂದು ಬಿಡ್ತಿವಿ. ಆಮೇಲೆ ಕಳಿಸ್ತಿವಿ. ಈ ಮಧ್ಯೆ ನನಗೆ ಮಲೇರಿಯಾ ಜ್ವರ ಬಂದು ಹದಿನೈದು ದಿನಗಳು ನರಳಬೇಕಾಯ್ತು. ಆಗ ನಮ್ಮ ಮಾವ ನಮ್ಮ ಜೊತೆ ಇದ್ದುದು ನನಗೆ ತುಂಬಾ ಸಹಾಯಕ ವಾಯ್ತು.

ಸಿಲಿಗುರಿ ಅಂತ ಒಂದು ಊರು. ಅಲ್ಲಿ ಜಲಪಾಯ್ ಗುರಿ ಅಂತ ಸಹ ಇನ್ನೊಂದು ಊರಿದೆ. ಹೀಗೇ ಅನೇಕ ಗುರಿಗಳು. ಬಹುಶಃ ಇಲ್ಲಿಯ ಗುಡಿ ತರಹ ಅಲ್ಲಿಯ ಗುರಿ ಅಂತ ಅಂದು ಕೊಂಡೆ. ಹಾಗೇ ಬಾರಿ ಬಾರಿ ಬಾಡೀ ಒಂದೇ ಅರ್ಥ. ಬಾಡಿ ಅಂದರೆ ಮನೆ. ವಾಡೀ ಪದದಿಂದ ಬಂದಿರಬಹುದು.

ಈ ಕಡೆ. ತೀರ್ಥಹಳ್ಳಿ ಕಡೆ, ಕಟ್ಟೇ ಮನೆ, ಪಟ್ಟೆ ಮನೆ, ಮೂಡ್ಲಮನೆ, ಅಂತ ಹಳ್ಳಿಗಳಲ್ಲವೇ ಹಾಗೇ ಈ ಬಾರಿಗಳು, ಗುರಿಗಳು.

ಸಿಲಿಗುರಿ ತುಂಬಾ ದೂರದಲ್ಲಿರಲಿಲ್ಲ. ಆದರೆ ಅಲ್ಲಿ ಎರಡು ದಿನದ ಕೆಲಸವಿದ್ದುದರಿಂದ ಒಂದು ರಾತ್ರಿ ಅಲ್ಲಿಯ ಗೆಸ್ಟ್ ಹೌಸ್‌ನಲ್ಲಿರಬೇಕಾಗಿತ್ತು. ಹತ್ತಾರು ಸಾರಿ ಹುಶಾರಾಗಿರಿ ಅಂತ ಹೇಳಿ ಹೇಳಿ ಇವರು ಮನೆಯಿಂದ ಹೊರಟರು.

ನಮ್ಮ ಮಾವನಿಗೆ ಕಳ್ಳರ ಭಯ ಜಾಸ್ತಿ. ಕಳ್ಳರು ಹಣ ಹೊಡೆದು ಬಿಡ್ತಾರೆ ಅಂತ ಹಣವನ್ನು ಎಷ್ಟು ಸುರಕ್ಷಿತವಾಗಿ ಇಟ್ಟರೂ ಸಾಲದು. ಅವರಲ್ಲಿ ಸ್ವಲ್ಪ ಹಣ ಇತ್ತೇನೋ ಅದನ್ನು ಸದಾ ತಮ್ಮ ಕೋಟಿನ ಒಳ ಜೇಬಿನಲ್ಲಿಟ್ಟುಕೊಂಡಿರುತ್ತಿದ್ದರು. ರಾತ್ರಿಯ ಹೊತ್ತು ಕೋಟನ್ನು ಗೋಡೆಗೆ ತಗುಲಿ ಹಾಕುವಾಗ ಹಣವನ್ನು ತಮ್ಮ ದಿಂಬಿನ ಕೆಳಗಿಟ್ಟು ಕೊಳ್ಳುತ್ತಿದ್ದರು. ಆದರೆ ಆ ರಾತ್ರಿ ಅವರಿಗೆ ಆ ಹಣವನ್ನು ದಿಂಬಿನ ಕೆಳಗಿ ಇರಿಸಿಕೊಳ್ಳಲೂ ಭಯ. ಯೋಚಿಸಿ, ಯೋಚಿಸಿ., ನಂತರ ಹಳೇ ಪೇಪರ್ರುಗಳನ್ನು ಜೋಡಿಸಿಟ್ಟದ್ದರ ಮಧ್ಯೆ ಇಟ್ಟು ಬಿಟ್ಟಿದ್ದಾರೆ. ಇದು ನನಗೆ ತಿಳಿಯದು. ಮಾರನೇ ದಿನ ಎದ್ದು ಪೇಪರುಗಳನ್ನೆಲ್ಲಾ ಹರಡಿ ಕೊಂಡು ಕೂತಿದ್ದಾರೆ. ಮತ್ತೆ ಮತ್ತೆ ಪೇಪರು ಗಳನ್ನೆಲ್ಲಾ ಕೊಡವಿ ನೋಡುತ್ತಿದ್ದಾರೆ.. ಏನಾದ್ರೂ ಹುಡುಕ್ತಾ ಇದೀರಾ ಅಂತ ಕೇಳಿದೆ. ಉತ್ತರವಿಲ್ಲ. ಯಾವ ಆರ್ಟಿಕಲ್ ಬೇಕೂಂತ ಹೇಳಿದರೆ ನಾನು ಹುಡುಕಿ ಕೊಡ್ತೀನಿ ಎಂದೆ. ಪರವಾಗಿಲ್ಲ ನಾನೇ ಹುಡುಕಿಕೊಳ್ತೀನಿ ಅಂದರು ಸುಮ್ಮನಾದೆ.

ಮಾರನೇ ದಿನ ಸಂಜೆ ಮಗ ವಾಪಸ್ಸಾದರು. ಅವರು ಹರಡಿದ್ದ ಪೇಪರ್ರುಗಳನ್ನ ನೋಡಿ ಸಿಡುಕು ಮುಖ ಮಾಡಿದರು. ನಾನು ನನ್ನದೇನೂ ತಪ್ಪಿಲ್ಲ. ಅಂತಂದೆ. ನಮ್ಮ ಮಾವ ಆಗ ಬಾಯಿ ಬಿಟ್ಟರು. ರಾತ್ರಿ ನೀನೂ ಮನೇಲಿರಲಿಲ್ಲ. ನನ್ನ ಹತ್ತಿರ ಸ್ವಲ್ಪ ಹಣವಿತ್ತು. ಕಳ್ಳ ಏನಾದ್ರೂ ಬಂದ್ರೆ ಗಿಂದ್ರೆ ಹಣ ಸಿಗದಿರಲಿ ಅಂತ ದಿಂಬಿನ ಕೆಳಗ್ನಿಂದ ತೆಗೆದು ಈ ಹಳೇ ಪೇಪರ್ರುಗಳ ಮಧ್ಯೆ ಇಟ್ಟಿದ್ದೆ. ಈಗ ನೋಡಿದ್ರೆ ನೂರು ರುಪಾಯಿ ಕಡಿಮೆ ಆಗಿದೆ.

"ಎಷ್ಟು ಇಟ್ಟಿದ್ರಿ?" ಅಂತ ಅವರಿಗೆ ಹೇಳಲು ಇಷ್ಟವಿಲ್ಲ.

ನಂಗೊತ್ತು ನೂರು ರುಪಾಯಿ ಕಡಿಮೆ ಆಗಿದೆ ಅಂತ. ಎಲ್ಲೋ ಯಾವುದೋ ಮಡಿಕೆ ಯೊಳಗೆ ಸಿಕ್ಕಿಕೊಂಡು ಬಿಟ್ಟಿದೆ. ಹಾಳಾದ್ದು. ಸಿಗ್ತಿಲ್ಲ. ಮತ್ತೆ ಮತ್ತೇ ಹುಡುಕಿದರು.

"ಇಲ್ಲಿ ಕಳ್ಳರು, ಕಾಕರೂ ಯಾರೂ ಬರುಲ್ಲ. ಇದು ಬೆಂಗಳೂರಲ್ಲ ನೀವೇಕೆ ಎಲ್ಲೆಲ್ಲೋ ದುಡ್ಡನ್ನು ಇಡೋಕೆ ಹೋದ್ರಿ? ಕೋಟಿನ ಜೇಬಿನಲ್ಲೇ ಇಟ್ಟಿರ ಬೇಕಾಯಿತು."

"ನೀ ಅದ್ಹೇಗೆ ಅಷ್ಟು ಧ್ಯರ್ಯವಾಗಿ ಹೇಳ್ತಿಯಾ? ನೀನು ಊರಿನಲ್ಲಿಲ್ಲ ಅನ್ನೋ ವಿಚಾರ ಎಷ್ಟೋ ಜನಕ್ಕೆ ಗೊತ್ತಿತ್ತಲ್ಲ."

"ಗೊತ್ತಿದ್ರೂ ಯಾರೂ ಬರುಲ್ಲ. ನಾನೊಂದು ವಿಷಯ ಹೇಳಿದ್ರೆ ನಿಮ್ಮ ಎದೇನೇ ಒಡೆದು ಹೋಗುತ್ತೇನೋ.. ನಾನು ಇವಳನ್ನೂ ಮಗೂನೂ ಕರೆದುಕೊಂಡು ಬರೋಕೆ ಅಂತ ಬಂದಿದ್ನಲ್ಲ. ಆಗ ಹಿಂಬಾಗಿಲಿನ ಚಿಲುಕ ವನ್ನೇ ಹಾಕಿರಲಿಲ್ಲ. ಹತ್ತು ಹನ್ನೆರಡು ದಿನ ಬರೀ ಬಾಗಿಲು ಹಾಗೇ ಹಾಕಿತ್ತು. ಯಾರೂ ಕಾಂಪೌಂಡ್‌ನೊಳಕ್ಕೆ ಸಹ ನುಸುಳಿರಲಿಲ್ಲ. ಗೊತ್ತಾ?"

"ನಿನಗೆ ಹೇಗೆ ಗೊತ್ತು? ಅದಕ್ಕೇ ಹೇಳೋದು ನಿಮಗೆಲ್ಲಾ ಜವಾಬ್ದಾರಿ ಇಲ್ಲ." ಅಂತ. ಮಾವ ಅಸಹನೆಯನ್ನು ವ್ಯಕ್ತಪಡಿಸಿದರು

"ನಂಗೊತ್ತು. ನಾನು ರೂಮಿಗೆ ಮಾತ್ರ ಬೀಗ ಹಾಕಿ ಹೊಗಿದ್ದೆ. ಅದು ಹಾಗೇ ಇತ್ತು. ಕಳ್ಳರು ಬಂದಿದ್ರೆ ಬೀಗಾನ ಒಡೀದೇ ಇರುತ್ತಿದ್ರಾ? ಇಲ್ಲಿಯ ಜನರು ಇನ್ನು ಅಷ್ಟು ಮುಂದುವರೆದಿಲ್ಲ. ಅವರು ಕೇಳಿ ಹಣ ತೆಗೆದುಕೊಳ್ತಾ ರೆಯೇ ಹೊರತು ಕದಿಯಲ್ಲ. ಇಲ್ಲಿನವರು ತುಂಬಾ ನಂಬಿಕಸ್ಥರು."

"ಸರಿ. ನಿನಗಿರುವಷ್ಟು ನಂಬಿಕೆ ನನಗಿಲ್ಲ. ನನಗೆ ಮೊದಲ್ನಿಂದ ಅದೇ ಅಭ್ಯಾಸ. ಬಿಡು. ಈ ಹಳೇ ಪೇಪರುಗಳನ್ನ ಕೊಡುವ ಮೊದಲು ಸರಿಯಾಗಿ ಮತ್ತೊಮ್ಮೆ ಕೊಡವಿ ನೋಡಿ. ನೋಟು ಸಿಕ್ಕರೆ, ಪಾಪುಗೆ ಏನಾದ್ರೂ ಹೊಸ ಬಟ್ಟೆ ತೆಗೆಸಿಕೊಟ್ಟುಬಿಡು." ಅವರಿಗೆ ತುಂಬಾ ಬೇಸರವಾಗಿತ್ತೇನಿಸಿತ್ತು.

ಕಲ್ಕತ್ತಾ ತನಕ ಹೋಗಿ ಹೌರಾ ಎಕ್ಸ್‌ಪ್ರೆಸ್‌ಗೆ ಕೂರಿಸಿದ್ದಾಯಿತು.

ರೈಲು ಹತ್ತಿ ಕೂತ ಮೇಲೆ, ಕಲ್ಕತ್ತಾದಲ್ಲಿ ಅವರ ಕೈಗೆ ಒಂದಿಷ್ಟು ಹಣ ಕೊಟ್ಟು, ಬೇರೆ ಬೇರೆ ಕಡೆ ಇಟ್ಕೊಳ್ಳಿ. ಕಳೆದು ಹೋದರೂ ಪೂರ್ತಿ ಕಳೆ

ಯುಲ್ಲ. ಅಂದರೆ, ಅವರು ಹಣವೇ ಬೇಡ, ಹಣ ಇದ್ದಷ್ಟು ಭಯ ಜಾಸ್ತಿ. ಹೇಗೂ ಟಿಕೆಟ್ ತೆಗೆಸಿಕೊಟ್ಟಿದೀಯ ಅಂತ ಅಂದು ಬಿಟ್ಟರಂತೆ. ಕಲ್ಕತ್ತಾದಿಂದ ಮದ್ರಾಸ್ ಕಡೆ ಹೋಗುವ ಕನ್ನಡಿಗೊಬ್ಬರು ಅವರ ಸಹ ಪ್ರಯಾಣಿಕರಾಗಿದ್ದರು. ಆದ್ದರಿಂದ ಹೆಚ್ಚಿನ ಆತಂಕವಿರಲಿಲ್ಲ. ಬೆಂಗಳೂರಿನ ಕಳ್ಳರ ಭಯವೇ ಅವರ ಮನಸ್ಸಿನಲ್ಲಿ ಉಳಿದಿತ್ತೇ ವಿನಃ ಅಸ್ಸಾಮಿನ ವಾಸಿಗಳ ನಂಬಿಕೆ ವಿಶ್ವಾಸದ ಅರಿವಾಗಲು ಅವರಿಗೆ ಸಾಧ್ಯವಾಗಿರಲಿಲ್ಲ.

ತಾತಾನೂ ವಾಪಸ್ಸು ಹೊರಟು ಹೋದ ಮೇಲೆ, ನನ್ನ ಮಗಳಿಗೆ ಹೆಚ್ಚು ಆಟ ಆಡಿಸುವವರಿಲ್ಲವಾಯಿತು. ಸದಾ ರಾಶಾ.. ಅವಳ ಹಿಂದೆ ಮುಂದೆ ತಿರುಗಾಟ. ಮಗಳಿಗೋಸ್ಕರ, ಭಾನುವಾರ, ವಾರಕ್ಕೊಮ್ಮೆ ಹೊರಗೆ ಹೋಗಿ ಬರುವ ಪರಿಪಾಠ ಮಾಡಿಕೊಂಡೆವು.



ಗೌಹಾಟಿಯಲ್ಲಿ ಎಷ್ಟೋ ದೇವಾಸ್ಥಾನಗಳಿವೆ. ಅದರಲ್ಲಿ ಮುಖ್ಯವಾದದ್ದು ಬ್ರಹ್ಮಾಪುತ್ರಾ ನದಿಯ ದೀಪದಲ್ಲಿರುವದಲ್ಲಿರುವ ಉಮಾನಂದ ದೇವಾಲಯ. ನದಿಯ ಮೇಲ್ದಂಡೆಯಲ್ಲಿರುವ ಕಾಮಾಖ್ಯಾ ದೇವಾಲಯ.

ಬೆಟ್ಟದ ಮೇಲೆ ದೇವಾಸ್ಥಾನ. ಗರ್ಭಗುಡಿಯ ಗುಹೆಯಂತಿದ್ದು. ಒಬ್ಬೊಬ್ಬರೇ ಹೋಗಿ ಬರಲು ಸಾಧ್ಯವಾಗುತ್ತದೆ. ನಾವೇ ನಮ್ಮ ಕೈಯಾರ ಪೂಜೆ ಮಾಡಿ, ಅಲ್ಲಿ ಬಂಡೆಯ ಸಂದಿ ಹರಿಯುವ ನದಿಯ ನೀರನ್ನು ಮುಟ್ಟಿ ಪ್ರೋಕ್ಷಿಸಿಕೊಳ್ಳ ಬಹುದು. ಅಲ್ಲಿಂದ ಇನ್ನು ಮೇಲಕ್ಕೆ ಮೆಟ್ಟಲು ಹತ್ತಿ ಹೋದರೆ ಭುವನೇ ಶ್ವರಿಯ ದೇವಾಲಯ. ಅಲ್ಲಿಂದ ನಿಂತು ಕೆಳಗೆ ನೋಡಿದರೆ, ಇಡೀ ಗೌಹಾಟಿ ಯನ್ನು ಕಾಣಬಹುದು. ಕೆಳಗೆ ಹರಿಯುವ ಬ್ರಹ್ಮಪುತ್ರಾ ನದಿಯ ಉದ್ದ ಅಗಲಗಳನ್ನು ಕಾಣಬಹುದು. ಮೇಲೆ ನಿಂತು ಕೆಳಗೆ ನೋಡುವ ದೃಶ್ಯ ಅತೀ ಮನೋಹರ. ಈ ಸೊಬಗನ್ನುನೋಡಿ ಆನಂದಿಸುವ ಸಲುವಾಗಿ ನಾವು ಒಂದೆರಡು ಬಾರಿ ಬೆಟ್ಟವನ್ನು ಹತ್ತಿದ್ದೆವು.

ಸಿಟಿಯಲ್ಲಿ ಒಂದು ರೇಸ್ಟೋರೆಂಟ್ ಅದರ ಹೆಸರು ಹೋಟೆಲ್ ಪಗೋಡಾ. ಹೋಟೆಲ್ ಪಗೋಡಾದ ಸ್ವಾದಿಷ್ಟವಾದ ವಿಶಿಷ್ಟವಾದ ಅನೇಕ ವೆಜಿಟೇಬಲ್ ಕಟ್‌ಲೆಟ್ ಸಿಗುತ್ತಿತ್ತು. ಅದನ್ನು ತಿನ್ನಲೆಂದು ನಾನು ಬಲವಂತ ವಾಗಿ ಇವರನ್ನು ಹೋಟೆಲ್ಲಿಗೆ ಕರೆದೊಯ್ಯುತ್ತಿದ್ದೆ. ದೆಹಲಿಯ ಚಳಿಗಾಲದಲ್ಲಿ ಬಿಸಿ ಬಿಸಿ, ಚೋಳದ ಬುಟ್ಟಾಗಳನ್ನು ಎಲ್ಲರೂ ತಿಂದರೂ ನಾವೆಂದೂ ತಿಂದಿರ ಲಿಲ್ಲ. ಬೀದಿಯಲ್ಲಿ ನಿಂತು ಹಾಗೆ ತಿನ್ನಬಾರದು ಅನ್ನೋ ಭಾವನೆ. ಆದರೆ ಇಲ್ಲಿ ಹೋಟೆಲ್ಲಿನ ಒಳಗೆ ಕುಳಿತು ಎರಡೆರಡು ಕಟ್ಲೇಟ್, ಎರಡೋ ಮೂರೋ ಗೋಲ್ಡ್‌ಸ್ಪಾಟ್ ಕುಡಿದು ಅಪರೂಪದ ಆಸೆಯನ್ನು ಪೂರೈಸಿ ಕೊಂಡಿದ್ದೆ ನಮ್ಮವರಿಗೆ ತಮಾಷೆ.

ಸಿಟಿಗೆ ಆಗಾಗ ಸ್ಕೂಟರ್‌ನಲ್ಲಿ ಹೋಗುತ್ತಿದ್ದೆವು. ಚಿಕ್ಕ ಚಿಕ್ಕ ರಸ್ತೆಗಳು. ಮಳೆ ಬಂದು ಹಾಳಾಗಿ ಹೋಗಿರುತ್ತಿದ್ದುದರಿಂದ, ಹಿಂದುಗಡೆ ಮಗುವನ್ನು ಎತ್ತಿಕೊಂಡು ಕೂರುವುದು ಕಷ್ಟವೆನಿಸುತ್ತಿತ್ತು. ಒಂದು ಸಾರಿ, ಮನೆಯಿಂದ ಸಿಟಿಗೆ ಸ್ಕೂಟರ್ನಲ್ಲಿ ಹೊರಟ ಗಳಿಗೆಯೇ ಸರಿ ಇರಲಿಲ್ಲವೋ ಏನೋ, ಒಂದು ಸಾರಿ, ರಸ್ತೆ ಪಕ್ಕದ ಮೋರಿಗೆ ಬಿದ್ದಿದ್ದೆವು. ಎದ್ದು ಮತ್ತೆ ಸ್ವಲ್ಪ ದೂರ ಹೋದ ನಂತರ, ಎದುರಿಗೆ ಸರ್ರನೆ ಬಂದ ಬಾರಿಗೆ ಹೆದರಿ ನಾನು ಹಿಂದೆ ಮುಂದೆ ನೋಡದೇ ಧುಮುಕಿದದೆ ಸಣ್ಣ ಸಣ್ಣ ರಸ್ತೆಗಳು. ಒಂದ ಕಳಿಗೆಯಲ್ಲಿ ಕತೆಯೆಲ್ಲಾ ಮುಗಿದು ಹೋಗುವ ಅಪಾಯವನ್ನು ತಪ್ಪಿಸಿಕೊಂಡಿದ್ದೆ. ಅಷ್ಟೆ

ಕೆಲವು ದಿನಗಳ ಪ್ರಯಾಸ. ಅಲ್ಲಿಂದ ನಮಗೆ ಬೆಂಗಳೂರಿಗೆ ವರ್ಗವಾಯಿತು.


ವರ್ಗವಾಯಿತೆಂದು ತಿಳಿದ ನಂತರ ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ದಿನ ಊಟಕ್ಕೆ ಕರೆಯಲಾರಂಭಿಸಿದರು. ಅವರ ಪೈಕಿ, ಜೈನ್ ದಂಪತಿಗಳು, ಅವರು ಮಧ್ಯಪ್ರದೇಶದ ಉಜ್ಜಯಿನಿ ಕಡೆಯವರು. ಗ್ವಾಲಿಯರ್ ನಿಂದ ಗೌಹಾಟಿಗೆ ಬಂದಿದ್ದರು. ಅವರ ಮಗಳು ನನ್ನ ಮಗಳಿಗಿಂತ ಒಂದು ತಿಂಗಳಿಗೆ ದೊಡ್ಡವಳು. ಆ ಹುಡುಗಿ ಊಟ ತಿಂಡಿ, ತಿನ್ನುತ್ತಿರಲಿಲ್ಲ. ಹಾಲು ಕುಡಿಯುತ್ತಿರಲಿಲ್ಲ. ಮಧ್ಯಾಹ್ನದ ಒಂದು ಹೊತ್ತು ಅರ್ಧ ರಸಬಾಳೆ ಹಣ್ಣು ತಿಂದರೆ ಆಯಿತು. ಅಷ್ಟೇ ಆಹಾರ. ಜೈನ ದಂಪತಿಗಳ ಮಗು, ಆಗಲೇ ಜೈನಿ ಮುನಿಗಳಂತೆ, ನಿರಾಹಾರದ ಅಭ್ಯಾಸ ಮಾಡಿಕೊಳ್ಳುತ್ತಿತ್ತೇನೋ. ಪಕ್ಕಾ ಶಾಕಾಹಾರಿಯಾದ ಅವರ ಮನೆಯ ಊಟ ಅತ್ಯಂತ ಹಿತವಾಗಿತ್ತು. ರುಚಿಯಾಗಿತ್ತು.

ನಂತರ ಮರುದಿನ ಶರ್ಮಾದಂಪತಿಗಳ ಮನೆಯಲ್ಲಿ ನಮಗೆ ರಾತ್ರಿಯ ಭೋಜನ. ಉತ್ತರ ಪ್ರದೇಶದ ಬ್ರಾಹ್ಮಣ ಕುಟುಂಬಕ್ಕೆ ಸೇರಿದ, ಅವರೂ ಶಾಕಾಹಾರಿಗಳೇ. ಆ ದಂಪತಿಗಳಿಗೆ ಮದುವೆಯಾದ ಎಂಟು ವರ್ಷಗಳ ನಂತರ ಕುಲಪುತ್ರ ಹುಟ್ಟಿದ್ದ. "ನಮಗೆ ಮಕ್ಕಳೇ ಬೇಡ. ಯಾವ ರಾಜ್ಯಭಾರ ಮಾಡೋಕೆ ಉತ್ತರಾಧಿಕಾರಿ ಬೇಕಾಗಿದೆ?"ಎಂದು ಶರ್ಮ ಹೇಳಿದ್ದನಂತೆ. ಆದರೆ ಮಕ್ಕಳು ಹುಟ್ಟಿದ ಮೇಲೆ ಹಾಗೆನ್ನಿಸುವುದಿಲ್ಲ. ರಾಜ್ಯವಿರಲಿ, ಇಲ್ಲದಿರಲಿ. ಮಕ್ಕಳೇ ಒಂದು ಸಾಮ್ರಾಜ್ಯವಾಗಿ ಬಿಡುತ್ತಾರೆ ಅಲ್ಲವೆ? ಆ ಚೇಷ್ಟೆಯ ಮಗುವನ್ನು ಕಟ್ಟಿಕೊಂಡು, ಮಿಸೆಸ್ ಶರ್ಮ ರುಚಿಕರವಾದ ರಸಕವಳ ಬಡಿಸಿದ್ದಳು. ಆಗ್ರಾ ಕಡೆಯ ವಿಶಿಷ್ಟವಾದ ಮೆಣಸಿನಕಾಯಿಯ ಉಪ್ಪಿನಕಾಯಿ ಬಡಿಸಿದ್ದಳು. ಅದರ ರುಚಿಗೆ ಮಾರು ಹೋಗಿ, ನಾನು ಬಾಯಿಬಿಟ್ಟು, ಕೇಳಿ, ನನಗಾಗಿ ಸ್ವಲ್ಪ ಉಪ್ಪಿನಕಾಯಿ ಕೇಳಿ ಪಡೆದಿದ್ದೆ. ಮಸಾಲೆ ತುಂಬಿದ ವಿಧಾನವನ್ನು ಕೇಳಿ ತಿಳಿದುಕೊಂಡೆ.

ಮಿಶ್ರಾ ದಂಪತಿಗಳು ನಮಗಿಂತ ಮುಂಚೆಯೇ ವರ್ಗವಾಗಿ ಅವರು ಮತ್ತೆ ಬೊಂಬಾಯಿಗೆ ಹೊರಟು ಹೋಗಿದ್ದರು. ರಜದಲ್ಲಿ ತಂದೆಯ ಮನೆಗೆ ಹೋಗಿದ್ದ ಮಿಸೆಸ್ ಮಿಶ್ರಾ ವಾಪಸ್ಸು ಬಂದಿರಲೇ ಇಲ್ಲ. ಹಾಗಾಗಿ ನೌಕರಿಯ

ಅವಧಿಯಲ್ಲಿ ಹೀಗೆ ಅನ್‌ಪಾಪ್ಯೂಲರ್ ಸ್ಟೇಷನ್‌ಗೆ ವರ್ಗವಾಗುವ ಅವಕಾಶ ವಿರುತ್ತದೆ. ಹಾಗಾದುದರಿಂದಲೇ ನಮಗೆ ಗೌಹಾಟಿಯಲ್ಲಿ ನಾಲ್ಕು ವರ್ಷ ಗಳಿರುವ ಅವಕಾಶ ಸಿಕ್ಕಿದ್ದು. ಇಲ್ಲದಿದ್ದರೆ ಅಸ್ಸಾಂ ಕಡೆಗೆ ಹೋಗಿ ಬರುವ ಮಾತು ಬಹುಶಃ ಸಾಧ್ಯವಿಲ್ಲ. ಆದರೆ ಸುತ್ತಾಡಲು, ನೋಡಿಬರಲು ಇನ್ನು ಅನೇಕ ಸ್ಥಳಗಳಿವೆ. ನಾವು ಎಲ್ಲಾ ಕಡೆ ಸುತ್ತಾಡಲಿಲ್ಲ. ಈಗ ಖೇದವೆನಿಸುತ್ತದೆ.

ಒಮ್ಮೆ ಆ ಸ್ಥಳ ಬಿಟ್ಟರೆ ಆಯಿತು. ಮತ್ತೇ ನಾವು ಆ ದಿಕ್ಕಿಗೆ ಹೋಗಿ ಬರುವುದು ಸಾಧ್ಯವಲ್ಲ. ಷಿಲ್ಲಾಂಗ್‌ಗೆ ಮತ್ತೊಮ್ಮೆ ಹೋಗಿ ಬರುವ ಅವಕಾಶ ವಾಗಲೇ ಇಲ್ಲ.



ಸಾಮಾನುಗಳನ್ನು ಪ್ಯಾಕ್ ಮಾಡಿಸಿದ್ದಾಗಿತ್ತು. ಎರಡು ದೊಡ್ಡ ಮರದ ಪೆಟ್ಟಿಗೆಗಳಲ್ಲಿ ಹೆಚ್ಚು ಉಪಯುಕ್ತವಲ್ಲದ ಸಾಮಾನುಗಳನ್ನು ತುಂಬಿ, ರೈಲ್ವೇ ವ್ಯಾಗಲ್‌ನಲ್ಲಿ ಕಳಿಸಿದೆವು. ಸ್ಕೂಟರು, ಹೊಲಿಗೆಯಂತ್ರ, ಗ್ಯಾಸ್ ಸ್ಟೋವು, ಹಾಗೂ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ತುಂಬಿದ ಪೆಟ್ಟಿಗೆಯನ್ನು ಏರೋಪ್ಲೇನ್ ಮುಖಾಂತರ ಬೆಂಗಳೂರಿಗೆ ಕಳಿಸಿದೆವು. ನಾಲ್ಕು ದಿನಗಳೊಳಗೆ

ಈ ವಸ್ತುಗಳು ಬೆಂಗಳೂರಿನ ಏರ್‌ಪೋರ್ಟ್‌ನಲ್ಲಿ ಬಂದು ಇಳಿದಿದ್ದವು. ರೈಲಿನಲ್ಲಿ ಕಳಿಸಿದ್ದ ಮರದ ಪೆಟ್ಟಿಗೆಗಳು ಹದಿನೈದು ದಿನಗಳ ನಂತರ ಬೆಂಗಳೂರನ್ನು ತಲಪಿದವು. ಯಾವುದೇ ಒಂದೇ ಒಂದು ವಸ್ತು ಕೋಡಾ ಹೊರಟವು. ಡ್ಯಾಮೇಜ್ ಆಗಿರಲಿಲ್ಲ.

ನಾವು ಹಿಂದಿನಂತೆ ಗೌಹಾಟಿಯಿಂದ ಕಲ್ಕತ್ತಾಕ್ಕೆ ಪ್ಲೇನ್‌ನಲ್ಲಿ ನಮ್ಮ ಮಗಳಿಗಾಗ ಅರ್ಧ ಟಿಕೆಟ್. ಪ್ಲೇನ್ ಮೇಲೆ ಹತ್ತಿದ ಕೂಡಲೇ, ಹೆಧರಿ ಅಳಲು ಪ್ರಾರಂಭಿಸಿದಳು. ಒಂದು ಘಳಿಗೆ ಕೂರಲಿಲ್ಲ. ನಾನು ನನ್ನ ಸೀಟಿಗೆ ಬೆಲ್ಟ್ ಕಟ್ಟಿಕೊಳ್ಳಲು ಆಗಲೇ ಇಲ್ಲ. ಕಲ್ಕತ್ತಾದಲ್ಲಿ ಡಂ ಡಂ ಏರ್‌ಪೋರ್ಟ್‌ನಲ್ಲಿಳಿದು, ಸುರಕ್ಷಿತವಾಗಿ ಹೌರಾ ಸ್ಟೇಷನ್‌ಗೆ ತಲುಪಿದೆವು. ಹೌರಾ ಎಕ್ಸ್‌ಪ್ರೆಸ್ ಹತ್ತಿದೆವು. ಪಕ್ಕದ ಕಂಪಾರ್ಟ್‌ಮೆಂಟಲ್‌ನಲ್ಲಿದ್ದ ಹುಡುಗಿಯರು ಬಂದು ನನ್ನ ಮಗಳೊಡನೆ ಆಟವಾಡುತ ಇದ್ದರು. ಪ್ಲೇನ್‌ನಲ್ಲಿ ಅಳುತ್ತಿದ್ದವಳು ಈಗ ಆಟ ಆಡುತ್ತಿದ್ದಳು. ಆ ವಿಷಯ ಕೇಳಿದ ಹುಡುಗಿಯರು ಚುಡಾಯಿಸಿದರು. ಅರೇ ಬೇವಕೂಫ್, ಎರೋಪ್ಲೇನ್ ಮೇ ತುಝೆ ಕ್ಯಾ ಕಮೀ ಥೀ, ರೋನೇ ಕೇಲಿಯೇ.. ಅಂತ, ನಾಲ್ಕು ವರ್ಷ ಗೌಹಾತಿಯ್ಲ ಕಳೆದ ಅನುಭವಗಳನ್ನು ಮನದಲ್ಲಿ ತುಂಬಿಕೊಂಡಿದ್ದ ನನಗೆ ಎಲ್ಲಿಯೂ ಯಾವತ್ತು ಏನೂ ಕಮ್ಮಿ ಅನಿಸಿರಲಿಲ್ಲ. ಈಗ ಸುಮಾರು ಇಪ್ಪತ್ತು ವರ್ಷಗಳ ನಂತರ ಈ ಅನುಭವಗಳನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

○ ○ ○

ಅರುಣೋದಯದ ನಾಡಿನಲ್ಲಿ

ಪರಿಶಿಷ್ಟಗಳು

ನಾನು ಶಿವಮೊಗ್ಗಾದಲ್ಲಿ ಬೆಳೆದವಳು. ನನ್ನ ವಿದ್ಯಾಭ್ಯಾಸವೆಲ್ಲಾ ನಡೆದುದು ಅಲ್ಲೇ. ಮಲೆನಾಡಿನ ಕೇಂದ್ರವಾದ ನಮ್ಮೂರಿನಲ್ಲಿ ಕಾಡು ಮೇಡುಗಳಿಗೆ ಬರವಿಲ್ಲ. ಪ್ರಕೃತಿ ಸೊಗಸಾಗಿ ವಿರಾಜಿಸುತ್ತಿದ್ದಳು ಎಂದರೆ ಅತಿಶಯವಲ್ಲ. ಗೇರು ಸೊಪ್ಪೆಯ ಜೋಗ್ ಜಲಪಾತ, ಆಗುಂಬೆಯ ಸುರ್ಯ್ಯಾಸ್ತಮಾನ, ಗಾಜನೂರಿನ ಅಣೆಕಟ್ಟು, ಸಮೀಪದ ಕೂಡಲಿಯಲ್ಲಿನ ತುಂಗಭದ್ರ ಸಂಗಮ ಇವೆಲ್ಲಾ ನಮಗೆ ಅಪರೂಪವೇನಲ್ಲ. ಆದರೂ ಪ್ರತಿಸಲ ನೋಡುವಾಗಲೂ ಅದೇ ಹೊಸತನ, ಅದೇ ಸೊಬಗು..ಏನೋ ಮೈ ಮರೆಯುವ ಆನಂದ, ಬೆಸರವೆನಿಸುತ್ತಿರಲಿಲ್ಲ.

ಆದರೂ ಬೇಸಗೆಯ ಪ್ರಖರ ಸೆಕೆ, ಮಳೆಗಾಲದಲ್ಲಿ ಬಿಡದೇ ಸುರಿಯುವ, ಸೋನೆ ಮಳೆ, ಪ್ರತಿ ವರ್ಷವೂ, ಬೆಗ ಮುಗಿಯ ಬಾರದೇ ಎಂದು ಪ್ರಾರ್ಥಿಸುವಷ್ಟು ಬೇಸರವನ್ನುಂಟು ಮಾಡುತ್ತಿದ್ದವು. ಆದರೆ? ಬಿಸಿಲು ಶೆಕೆ. ಇಲ್ಲದೇ, ಮೋಡ ಮಳೆ ಇಲ್ಲ. ಮೋಡ ಮಳೆಗಳಿಲ್ಲದೇ ಬೆಳೆಯಿಲ್ಲ ಎಂದೂ ಗೊತ್ತಿತ್ತು. ಹಾಗಾಗಿ, ಈ ವಿಪರೀತಗಳನ್ನು ಸಹಿಸುವ ಶಕ್ತಿಯೂ ಇತ್ತು. ಆದರೂ ಈ ಮಲೆನಾಡನ್ನು ಬಿಟ್ಟು ಬಯಲು ಸೀಮೆಗೆ ಹೋಗಬೇಕು ಎಂದೆನಿಸುತ್ತಿತ್ತು ನನಗೆ.

ಸಾಹಿತ್ಯಾಭ್ಯಾಸದ ವಿದ್ಯಾರ್ಥಿನಿಯಾಗಿದ್ದ ನನಗೆ, ಅಲ್ಪಸ್ವಲ್ಪ ಭೂಗೋಳ ಶಾಸ್ತ್ರ, ಇತಿಹಾಸ ವಿಷಯಗಳ ಬಗ್ಗೆಯೂ ಓದುವಿದಿತ್ತು. ಸಮಗ್ರ ಭಾರತದ ಉದ್ದಗಲ ವಿಸ್ತೀರ್ಣದೊಂದಿಗೆ, ಸಮೃದ್ಧವಾಗಿದ್ದ ಪ್ರಕೃತಿ ಸೌಂದರ್ಯದ ವಿಷಯವೂ ತಿಳಿಯುವೆ ಆಗ, ಏನೋ ಒಂದು ಬಗೆಯ ಖುಷಿ ಯಾಗುತ್ತಿತ್ತು. ಆದರೆ ಎಲ್ಲಾ ಕಡೆ ಸುತ್ತಾಡಿ ಎಲ್ಲವನ್ನು ನೋಡಿ ಬರಲು ಸಾಧ್ಯವಿರಲಿಲ್ಲ. ಅದಕ್ಕೆ ಕಾರಣಗಳು ಅನೇಕ. ಹಾಗೇ ಇತಿಹಾಸದ ಗಣೆಯ

ಆಳಕ್ಕೆ ಇಳಿದು ಹೋದರೆ, ಸಿಗುವ ಖನಿಜಗಳು ಬಹಳ. ಅಳಿದ ರಾಜ ಮಹಾರಾಜರ ಸುಲ್ತಾನರ, ಸಾಮ್ರಾಜ್ಯಗಳ ವಿಷಯಗಳನ್ನು ಓದುವಾಗ, ಭಾರತ ದೇಶದಲ್ಲಿ ಇತಿಹಾಸ ವಿಶ್ವ ವಿಖ್ಯಾತ. ಆ ದೆಸೆಯಲ್ಲಿ ತಿರುಗಿ ನೋಡು ವಾಗ, ಉತ್ತರ ಭಾರತದಲ್ಲಿ ಅದರಲ್ಲೂ ಡೆಲ್ಲಿಯಲ್ಲಿ ಸಾಮ್ರಾಜ್ಯ ಶಾಹಿಗಳ ಆಳ್ವಿಕೆಯ ಕುರುಹಾಗಿ, ಕುತುಬ್ ಮೀನಾರ್, ಕೆಂಪು ಕೋಟೆ, ತಾಜಮಹಲ್ ಜಮ್ಮಾ ಮಸೀದಿ ಇತ್ಯಾದಿಗಳು ಏನೇನಲ್ಲಾ ತಿಳಿಸುತ್ತವೆ.

ನನಗೆ ವಿವಾಹವಾದಾಗ, ನನ್ನ ಪತಿ ಡೆಲ್ಲಿಯಲ್ಲಿ ವಾಸವಾಗಿದ್ದರು. ಎರಡು ಮೂರು ವರ್ಷಗಳಿಗೊಮ್ಮೆ ಬೇರೆ ಬೇರೆ ನಗರಗಳಿಗೆ ವರ್ಗವಾಗು ತ್ತಿದ್ದು. ಅವರು ಆಗಲೇ, ಪೂನಾ, ಬೊಂಬಾಯಿ, ಆಗ್ರಾಗಳಲ್ಲಿನ ಕಛೇರಿ ಯಲ್ಲಿ ಸೇವೆ ಸಲ್ಲಿಸಿ, ಡೆಲ್ಲಿಗೆ ವರ್ಗವಾಗಿ ಬಂದು ಎರಡು ವರ್ಷಗಳು ಕಳೆ ದಿತ್ತು.

ಶಿವಮೊಗ್ಗಾದಂತಹ ಊರಿನಿಂದ ಡೆಲ್ಲಿಗೆ ಹೋಗುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಸುಯೋಗ ಎಂದು ಕೊಂಡೆ. ಬೆಂಗಳೂರಿನಿಂದ ಹೊರಟು, ತಮಿಳ್ನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶ ರಾಜ್ಯ ಮುಖಾಂತರವಾಗಿ ಡೆಲ್ಲಿಯನ್ನು ಸೇರಿದೆವು. ಮದ್ರಾಸು ವಿಜಯವಾಡ, ಇಬಸಿ ನಾಗಪುರ ಮುಂತಾದ ಸ್ಥಳಗಳು, ಸಿಗುತ್ತವೆ.

ಆ ನಂತರ ನಾವು ಡೆಲ್ಲಿಯಲ್ಲಿ ಕೆಲವೇ ತಿಂಗಳು ಇದ್ದೆವು. ಅಲ್ಲಿಂದ ನಮ್ಮವರಿಗೆ ಗೌಹಾಟಿಗೆ ವರ್ಗವಾಯಿತು. ಗೌಹಾಟಿಗೆ ಹೊರಡುವ ಮುನ್ನ ಡೆಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ಆಗ್ರಾದ ವಿಶ್ವ ಪ್ರಸಿದ್ಧ ತಾಜಮಹಲನ್ನು ನೋಡಿ ಬಂದೆವು.

ನಂತರ ಜೂನ್ ತಿಂಗಳ ಮದ್ಯಭಾಗದಲ್ಲಿ ಒಂದು ದಿನ ನಮ್ಮ ಗಂಟು ಮೂಟೆ ಸಮೇತ, ನಾವಿಬ್ಬರೂ ಗೌಹಾಟಿಗೆ ಹೊರಟೆವು. ಆಗ ಡೆಲ್ಲಿ ಯಿಂದ ಸೀದಾ ಗೌಹಾಟಿಗೆ ಹೋಗುವ ಮಾರ್ಗ ಪೂರ್ತಿ ಬ್ರಾಡ್ ಗೇಜ್ ಆಗಿರಲಿಲ್ಲ. ಬರೌನಿ ಎಂಬ ಜಂಕ್ಷನ್ ಸ್ಟೇಷನ್‌ನಲ್ಲಿ ಅದೇ ಪ್ಲಾಟ್‌ಫಾರಂ ನಲ್ಲಿ ಮೀಟರ್ ಗೇಜ್‌ನ ರೈಲಿಗೆ ಹತ್ತಬೇಕಾಗುತ್ತಿತ್ತು.

ಜೂನ್ ತಿಂಗಳು ಅತೀ ಸೆಕೆಯ ಕಾಲ. ಅದರಲ್ಲೂ ಉತ್ತರಭಾರತ

ದವರು ಅವಭನಿಸುವಾಗಲೇ ಅದರ ಪ್ರಖರತೆ ತಿಳಿಯುವುದು. ಅಲ್ಲಿಯ ವಾಸಿಗಳು ಹೇಗೆ ಜೀವಿಸುತ್ತಾರೋ ಅಂತ ಅನ್ನಿಸುವುದೂ ಉಂಟು. ಬೆಳಗಿನ ಏಳು ಗಂಟೆಯ ಸಮಯದಲ್ಲಿ ಬರೌನಿ ರೈಲ್ವೇ ನಿಲ್ದಾಣದಲ್ಲಿ ನಿಂತಿದ್ದ ಗೌಹಾಟಿಗೆ ಹೋಗುವ ರೈಲಿನ ಕೂಪೆಯಲ್ಲಿ ಕುಳಿತಿದ್ದ ನಮಗೆ ಬೇಸಗೆಯ ತಾಪದಿಂದ ಚಡಪಡಿಕೆ. ಸ್ನಾನ ಮಾಡಿ ಬಂದಂತೆ ಮೈಯೆಲ್ಲಾ ತೊಯ್ದು ಹೋಗಿದ್ದರೂ, ಬಿಸಿಲಿನ ಗುಳ್ಳೆಯಿಂದ ಕಡಿತ, ಹಿಂಸೆ ರೈಲು ಹೊರಟರೆ ಸಾಕು ಎನಿಸಿತ್ತು.

ಗಂಗಾನದಿಯ ದಡದ ಮೇಲೆ ಉಪಸ್ಥಿತವಾಗಿರುವ ನಗರ ಅಲಹಾಬಾದ್. ಸ್ವತಂತ್ರ ಭಾರತದ ಮೊಟ್ಟ ಮೊದಲ ಪ್ರಧಾನಿ ಜವಾಹರಲಾಲರವರು ಅಲಹಾಬಾದಿನವರು, ಗಂಗಾನದಿಗೆ ಕಟ್ಟಿರುವ ಸೇತುವೆಯ ಮೇಲೆ ರೈಲು ಹಾದು ಹೋಗುವಾಗ, ರಾತ್ರಿಯ ಸಮಯವಾಗಿತ್ತು. ಹಾಗಾಗಿ ಸರಿಯಾಗಿ ನದಿಯನ್ನು ನೋಡಲಾಗಲಿಲ್ಲ. ಆದರೂ ಫಳ ಫಳನೆ ಹೊಳೆಯುವ ನೀರಿನ ಅಲೆಗಳು ನದಿಯ ಅಪಾರತೆಯನ್ನು ಸಾರಿದವು. ನದೀ ದೇವತೆಯನ್ನು ಪೂಜಿಸುವವರು ನಾವು ಅದರಲ್ಲೂ ಗಂಗೆಗೆ ಇರುವ ವಿಶಿಷ್ಟ ಸ್ಥಾನ ಎಲ್ಲರಿಗೂ ತಿಳಿದದ್ದೇ. ಗಂಗಾ ಸ್ನಾನ, ತುಂಗಾಪಾನ ಅನ್ನೋ ವೇದ ವಾಕ್ಯವೇ ಇದೆ. ಅನೇಕ ವರ್ಷ ತುಂಗಾ ಪಾನ ಮಾಡಿದಳು ನಾನು. ಆದರೂ, ಗಂಗಾಸ್ನಾನ ಮಾಡುವ ಯೋಗವಿರಲಿಲ್ಲ. ಗಂಗಾ ಮಾತೆಗೆ ಕಾಸನ್ನು ಕಾಣಿಕೆಯಾಗಿ (ನದಿಗೆ ಕಾಸನ್ನು ಹಾಕುವುದು ಒಂದು ಹಿಂದೂ ಸಂಪ್ರದಾಯ) ಹಾಕಿ, ಕೈ ಮುಗಿದು ಪ್ರಾರ್ಥಿಸಿದೆ. ಗಂಗಾನದಿ ಸಿಗುತ್ತದೆ ಎನ್ನುವ ಉತ್ಸಾಹದಿಂದ ಎಚ್ಚರದಿಂದಿದ್ದು ಕಣ್ಣಾರೆ ಕತ್ತಲೆಯಲ್ಲಿ ಕಾಣುವ ಸೌಭಾಗ್ಯ ಪಡೆದೆ.

ಸುಮಾರು ಮೂವತ್ತಾರು ಘಂಟೆಗಳ ಪ್ರಯಾಣದ ನಂತರ, ನಾವು ಗೌಹಾಟಿಯನ್ನು ತಲುಪಿದೆವು. ಗೌಹಾಟಿಯ ರೈಲು ನಿಲ್ದಾಣ, ಡೆಲ್ಲಿಯ ರೈಲ್ವೇ ನಿಲ್ದಾಣಕ್ಕೆ ಹೋಲಿಸಿದರೆ, ಏನೇನೂ ಇಲ್ಲ ಚಿಕ್ಕದು. ಹೆಚ್ಚು ಕಡಿಮೆ ಶಿವಮೊಗ್ಗದ ರೈಲ್ವೇ ನಿಲ್ದಾಣದ ತರಹವೇ.

ಗೌಹಾಟಿಯಲ್ಲಿ ನಾವು ಹೋಗಬೇಕಾಗಿದ್ದುದು ರೈಲ್ವೇ ಸ್ಟೇಷನ್‌ನಿಂದ ಸುಮಾರು ಇಪ್ಪತ್ತೈದು ಕಿಲೋ ಮೀಟರ್ ದೂರದಲ್ಲಿ, ಟ್ಯಾಕ್ಸಿ ಮಾಡಿಕೊಂಡು, ಬೋಚಾನರ್ ಏರ್‌ಪೋರ್ಟ್‌ನ್ನು ತಲುಪಿದೆವು.

ನಮಗೆ ವಾಸವಾಗಿರಲು ಕೊಟ್ಟಿದ್ದ ಕ್ವಾರ್ಟರ್ಸ್‌ನಲ್ಲಿ ಸಹೋದ್ಯೋಗಿ ಮಿಶ್ರಾ ಇದ್ದರು. ಅವರು ಮೂಲತಃ ಬೆಂಗಾಲಿಗಳು. ಮಾಲ್ಡಾ ಪಶ್ಚಿಮ ಬಂಗಾಳದ ಒಂದು ಊರು.ಅದು ಬಾಂಗ್ಲಾದೇಶದ ಬಾರ್ಡರ್. ಮಿಶ್ರಾದಂಪತಿಗಳು ತಮ್ಮ ಇಬ್ಬರು ಮಕ್ಕಳೊಂದಿಗೆ ಬೊಂಬಾಯಿನಿಂದ ವರ್ಗವಾಗಿ ಗೌಹಾಟಿಗೆ ಬಂದಿದ್ದರು. ನಮ್ಮವರು ಬೊಂಬೈಯಿನಲ್ಲಿದ್ದಾಗ ಅವರ ಪರಿಚಯವಿದ್ದುದರಿಂದ ನಮಗೆ ಮುಜುಗರವೆನಿಸಲಿಲ್ಲ.

ಟೈಪ್ ೫ನ ಕ್ವಾರ್ಟರ್ಸ್ ವಿಶಾಲವಾದ ಮನೆ. ದೊಡ್ಡ ದೊಡ್ಡ ರೂಮುಗಳು ಅನುಕೂಲವಾಗಿತ್ತು. ಆ ರಾತ್ರಿ ನಮಗೆ ಅವರಲ್ಲೇ ಆತಿಥ್ಯ. ಮಿಸೆಸ್ ಚಂದನಾ ಮಿಶ್ರಾ ಕೆಲವೇ ಗಂಟೆಗಳಲ್ಲಿ ನನಗೆ ಆತ್ಮೀಯಳಾದಳು. ಮಾತನಾಡಲು ಹಿಂದಿ ಇಂಗ್ಲೀಷ್ ಭಾಷೆ ಗೊತ್ತಿದ್ದುದರಿಂದ ಯಾವುದೂ ಕಷ್ಟವೆನಿಸಲಿಲ್ಲ. ಆ ರಾತ್ರಿ ಕಳೆಯಿತು.

ಸ್ವಲ್ಪ ಎತ್ತರದಲ್ಲಿ ಕಟ್ಟಲಾಗಿದ್ದ ನಮ್ಮ ಮನೆಯ ಮುಂಬಾಗಿಲಿಗೆ ಸುಮಾರು ಆರು ಮೆಟ್ಟಿಲುಗಳು. ಒಟ್ಟಿಗೇ ನಾಲ್ಕು ಜನರು ಒಳಗೆ ಹೋಗುವಂತಹ ವಿಶಾಲವಾದ ಬಾಗಿಲು. ದೊಡ್ಡ ಕಾರಿಡಾರ್, ವಿಶಾಲವಾದ ಡ್ರಾಯಿಂಗ್‌ರೂಂ, ದೊಡ್ಡ ದೊಡ್ಡ ಮಲಗುವ ಕೋಣೆ, ಅಡಿಗೆ ಮನೆ, ಸ್ಟೋರ್ ರೂಂ, ಪ್ಯಾಂಟ್ರಿ, ಹಿಂದಿನ ದೊಡ್ಡ ಅರಗಳ ಮೆಟ್ಟಿಲಿಳಿದು ಕೆಳಗೆ ಹೊದರೆ, ಸಣ್ಣ ಕೈ ತೋಟ. ಆದಕ್ಕೆ ಜಿಂಕ್‌ಸೀಟ್‌ನ ಬೇಲಿಯನ್ನು ಹಾಕಿದ್ದರು. ಒಂದು ಮೂಲೆಯಲ್ಲಿದ್ದ ದೊಡ್ಡ ಹಲಸಿನ ಮರದಲ್ಲಿ ತೂಗಾಡುತ್ತಿದ್ದ ಹಲಸಿನ ಕಾಯಿ, ಹಣ್ಣುಗಳು ನಮ್ಮ ಬಾಯಲ್ಲಿ ನೀರೂರಿಸಿದವು. (ಹಲಸಿನ ಕಾಯಿವ್ಯಂಜನ)

3. ಹಸಿರು ಹುಲ್ಲುಗಳ ಮಧ್ಯೆ ಹಾಮೂಖ್

ಅಸ್ಸಾಮಿನ ಪ್ರಕೃತಿಯನ್ನು ವರ್ಣಿಸುವಾಗ, ನಾಲ್ಕಾರು ನುಡಿಗಳ ಕವನವನ್ನು ಬರೆಯೋಣ ಎನಿಸುತ್ತದೆ.

೧. ಹತ್ತು ಹಲವು ಬೆಟ್ಟಗಳ ದಟ್ಟ ಕಾಡಿನ
ತೇಗ ದೇವದಾರು ಗಂಧದ ಸಿರಿವನ
ಉಯ್ಯಾಲೆ ತೂಗುತ ಬೀಸಿವೆ ಚಾಮರ
ಹೊಮ್ಮಿದೆ ಮಂದಾರ ಪರಿಮಳ ಮಧುರ.

೨. ಬಗೆಬಗೆ ಬಣ್ಣದ ಹೂಗಳ ರಾಶಿ
ರಂಗು ಚಿತ್ತಾರದ ಹಾಸನು ಹಾಸಿ
ಬೀರುತ ಸುಗಂಧ ಸುಮಧುರ ರಾಶಿ
ಉದುರಿವೆ ಭೂ ದೇವಿಯ ಪಾದಕೆ ನಮಿಸಿ.

೩. ನೋಡದೋ ಪಕ್ಕಿಗಳ ಗುಂಪೋ ಗುಂಪು
ಚಿಲಿಪಿಲಿ ಗುಟ್ಟುವ ನಿನಾದವು ಇಂಪು
ಹಾಡುವ ಸ್ವರಗಳ ಗೀತೆಯ ಸೊಂಪು
ಮಾತೆಯ ಮನಕೆ ನೀಡಿವೆ ತಂಪು

೪. ತೆಂಗು ಬಾಳೆ ಕಿತ್ತಳೆ ಮಾವು
ರುಚಿಕರ ಹಣ್ಣುಗಳ ಸೊಗಸಾದ ಮೇವು
ಅಡಿಕೆಲೆಯೊಂದಿಗೆ ನಿತ್ಯ ಸಮರ್ಪಣೆ
ಸಂತೃಪ್ತಿ ಗೊಂಡಳು ದೇವಿ ಅಪರ್ಣೆ

೫. ಕಬ್ಬು ಭತ್ತ ಕಾಳು ಡೋಳ
ತುಂಬಿದ ತೆನೆಗಳು ಓಲೈಸಿವೆ ಮೇಳ
ಸೊಯ್ಯೆಂದು ಹಾಡಿವೆ ಜೋಗುಳ ರಾಗ
ಲಾಲಿಯ ಆಲಿಸಿ ಮೈ ಮರೆತಳಾಗ

೬. ಚಿನ್ನದರನ್ನದ ಮುತ್ತು ಮಾಣಿಕ್ಯದ
ವಜ್ರ ವೈಡೂರ್ಯ ಪಚ್ಚೆ ಹವಳದ
ಬಿಡಿಸಿದ ಸೊಗಸಿನ ಸುತ್ತು ರಂಗೋಲಿ
ಬೀರಲು ಹೊಳೆಯುವ ಕಾಂತಿಯ ಚೆಲ್ಲಿ

೭. ಮೃಗಗಳು ಜಿಗಿದಿವೆ ಎಲ್ಲೆಂದರಲ್ಲಿ
ಅವುಗಳಿಗೇನೂ ಭಯವಿಲ್ಲ ಇಲ್ಲಿ
ಹುಲಿ ಸಿಂಹ ಘರ್ಜಿಸೆ ವೇದದ ಘೋಷ
ಆನೆಯು ಘೀಳಿಡೆ ಮಂತ್ರ ಪ್ರವೇಶ

೮. ಹಸಿರನು ಉಟ್ಟ ಸೊಬಗಿನ ಪ್ರಕೃತಿ
ನಲಿಯುತ ಎತ್ತಲು ಮಂಗಳದ ಆರತಿ
ಭಾರತಿ ದೇವಿಯು ಸಂತುಷ್ಟ ಗೊಂಡಳು
ಪ್ರತಿದಿನ ಇವರನು ಹರಸುತ ಇಹಳು.

ಇಂಥ ಸಮೃದ್ಧವಾದ ಸಿರಿನಾಡು ಅಸ್ಸಾಂ ನಿಸರ್ಗ ದೇವತೆಯು ಸ್ವತಃ ತಾನೇ ನಿಂತು ಶೋಡಶೋಪಚಾರಗಳಿಂದ ಭಾರತ ಮಾತೆಗೆ ಪ್ರತಿನಿತ್ಯ ಪೂಜೆ ಸಲ್ಲಿಸುತಿಹಳು ಎಂದರೆ ಅತಿಶಯೋಕ್ತಿ ಅಲ್ಲ.

೩. ಹಲಸಿನ ಕಾಯಿ ವ್ಯಂಜನ

ಹಲಸಿನ ಕಾಯಿಯಲ್ಲಿ ವ್ಯಂಜನ ಮಾಡುವುದು ಸುಲಭದ ಕೆಲಸ ವಲ್ಲ. ಮೊದಲು. ಮುಳ್ಳು ಮುಳ್ಳಿನ ಸಿಪ್ಪೆಯನ್ನು ದಪ್ಪವಾಗಿ ತೆಗೆಯಬೇಕು. ಹಲಸಿನ ಕಾಯಿಯನ್ನು ಹೆಚ್ಚುವಾಗ ಎಣ್ಣೆಯನ್ನು ಬಳಸಬೇಕು. ಕೈಗೆ, ಚಾಕು ಅಥವಾ ಈಳಿಗೆ ಮಣೆಯ ಅಲುಗಿಗೆ ಎಣ್ಣೆ ಹಚ್ಚದಿದ್ದರೆ, ಹಲಸಿನ ಅಂಟು ಮೆತ್ತಿಕೊಳ್ಳುತ್ತದೆ. ಒಟ್ಟಿನಲ್ಲಿ ಕೆಲಸವಂತೂ ಕೀಚಿಗೆ. ನನಗೆ ತಿಳಿದ ಮಟ್ಟಿಗೆ ಹಲಸಿನ ಕಾಯಿಯಲ್ಲಿ ಹುಳಿ, ಬಜ್ಜಿ, ಹಪ್ಪಳ ಮಾಡುತ್ತಾರೆ. ಬಿಡಿಸಿದ ಹಣ್ಣಿನ ತೊಳೆಯನ್ನು ಉಪಯೋಗಿಸಿ ಸಿಹಿ ದೋಸೆ, ಪಾಯಸ, ಹಾಗೂ ಮುಳಕ

ಎಂಬ ಸಿಹಿ ತಿಂಡಿಯನ್ನು ತಯಾರಿಸುತ್ತಾರೆ. ಆದರೆ ನನಗೆ ಹಲಸಿನ ಕಾಯಿಯ ಪಲ್ಯ ಮಾಡಿ ತಿಳಿಯದು. ಅದೂ ಹಲಸಿನ ಕಾಯನ್ನು ತುರಿಯುವ ಮಣೆಯಲ್ಲಿ ತುರಿದು.

"ಅಮ್ಮನಿಗೆ ಕಾಗದ ಬರೆದು, ಹೇಗೆ ಮಾಡ್ತಾರೆ ಅಂತ ಕೇಳಿ ತಿಳಿದುಕೋ.. ಇವತ್ತೇ ಕಾಗದ ಬರಿ." ನಮ್ಮವರ ಅಪ್ಪಣೆ. ಆ ಕ್ಷಣವೇ ಕಾಗದ ಬರೆದು ಕೊಟ್ಟೆ. ಇವರು ಪೋಸ್ಟ್ ಮಾಡಲೆಂದು ತೆಗೆದುಕೊಂಡು ಹೋದರು. ಪೋಸ್ಟ್ ಆಫೀಸ್ ಇದ್ದುದೂ, ಏರ್‌ಪೋರ್ಟಿನಲ್ಲೇ.. ನಾನೇ ಬರೆದ ಕಾಗದಗಳನ್ನು ನಾನೇ ಹೋಗಿ ಪೋಸ್ಟ್ ಮಾಡುವಂತಿಲ್ಲ. ನಾನು ಯಾರಿಗೆ ಕಾಗದ ಬರೆದರೂ. ಇವರಿಗೆ ತಿಳಿಯದೇ ಇರುವಂತಿಲ್ಲ. ನನಗೆ ಸ್ವತಂತ್ರವಿಲ್ಲ. ಅಲ್ಲಿಯ ಸ್ಥಳದ, ಅಕ್ಕಪಕ್ಕದವರ, ಊರಿನ, ಇನ್ನಿತರ ಯಾವುದೇ ವಿಚಾರಗಳನ್ನು ನನ್ನ ತಂದೆಯ ಮನೆಯವರಿಗೆ ಬರೆದರೆ ಇವರಿಗೆ ನಗು. ಯಾರಾದರೂ ಇದನ್ನೆಲ್ಲಾ ಬರೀತಾರಾ? ಇಷ್ಟನ್ನೆಲ್ಲಾ ಯಾರು ಓದ್ತಾರೆ ಅಂತ ತಮಾಷೆ ಮಾಡುತ್ತಿದ್ದರು. ನನಗನ್ನಿಸಿದ್ದನ್ನು ನಾನು ನನ್ನ ಮನೆಯವರಿಗೆ ತಿಳಿಸಿ ಬರೆಯುವಂತಿಲ್ಲ. ಬರೇ ಕ್ಷೇಮ ಸಮಾಚಾರಕ್ಕೆ ಕಾಗದ ಬರೆದರೂ, ಅದು ಪೋಸ್ಟ್ ಮಾಡಿದ ಐದನೇ ದಿನ ಶಿವಮೊಗ್ಗಾ ಸೇರುತ್ತಿತ್ತು. ಮನವೆಲ್ಲಾ ನಮ್ಮ ಮನೆಯಲ್ಲಿದ್ದರೂ ಒಬ್ಬರ ಕ್ಷೇಮ ಸಮಾಚಾರ, ಇನ್ನೊಬ್ಬರಿಗೆ ತಿಳಿಯಲು ಐದು ಆರು ದಿನಗಳು.

೪. ಅಸ್ಸಾಂ ಪ್ರದೇಶಕ್ಕೇ ಅತ್ಯಂತ ಹಿರಿಮೆಯನ್ನು ತಂದು ಕೊಡುವುದು ಬ್ರಹ್ಮಪುತ್ರಾ ನದಿ. ತುಂಬಿ ಹರಿಯುವ ನದಿ. ಪ್ರತಿ ವರ್ಷವೂ ಹೆಚ್ಚು ಕಡಿಮೆ ಪ್ರವಾಹವೇ. ಅಲ್ಲಿಯವರಿಗೆ ನೀರಿನ ಕೊರತೆ ಎನ್ನುವುದೇ ಇಲ್ಲ.

ತುಂಗೆಯಾಗಿ, ಪಾವನ ಗಂಗೆಯಾಗಿ
ತೋಗಪಾವನಿ ಮಾತೆ ಕಾವೇರಿಯಾಗಿ
ಮಹಾನದಿಯಾಗಿ ಗೋದಾವರಿಯಾಗಿ
ಭರತಖಂಡದ ನದಿಯೆಲ್ಲಾ ಒಟ್ಟಾಗಿ

ಸಾಗರದೋಪಾದಿ ಇಲ್ಲಿ ಒಂದಾಗಿ
ಹರಿಯುತಿಹಳು ಬ್ರಹ್ಮಪುತ್ರೆಯಾಗಿ

ಹೀಗೆ ವೈಭವಿಕರಿಸಬಹುದು ಬ್ರಹ್ಮಪುತ್ರಾ ನದಿಯನ್ನು ಒಂದು ದಡದಲ್ಲಿ ನಿಂತು ನೋಡಿದರೆ ಇನ್ನೊಂದು ದಡ ಆಕಾಶದ ಅಂಚಿನಲ್ಲಿ ಲೀನವಾಗಿ ಹೋಗಿರುತ್ತದೆ. ಬ್ರಹ್ಮಪುತ್ರಾ ಭಾರತ ದೇಶದ ದೊಡ್ಡ ನದಿಗಳಲ್ಲಿ ಒಂದು. ಅಸ್ಸಾಮಿನ ನಿವಾಸಿಗಳಿಗೆ ಅವಳೇ ಜೀವಾಧಾರ. ರೈತರಿಗೆ ಜೀವನದಿ, ಮೀನು ಹಿಡಿಯುವವರಿಗೆ ಜೀವದಾತೆ. ಮಳೆಗಾಲದಲ್ಲಿ ಅದರಲ್ಲೂ ಪ್ರವಾಹದಿಂದ ತುಂಬಿ ಹರಿಯುವಾಗ ನದಿಯ ಉದ್ದ ಅಗಲ ಇಡೀ ಅಸ್ಸಾಂನ್ನೇ ಆವರಿಸಿರುತ್ತದೆ ಎಂದರೆ ಉತ್ಪ್ರೇಕ್ಷೆಯಲ್ಲ.

ನದೀ ಹರಿಯುತ್ತಿದ್ದುದು, ನಾವಿರುವ ಸ್ಥಳದಿಂದ ಸುಮಾರು ಹತ್ತು ಕಿಲೋ ಮೀಟರ್ ದೂರದಲ್ಲಿದ್ದರೂ, ಪ್ರವಾಹ ಬಂದಾಗ, ಇಲ್ಲಿಯ ಕೆಳ ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಬಿಡುತ್ತಿತ್ತು. ಎಷ್ಟೋ ಸಲ ನದಿಯ ನೀರಿನ ಜೋತೆಗೆ ಸಣ್ಣ ಪುಟ್ಟ ಪ್ರಾಣಿಗಳೂ ತೇಲಿ ಬರುತ್ತಿದ್ದುದು ಉಂಟು. ತೇಲಿ ಬಂದ ಹಾವುಗಳು ಪ್ರವಾಪ ಇಳಿದ ಮೇಲೂ ಅಲ್ಲಲ್ಲಿ ಕಂಡು ಬರುತ್ತಿದ್ದವು.

ಹಾವು ನನಗೆ ಅಪರೂಪವೇನಲ್ಲ. ಆದರೂ ಹಾವೆಂದರೆ ಭಯ ಶಿವಮೊಗ್ಗದಲ್ಲಿ ನಾನು ಅನೇಕ ತರಹದ ಹಾವುಗಳನ್ನು ನೋಡಿದ್ದರೂ, ಇಲ್ಲಿ ಅವುಗಳನ್ನೂ ಕಂಡಾಗ ಏನೋ ಹೆದರಿಕೆ. ಒಳಗೆಲ್ಲಿ ಬಂದು ಬಿಡುತ್ತವೋ...? ಕಾಲಿಗೆ ಎಲ್ಲಿ ಸುತ್ತಿಕೊಳುತ್ತವೋ.. ಎಂಬ ಆತಂಕ ಸದಾ ಇದ್ದೇ ಇರುತ್ತಿತ್ತು. ಒಮ್ಮೆ, ಹಿಂಭಾಗದಲ್ಲಿದ್ದ ಕೈ ತೋಟದಲ್ಲಿ, ಕಿರುಚಿಕೊಂಡು ಕುಪ್ಪಳಿಸುತ್ತಾ ಬರುತ್ತಿದ್ದ ಕಪ್ಪೆಯೊಂದನ್ನು ಅಟ್ಟಿಸಿಕೊಂಡು ಬಂದ ದೊಡ್ಡ ಹಾವೊಂದು ನುಂಗಿದುದನ್ನು ಕಣ್ಣಾರೆ ಕಂಡ ನನಗೆ ಸದಾ ಕಣ್ಣ ಮುಂದೆ ಅದೇ ದೃಶ್ಯ ಹಾಗಾಗಿ, ಕತ್ತಲಾಗುತ್ತಿದ್ದಂತೇ ಮನೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಿ, ಮುಂಬಾಗಿಲಿನಲ್ಲಿ, ನನ್ನ ಕಾಲಿನ ಬಳಿ ಒಂದು ಹಚ್ಚಿದ ಟಾರ್ಚನ್ನು ಇಟ್ಟುಕೊಂಡು ಕೂತಿರುತ್ತಿದ್ದೆ. ಬೆಳಕಿದ್ದರೆ ಕಾಲ ಬಳಿ ಬರುವುದಿಲ್ಲ ಅನ್ನೋ ಧೈರ್ಯ.

೫. ಅಸ್ಸಾಮಿ ಭಾಷೆ.

ಬುಡಕಟ್ಟು ಜನಾಂಗಕ್ಕೆ ಸೇರಿದ ಅಸ್ಸಾಮಿಗಳಲ್ಲಿ ಅನಕ್ಷರತೆ ಹೆಚ್ಚು. ಸರಕಾರದವರು, ವಿದ್ಯಾಭ್ಯಾಸಕ್ಕಾಗಿ ಎಲ್ಲಾ ಸೌಲಭ್ಯ ಸವಲತ್ತುಗಳನ್ನು ಒದಗಿಸಿಕೊಟ್ಟರೂ, ಎಲ್ಲಾ ಕಡೆಯ ಹಳ್ಳಿಯ ಮಕ್ಕಳಂತೆ, ಅಲ್ಲಿಯ ಮಕ್ಕಳಿಗೂ ಸ್ಕೂಲಿಗೆ ಹೋಗಲು ಸೋಮಾರಿತನ. ಆದರೂ, ನಾವೂ ಪರಾವಲಂಬಿಗಳಾಗಿರದೇ ನಮ್ಮನ್ನು ನಾನೇ ಸುಧಾರಿಸಿಕೊಳ್ಳಬೇಕು ಎಂಬ ಅರಿವು ಮೂಡುತ್ತಾ ಅವರೂ ಎಚ್ಚೆತ್ತು ಕೊಳ್ಳುತ್ತಿರುವುದೂ, ಅವರ ಮಾತುಕತೆಗಳಲ್ಲಿ ಕಂಡುಬರುತ್ತದೆ. ಆದರೂ, ಯಾವುದೇ ಸಾಮಾಜಿಕ ಬದಲಾವಣೆ ಬರಬೇಕಾದರೆ, ಸಾಕಷ್ಟು ಸಮಯ ಬೇಕಾಗುತ್ತದೆ ಅಲ್ಲವೇ?

ಅಸ್ಸಾಮಿಯ ಆಡು ಮಾತಿನಲ್ಲಿ ನಾವು ಸಂಸ್ಕೃತ ಜ್ಞಾನವನ್ನು ಹಿಂದಿನಿಂದ ಅರಿತವರು ಎಂದು ತಿಳಿಸುವ ದ್ಯೋತಕವಾಗಿ, ಪ್ರಾಗ್ಜ್ಯೋತಿಷಪುರವೆಂಬ ನಾಮ ಫಲಕ ನಿಂತಿಸುವುದೇ ಸಾಕ್ಷಿ, ಕಾಳಿದಾಸನ ಕಾವ್ಯಗಳಲ್ಲಿ ಪ್ರಾಗ್ಜ್ಯೋತಿಷ್ಯಪುರದ ಉಲ್ಲೇಖವಿದೆ. ಅಂದರೆ ಅಲ್ಲಿಗೆ, ಅಸ್ಸಾಮಿನ ಇತಿಹಾಸ ಅತಿ ಪುರಾತನವಾದುದು ಎಂದು ತಿಳಿದು ಬರುತ್ತದೆ.

ಅತಿ ಹಿಂದೆ ಮಂಗೋಲಿಯನ್ನರು ಅಸ್ಸಾಂ ರಾಜ್ಯವನ್ನು ಆಳುತ್ತಿದ್ದರು ಎಂದು ಇತಿಹಾಸ ಹೇಳುತ್ತದೆ. ಇಲ್ಲಿಯ ಜನಾಂಗ ಮಂಗೋಲಿಯನ್ನರ ಬುಡಕಟ್ಟನ್ನು ಹೋಲುತ್ತಾರೆ. ಅತೀ ಎತ್ತರವಲ್ಲದ ಶರೀರ, ದೊಡ್ಡ ಹಣೆ, ಸಣ್ಣ ಸಣ್ಣ ಕಣ್ಣುಗಳು ಚಪ್ಪಟೆ ಮೂಗು, ಸಾಮಾನ್ಯವಾಗಿ ಅಸ್ಸಾಮಿ ಜನಗಳ ಮುಖ್ಯ ಲಕ್ಷಣಗಳು.

೬. ಅಸ್ಸಾಮಿನ ಭೌಗೋಳಿಕ ಲಕ್ಷಣಗಳು

೭. ಬ್ರಹ್ಮ ಪುತ್ರಾನದಿ.

ಭಾರತದ ಕೆಲವು ನದಿಗಳು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತವೆ. ಅದರಲ್ಲಿ, ಬ್ರಹ್ಮಪುತ್ರಾ ನದಿಯೂ ಮುಖ್ಯವಾದುದು. ಟಿಬೆಟ್‌ನ ಸಾಂಗ್ ಪೂನಲ್ಲಿ ಹುಟ್ಟಿ, ಪೂರ್ವದಿಂದ ಪಶ್ಚಿಮಕ್ಕೆ ಹರಿದು ಬಂದು, ಅಸ್ಸಾಂ ಕಣಿವೆಗಳಲ್ಲಿ ಹರಿದು ಬಾಂಗ್ಲಾದೇಶಕ್ಕೆ ಸೇರುತ್ತದೆ. ನಂತರ ಕಡೆಯಲ್ಲಿ

ಬಂಗಾಳಕೊಲ್ಲಿಯನ್ನು ಸೇರುತ್ತದೆ.

೧೯೫೦ರಲ್ಲಿ ಅಸ್ಸಾಂ ಭೂಬಾಗವನ್ನೆಲ್ಲಾ ಅಲ್ಲೋಲ ಕಲ್ಲೋಲ ಮಾಡಿದ ಪ್ರಸಿದ್ದ ಭೂಕಂಪ, ಬ್ರಹ್ಮಪುತ್ರಾ ನದಿಯ ಪಾತ್ರವನ್ನೇ ಬದಲು ಮಾಡುವಷ್ಟು ತೀವ್ರವಾಗಿತ್ತು ಎಂದು ಭೂಕಂಪ ಶಾಸ್ತ್ರಜ್ಞರು ತಿಳಿಸಿದ್ದಾರೆ. ಅಸ್ಸಾಂ ಪ್ರದೇಶಗಳಲ್ಲಿ ಭೂಕಂಪನ ಸರ್ವೆಸಾಮಾನ್ಯ ಇದ್ದಕ್ಕಿದ್ದಂತೆ ಬೆಳಗಿನ ಝಾವದಲ್ಲಿ ಕಿಟಕಿ ಬಾಗಿಲುಗಳು ಶಬ್ದದೊಂದಿಗೆ ತಾಯ್ಯಾಡ ತೊಡಗಿದಾಗ ನಾವುಗಳು ಹೆದರಿ ಮನೆಯಿಂದ ಹೊರಗೆ ಬಂದಿದ್ದೆವು. ಸಣ್ಣ ಪುಟ್ಟ ಕಂಪನಗಳು ಜರುಗುತ್ತಲೇ ಇದ್ದವು.

ತೇಜ್ ಪುಲ್ ಬಳಿಯ ಮಜೂಲಿ ಎಂಬ ಸ್ಥಳದಲ್ಲಿ ಬ್ರಹ್ಮಪುತ್ರಾ ನದಿಯ ಒಂದು island (ದ್ವೀಪವಿದೆ)ಇದೆ. ಇದು ವಿಶ್ವದಲ್ಲೇ ಹೆಸರು ಮಾಡಿರುವ ದ್ವೀಪ.

ಗೌಹಾಟಿಯನ್ನು ಬೇರೆ ಬೇರೆ ಪ್ರಾಂತಗಳಿಂದ ತಲುಪಲು ಅನುಕೂಲ ವಾಗುವಂತೆ, ಬ್ರಹ್ಮಪುತ್ರಾ ನದಿಗೆ ಒಂದು ದೊಡ್ಡ ಸೇತುವೆ, ಬೋರ್ಜಾರ್ ಏರ್‌ಪೋರ್ಟ್‌ಗೆ ಸಮೀಪದಲ್ಲಿತ್ತು.

ಬ್ರಹ್ಮ ಪುತ್ರಾ ನದಿಗೆ ಪ್ರವಾಹದ ಹಾವಳಿ ಜಾಸ್ತಿ. ಹೆಚ್ಚು ಕಡಿಮೆ ಮಳೆಗಾಲದಲ್ಲಿ ಪ್ರವಾಹದಿಂದ ಭೀಕರ ಕಷ್ಟನಷ್ಟಗಳನ್ನು ಅನುಭವಿಸುವು ದನ್ನು ಕುರಿತು ದಿನ ಪತ್ರಿಕೆಯಲ್ಲಿ ಓದುತ್ತಲೇ ಇರುತ್ತೇವೆ.

ಭೂಕಂಪದ ಕಾರದಿಂದಾಗಿ, ಅಲ್ಲಿ ಕಟ್ಟುವ ಮನೆಗಳಿಗೆ ಸಿಮೆಂಟು ಗಾರೆ ಗಚ್ಚುಗಳನ್ನು ಉಪಯೋಗಿಸುವುದಿಲ್ಲ. ಹೇರಳವಾಗಿ ಬೊಂಬು ಬೆಳೆಯುವ ಪ್ರದೇಶವಾದುದರಿಂದ, ಬೊಂಬುಗಳನ್ನು ಸೀಳಿ, ತಡಿಕೆಯ ಗೋಡೆಯನ್ನು ಕಟ್ಟಿ ಅದರ ಮೇಲೆ ಮಣ್ಣು ಕಲೆಸಿ ಮೆತ್ತಿ ನಂತರ ಸುಣ್ಣ ಬಣ್ಣ ಬೆಳೆಯುತ್ತಾರೆ. ಕಾಂಕ್ರೀಟ್ ಮನೆಗಳು ಕುಸಿದಾಗ ಆಗುವ ಅಪಾಯ ಜಾಸ್ತಿ. ಅಲ್ಲದೇ ಅಪಾರ ನಷ್ಟ. ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮನೆ ಕಟ್ಟುತ್ತಾರೆ. ಮೇಲ್ಛಾವಣಿಯನ್ನು ಕೂಡಾ ತಡಿಕೆಗಳಿಂದ ಹೊದಿಸಿ, ಮೇಲೆ ಗರಿಗಳನ್ನು ಹೊದೆಸುತ್ತಾರೆ.

ಬೊಂಬು ಅಲ್ಲಿಯ ಹೇರಳವಾದ ಸಮೃದ್ಧವಾದ ಆಸ್ತಿ. ಅದನ್ನು

ಹದಗೊಳಿಸಿ, ಬೆತ್ತದ ಅನೇಕ ಸಾಮಾನುಗಳನ್ನು ಹೆಣೆಯುತ್ತಾರೆ. ಕುರ್ಚಿಗಳು, ಸೋಫಾ ಸೆಟ್ಟುಗಳು, ಟಿಪಾಯ್‌ಗಳು, ಆಸನಗಳು(ಮೋಡ) ಬುಟ್ಟಿಗಳನ್ನು ಕುಶಲತೆಯಿಂದ ಹೆಣೆದು ಮಾರುತ್ತಾರೆ. ಇದೂ ಅಲ್ಲಿಯ ಜನಾಂಗದವರ ಮುಖ್ಯವಾದ ಉದ್ಯೋಗಗಳಲ್ಲಿ ಒಂದು.

ಹಾಗೆ, ಸೆಣಬಿನ ಚೀಲ, ಹಗ್ಗ ಇತ್ಯಾದಿಗಳ ಕಸುಬಿನಲ್ಲಿವೆ. ನದೀ ಪ್ರದೇಶದಲ್ಲಿ ಬೆಳೆಯುವ ಜೊಂಡು ಹುಲ್ಲಿನಂತಹ ವಸ್ತುವನ್ನು ಉಪಯೋಗಿಸಿ ಸುಂದರವಾದ ಚೀಲಗಳನ್ನು, ಬುಟ್ಟಿಗಳನ್ನು ಹೆಣೆಯುತ್ತಾರೆ. ಆದರೆ ಇದರ ಬೆಲೆ, ಕಡಿಮೆ. ಬೆತ್ತದ ವಸ್ತುಗಳ ಬೆಲೆ ದುಬಾರಿ.

೮. ಕಾಜೀರಂಗ ಮೃಗಾಲಯ

ಕಾಜೀರಂಗಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಸಣ್ಣಪುಟ್ಟ ತೊರೆಗಳು, ಜಲಪಾತಗಳು ಸರ್ವಸಾಮಾನ್ಯವಾಗಿ ಕಾಣ ಬರುತ್ತವೆ ಅವುಗಳ ಸೊಬಗನ್ನು ಅಲ್ಲಿ ನೋಡಿಯೇ ತಿಳಿಯಬೇಕು.

೯. ಬಿಹು ಸಂಭ್ರಮ

ಬಿಹು ಹಬ್ಬವನ್ನು ವರ್ಷದ ನಾಲ್ಕು ಋತುಗಳಲ್ಲೂ ಆಚರಿಸುತ್ತಾರೆ. ಅದರಲ್ಲಿ ಮುಖ್ಯವಾದುದು ರಂಗೀಲಿಬಿಹು. ಮಾಘ್‌ಬಿಹು. ರಂಗೀಲಿಬಿಹು ಹೊಸವರ್ಷ ಪ್ರಾರಂಭದ ಹಬ್ಬ. ಪ್ರತಿವರ್ಷದ ಏಪ್ರಿಲ್ ೧೪ರಂದು ಆಚರಿಸುತ್ತಾರೆ. ಇದು ವೈಶಾಖಿಯಂತೆ.

ಬಿಹು ಹಬ್ಬದಲ್ಲಿ ಹುಡುಗ ಹುಡುಗಿಯರಿಗೆ ಸತಂತ್ರ. ಸ್ವಚ್ಛಂದವಾಗಿ ವಿಹರಿಸುತ್ತಾರೆ. ನಂತರ ಮದುವೆಯಾಗುತ್ತಾರೆ. ಬಿಹೂನ ಕುರಿತಂತೆ ಅನೇಕ ಲೋಕಗೀತೆಗಳು, ಲಾವಣಿಗಳು ಎಲ್ಲರ ಬಾಯಲ್ಲಿ ಆಡುತ್ತಿರುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಆರ್ಕಸ್ಟ್ರಾದವರನ್ನು ಕರೆಸುತ್ತಾರೆ. ಹೊಸ ಬಟ್ಟೆಗಳನ್ನು ಉಟ್ಟು, ಸಾಮೂಹಿಕವಾಗಿ ಹಬ್ಬವನ್ನು ಆಚರಿಸುತ್ತಾರೆ.

೧೦. ದುರ್ಗಾಷ್ಟಮಿಯ ಸಡಗರ

ಬೆಂಗಾಲಿಗಳಂತೆ ಅಸ್ಸಾಮಿಗಳು ದುರ್ಗಾಪೂಜೆಯನ್ನು ಆಚರಿಸುತ್ತಾರೆ. ಸಾಮೂಹಿಕವಾಗಿ, ಸಂಘ ಸಂಸ್ಥೆಗಳು ಮಾಡುತ್ತಾರೆ. ಕಾಳಿಪೂಜೆಯ ತನಕವೂ ಇರುವ ಪೆಂಜಾಲ್‌ನಲ್ಲಿ ಹುಣ್ಣಿಮೆಯಂದು ಆಚರಿಸುವ ಲಕ್ಷ್ಮಿ ಪೂಜೆಯ ದಿನದವರೆಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತಾರೆ.

ಆಫೀಸರ್‌ಗಳ ಮನೆ ಮನೆಗೂ ಬಂದು ಆಹ್ವಾನಿಸುತ್ತಿದ್ದರು.

೧೧. ದಿಬ್ರೂಗರ್.

ದಿಬ್ರೂಗರ್‌ನಲ್ಲಿ ಒಂದು ಐತಿಹ್ಯವಿದೆ. ಪರಶುರಾಮ ತನ್ನ ತಾಯಿಯನ್ನು ಕೊಂದ ಪಾಪವನ್ನು ಕಳೆದುಕೊಳ್ಳಲೆಂದು ಬಂದು, ರಕ್ತಸಿಕ್ತವಾದ ಕೊಡಲಿಯನ್ನು ತೊಳೆದನೆಂದು ಹೇಳುವ ಒಂದು ಬ್ರಹ್ಮ ಕುಂಡವಿದೆ.

೧೨. ಷಿಲ್ಲಾಂಗ್

ಅಸ್ಸಾಂ ವಿಭಾಗವಾದ ಮೇಲೆ, ಈಗ ಮೇಘಾಲಯದ ರಾಜಧಾನಿ ಶಿಲ್ಲಾಂಗ್. ಅಲ್ಲಿಯ ನಿವಾಸಿಗಳಲ್ಲಿ ಕ್ರಿಶ್ಚಿಯನ್ನರೇ ಹೆಚ್ಚು. ಹಾಗಾಗಿ, ಷಿಲ್ಲಾಂಗ್ ನಲ್ಲಿ ಅನೇಕ ಪುರಾತನ ಚರ್ಚುಗಳಿವೆ.

ಸಮತಟ್ಟಾದ ಪ್ರದೇಶವೇ ಅಲ್ಲ. ನೇರವಾದ ರಸ್ತೆಗಳಿಲ್ಲ. ತಗ್ಗು ದಿಣ್ಣೆಗಳಿಂದ ಕೂಡಿದ ಪ್ರದೇಶದಲ್ಲಿ ಸದಾ ಜಿನುಗುವ ಮಳೆ.. ಆದರೂ ಪ್ರಕೃತಿ ಸೌಂದರ್ಯ ರಮಣೀಯ. ಒಂದು ಕಡೆ ಪಾತಾಳವನ್ನು ತೋರಿಸುವ ಕಣಿವೆ, ಮತ್ತೊಂದು ಕಡೆ ಮುಗಿಲನ್ನೇ ಚುಂಬಿಸುವ ಪರ್ವತ. ಈ ಮಧ್ಯೆ ಮಾಲೆ ಮಾಲೆಯಾಗಿ ಹರಿದು ಹೊಗುವ ಮೇಘಮಾಲೆಗಳು. ನೋಡುತ್ತಾ ಇದ್ದಂತೆ ಕಾಳಿದಾಸನ ಮೇಘ ಸಂದೇಶ ಕಾವ್ಯ ನೆನಪಿಗೆ ಬರುತ್ತದೆ.

ಬ್ರಿಟಿಷರು ರಾಜ್ಯವಾಳುತ್ತಿದ್ದಾಗ ಶಿಲ್ಲಾಂಗ್‌ನ್ನು "Scotland of

the East" ಎಂದು ಹೊಗಳಿದ್ದಾರೆ.

೧೩. ಸೂರ್ಯಗ್ರಹಣ

ಗ್ರಹಣವನ್ನು ಕುರಿತಂತೆ, ಇಲ್ಲಿ ನಾಲ್ಕು ಸಾಲುಗಳನ್ನು ಬರೆಯಲು ಬಯಸುತ್ತೇವೆ.

ಚಂದ್ರ ಭೂಮಿಯ ಸುತ್ತುವಾಗ,
ಭೂಮಿ ಸೂರ್ಯನ ಸುತ್ತುವಾಗ,
ಭೂಮಿ ಸೂರ್ಯರ ನಡುವೆ ಚಂದಿರ ಬರಲು
ಆ ದಿನ ಅಮಾವಾಸ್ಯೆಯು ಆಗಿರಲು
ಜರುಗುವುದು ಸೂರ್ಯಗ್ರಹಣ ಅಂದು.
ಗ್ರಹಣಗಳ ಪಟ್ಟಿಗೆ ಸೇರಿತು ಮತ್ತೊಂದು
ನಭೋಮಂಡಲದಿ ನಡೆಯುವ ಈ ಚಮತ್ಕಾರ
ಮಾನವ ಜೀವನಕೆ ವಿಶ್ವದ ಸಾಕ್ಷಾತ್ಕಾರ
ಸೂರ್ಯನಿಲ್ಲದೇ ಈ ಜಗಕ್ಕೆ ಹಗಲಿಲ್ಲ
ಚಂದಿರನಿಲ್ಲದೇ ರಾತ್ರಿಗೆ ಬೆಳದಿಂಗಳಿಲ್ಲ.
ಹಗಲು ರಾತ್ರಿಯ ನಡುವಿನ ಗ್ರಹಣ
ನಿಂತು ತೊರುತ್ತದೆ ಜಗಕೆ ಕಾಲದ ಪಯಣ
ಓಡುತ್ತಿದೆ ಓಡುತ್ತಿದೆ ಓಡುತ್ತಿದೆ ಕಾಲ
ಓಡು ನೀ ಅದರೊಂದಿಗೆ, ಅದೇ ಎಲ್ಲಕೆ ಮೂಲ.

ಕಾಶ್ಮೀರದಲ್ಲಿ ಚಿನ್ನದ ಬಳೆಯಂತೆ ಸೂರ್ಯ ಫಳಫಳನೆ ಹೊಳೆಯುವಾಗ ಭಾರತ ಮಾತೆಯ ಮೆರುಗಿಗೆ ಮತ್ತೊಂದು ಆಭರಣ, ಈ ಸೂರ್ಯ ಗ್ರಹಣ.

೧೪. ಅಸ್ಸಾಂನ ಸೋದರಿಯರ ಸಾಲಿನಲ್ಲಿ ಮಣಿಪುರವಿದೆ. ಮಣಿಪುರವನ್ನು ಸ್ತ್ರೀ ರಾಜ್ಯವೆನ್ನುತ್ತಿದ್ದರು. ಮಣಿಪುರದ ರಾಜಕುಮಾರಿ ಚಿತ್ರಾಂಗದೆ,

ಅರ್ಜುನನ ಉಪ ಪತ್ನಿಯರಲ್ಲಿ ಒಬ್ಬಳು. ಬಭ್ರುವಾಹನನ ತಾಯಿಯಾಗಿದ್ದ ವಳು. ಉಲೂಪಿ, ಚಿತ್ರಾಂಗದೆಯರ ನೆನಪು ಬಂದಾಗ, ಮಹಾಭಾರತದ ಕಥೆಯೇ ನಮ್ಮ ಮುಂದೆ ಬಂದು ನಿಲ್ಲುತ್ತದೆ.

8ಕಾಮಾಖ್ಯ ದೇವಸ್ಥಾನ:

ಕಾಮಾಖ್ಯ ಇಲ್ಲಿಯ ಶಕ್ತಿಸ್ಥಾನ ಎಂದೇ ಪ್ರಸಿದ್ಧಿ. ಬೋರ್ಝಾರ್ ಏರ್ ಪೋರ್ಟ್‌ನಿಂದ ಹೊರಟು ಮಲೆಗಾವ್ ದಾಟಿ ಮುಂದೆ ಹೋದರೆ ಪಾಂಡು ಎಂಬ ಸಣ್ಣ ಹಳ್ಳಿ ಸಿಗುತ್ತದೆ. ಇದು ನದಿಯದಡದ ಮೇಲಿರುವ ಹಳ್ಳಿ. ಬ್ರಹ್ಮಪುತ್ರಾ ನದಿಗೆ ಸೇತುವೆ ಕಟ್ಟುವ ಮೊದಲು, ಪಾಂಡು ಸ್ಥಳದಿಂದ ದೋಣಿ ಸಂಚಾರದ ಸೌಲಭ್ಯವಿತ್ತು. ಈ ದಡದಿಂದ ಆ ದಡಕ್ಕೆ ದೋಣಿಗಳಲ್ಲಿ ಪ್ರಯಾಣಿಕರನ್ನು ತಲುಪಿಸುತ್ತಿದ್ದರಂತೆ. ನದೀ ದಡದಲ್ಲಿ ಸಾಕಷ್ಟು ಗುಡಿಸಲು ಗಳಿವೆ. ಅಲ್ಲಿ ವಾಸಿಸುವ ಜನರ ಮುಖ್ಯ ಉದ್ಯೋಗ ಮೀನುಗಾರಿಕೆ. ಅವರು ಗಳು ಪ್ರವಾಹಕ್ಕೆ ಹೆದರುವುದಿಲ್ಲ. ಪ್ರವಾಹ ಬಂದಾಗ ಅತ್ತಿತ್ತ ಕದಲಿರುತ್ತಾರೆ. ನೆರೆ ಇಳಿದಕೂಡಲೇ ಮತ್ತೆ ಮತ್ತೆ ತಮ್ಮ ಮನೆಗಳಿಗೆ ವಾಪಸ್ಸಾಗುತ್ತಾರೆ. ಇದು ಅವರ ಜೀವನದ ಶೈಲಿ.

ಇಲ್ಲಿಂದ ಕೆಲವೇ ಮಿಟರುಗಳ ಬಳಿಕ ಕಾಮಾಖ್ಯ ದೇವಸ್ಥಾನಕ್ಕೆ ಹೋಗುವ ದಾರಿ ಸಿಗುತ್ತದೆ. ಕಾಮಾಕ್ಷಿಯನ್ನು ಕಾಮಾಖ್ಯ ಎನ್ನುತ್ತಾರೆ. ಇಲ್ಲಿ ಸತಿಯ ಎದೆ ಭಾಗ ಬಿದ್ದಿದೆ ಎನ್ನುತ್ತಾರೆ. ಶಿವ, ಸತಿಯಾದ ತನ್ನ ಪತ್ನಿ ಪಾರ್ವತಿಯ ದೇಹವನ್ನು ಕೋಪದಿಂದ ಹೊತ್ತುಕೊಂಡು ತಿರುಗುತ್ತಾ ಒಂದೊಂದೇ ಭಾಗವನ್ನು ಕತ್ತರಿಸುತ್ತಿರುವಾಗ ಕತ್ತಿನ ಕೆಳಗಿನ ಭಾಗ, ಇಲ್ಲಿ ಬಿದ್ದಿತೆಂದು ಪುರಾಣ ಹೇಳುತ್ತದಂತೆ. ದೇವಿಯ ಖಂಡವಾದ ಈ ಭಾಗಕ್ಕೆ ಮಂದಿರವನ್ನು ಕಟ್ಟಿ, ಪೂಜಿಸುತ್ತಾರೆ. ಇಲ್ಲಿಯ ವಿಶೇಷ ಪೂಜೆ ಬಲಿ ಕೊಡು ವುದು. ಕುರಿ ಕೊಳಿಗಳನ್ನು ಪಾರಿವಾಳಗಳನ್ನು ಬಲಿ ಕೊಟ್ಟು ದೇವಿಯನ್ನು ಸಂತುಷ್ಟಗೊಳಿಸುತ್ತಾರೆ. ಸಮೀಪದಲ್ಲೇ ಬ್ರಹ್ಮಪುತ್ರಾ ನದಿ ಹರಿಯುತ್ತದೆ. ಮೊದಲ ಪೂಜೆಯನ್ನು ಪುಷ್ಕರಿಣಿಯಲ್ಲಿ ಮುಗಿಸಿ, ದೇವಸ್ಥಾನಕ್ಕೆ ಹೋಗ

ಬೇಕು. ಆದರೆ ಪಂಡಾಗಳ ಬೇಡಿಕೆ ಬಹಳ, ಕಾಲುಕಾಲಿಗೆ ಸಿಕ್ಕಿಬಿದ್ದು ಹಣವನ್ನು ವಸೂಲು ಮಾಡುತ್ತಾರೆ. ಅಲ್ಲಿಯೂ ರಾಜಕೀಯ. ಹೆಚ್ಚಿಗೆ ಹಣ ಕೊಟ್ಟ ವರಿಗೆ ವಿಶೇಷ ಮಾನ್ಯತೆ. ಉಳಿದವರಿಗೆ, ಉದಾಸೀನದ ಮನೋಭಾವ. ಕ್ಯೂನಲ್ಲಿ ಮುಂದುವರೆದರೆ, ಮುಖ್ಯವಾದ ಜಾಗಕ್ಕೆ ಬರುತ್ತವೆ. ಅಲ್ಲಿ ಒಂದು ಸಣ್ಣ ದೇವಿಯ ಪ್ರತಿಮೆಯನ್ನಿಟ್ಟು ಪುಜೆಸುತ್ತಾರೆ. ನಾವೇ ಕೈಯಾರೆ ಪೂಜೆ ಮಾಡಬಹುದು. ಅಲ್ಲಿ ಬಂಡೆಗಳ ನಡುವೆ ನದಿ ನೀರು ಹರಿದು ಬರುತ್ತದೆ. ಆ ನೀರನ್ನು ನಾವುಗಳೇ ಕೈಯಲ್ಲಿ ತೆಗೆದುಕೊಂಡು, ಪ್ರೋಕ್ಷಿಸಿಕೊಳ್ಳಬಹುದು.

ಪ್ರಾಂಗಣದಲ್ಲೆಲ್ಲಾ ಹರಡಿ ಬಿದ್ದಿರುವ ಪಾರಿವಾಳಗಳ ರೆಕ್ಕೆ ಪುಕ್ಕ ಹೆದರಿಸುತ್ತದೆ. ವಧಾ ಸ್ಥಾನಕ್ಕೆ ಬಂದ ಅನುಭವವಾಗುತ್ತದೆ.

ಅಲ್ಲಿ ಸುತ್ತ ಮುತ್ತ ಅನೇಕ ಮನೆಗಳಿವೆ. ಪಂಡಾಗಳು, ಸಣ್ಣ ಪುಟ್ಟ ವ್ಯಾಪಾರದವರು ಅಲ್ಲಿಯೇ ವಾಸವಾಗಿದ್ದಾರೆ. ಅಲ್ಲಿ ನಿಂತು ನೋಡಿದರೆ ಬ್ರಹ್ಮಪುತ್ರಾ ನದಿಯ ಮದ್ಯಭಾಗದಲ್ಲಿರುವ ದ್ವೀಪದಲ್ಲಿ ಉಮಾನಂದ ದೇವಸ್ಥಾನವಿದೆ. ಅಲ್ಲಿಗೆ ಬಂಡೆಗಳ ಮೇಲೆ ಕಾಲಿಟ್ಟು ನಡೆದು ಹೋಗಬಹುದು. ಅಲ್ಲಿ ಕುಳಿತು, ನದಿಯ ಸೊಬಗನ್ನು ವೀಕ್ಷಿಸುತ್ತಿದ್ದರೆ, ಎಲ್ಲಿಗೂ ಎದ್ದು ಹೋಗುವ ಮನಸ್ಸೇ ಆಗುವುದಿಲ್ಲ. ನಮ್ಮ ಮಾವ ಅಂತೂ, ಪೂರಾ ಮನ ಸೋತಿದ್ದರು. ಅಲ್ಲಿದ್ದ ಐವತ್ತು ಅರವತ್ತು ಮೆಟ್ಟಿಲುಗಳನ್ನು ಹತ್ತಿ ಹೋದರೆ, ಭುವನೇಶ್ವರಿಯ ದೇವಾಲಯ ಸಿಗುತ್ತದೆ. ಇಲ್ಲಿಗೆ ಹೆಚ್ಚಿಗೆ ಜನರು ಬರು ವುದಿಲ್ಲ. ದೇವಿಗೆ ಹೆಚ್ಚು ಪೂಜೆ ಪುರಸ್ಕಾರಗಳಲ್ಲ. ಇಲ್ಲಿ ದೇವಿಯ ಹಣೆಯ ಭಾಗ ಕತ್ತರಿಸಲ್ಪಟ್ಟು ಬಿದ್ದಿದೆ ಎಂದು ಹೇಳುತ್ತಾರೆ. ಅದನ್ನು ಅವರ "ಪಾಲ" ಎಂದು ಹೇಳುತ್ತಾರೆ.

ಕಾಮಾಖ್ಯದಲ್ಲಿ ಬಂಡೆಯ ಉಬ್ಬು ತಗ್ಗು ತೋರಿಸಿ, ದೇವಿಯ ಎದೆಯ ಭಾಗ ಎಂದು ಹೇಳುವಂತೆ, ಇಲ್ಲಿ ಬಂಡೆಯ ಅಗಲವಾದ ಭಾಗ ವನ್ನು ತೋರಿಸಿ, ದೇವಿಯ ಹಣೆ(ಫಾಲ) ಎನ್ನುತ್ತಾರೆ.

ಎಲ್ಲಿ ನೋಡಿದರೂ, ಕುಂಕುಮ ಸಿಂಧೂರದ ಬಣ್ಣವೇ.. ಚೆಂಡು ಹೂವಿನ ಬಣ್ಣದ ಹೂವಿನ ಹಾರಗಳು.. ಅಲ್ಲಿಗೆ ಹೋದವರಿಗೆಲ್ಲಾ ಪೂಜೆಗೆ ತಗೊಂಡು ಹೋಗುವುದು, ಹಳದಿ ಬಣ್ಣದ ಹೂವಿನ ಹಾರಗಳನ್ನೇ. ಅದನ್ನೇ

ಪಂಡಾಗಳು, ಗಂಡಸರ ಕೊರಳಿಗೆ ಹಾಕಿ, ಹಣೆ ತುಂಬಾ ಸಿಂಧೂರದ ತಿಲಕ ಬಳಿದು ಕಳಿಸುತ್ತಾರೆ. ನಾಲ್ಕು ದಿನ ಸ್ನಾನ ಮಾಡಿದರೂ ಆ ಸಿಂದೂರದ ಬಣ್ಣ ಹೋಗುವುದಿಲ್ಲ. ದೂರದಿಂದ ನೋಡಿದರೇ ನೋಡಿದವರಿಗೆ ತಿಳಿಯ ಬೇಕು... ಓ ಇವರು ಕಾಮಾಖ್ಯ ದೇವಸ್ತಾನಕ್ಕೆ ಹೋಗಿ ಬಂದಿದಾರೆ ಅಂತ.

"ತುಮ ಕಾಮಾಖ್ಯ ಗಯಿಲೇ" ಎಂದು ಅಸ್ಸಾಮಿ ಭಾಷೆಯಲ್ಲಿ ಕೇಳು ತ್ತಾರೆ. ಅಸ್ಸಾಮಿ ಭಾಷೆಯಲ್ಲಿ ಹಾಗೇ ಬೆಂಗಾಲಿ ಭಾಷೆಯಲ್ಲಿ ತಿನ್ನುವುದಕ್ಕೆ ಕುಡಿಯುವುದಕ್ಕೆ ಒಂದೇ ಪದ... "ಅಮೀ ಖಾನಾ ಖಾಬೇ.." ಹಾಗೇ "ಅಮಿ ಪಾನೀ, ಖಾಬೆ." ಅಂತ..

ಹಾಗೇ ನಮಗೆ ನೀರು ಕುಡಿಯುವ ಸ್ಥಿತಿ ಒದಗಿತು..

ಹಳದಿ ಹೂವಿನ ಹಾರ ಹಾಕಿಕೊಂಡು ಮೆಟ್ಟಿಲು ಇಳಿಯುತ್ತಿದ್ದ ನಮ್ಮವರನ್ನು ನೋಡಿ, ಒಂದು ಹೋರಿ, ದುಡು ದುಡು ಇವರ ಬಳಿಗೆ ಬಂತು. ಇವರು ಹೆದರಿ ಓಡ ತೊಡಗಿದರು. ಇವರ ಹಿಂದೆ ಹಿಂದೆ ಅದೂ ಓಡಿ ಬಂತು. ಎದುರಿಗೆ ಬರುತ್ತಿದ್ದ ಒಂದಿಬ್ಬರು ಕೂಗಿದರು, "ಆಪನಾ ಗಲೇ ಸೇ ಪೂಲ್ ಕಾ ಮಾಲಾ ಉತಾರಕೆ ಪೇಂಕ್ ದೋ.." ನಮ್ಮವರಿಗೆ ಹಿಂದಿ ಬರುತ್ತಿರಲಿಲ್ಲ. ನಾನು ಕನ್ನಡದಲ್ಲಿ ಹೇಳಿದೆ. ಅಷ್ಟರಲ್ಲಿ ಆ ಹೋರಿ ಇವರನ್ನು ಸಮೀಪಿಸಿತ್ತು. ಇವರು ಆ ಹಳದೀ ಹೂವಿನ ಹಾರವನ್ನು ತೆಗೆ ಯುವ ಮೊದಲೇ ತಾನೇ ಬಾಯಿ ಹಾಕಿ ಕಿತ್ತುಕೊಂಡು ತಿನ್ನತೊಡಗಿತು..ಆ ಬಸವ ಹಾರ ತಿನ್ನತೊಡಗಿದರೆ, ನಮಗೆ ನೀರು ಕುಡಿಯುವಷ್ಟು ಬಾಯಿ, ಗಂಟಲು ಒಣಗಿತ್ತು.

ಆ ನಂತರ, ಮತ್ತೆರಡು ಬಾರಿ, ಕಾಮಾಖ್ಯಕ್ಕೆ ಹೋದಾಗ, ಹಾರವನ್ನು ಹೋರಿ ಅಪಹರಿಸುವ ಮೊದಲೇ ನಾವೇ ಅದಕ್ಕೆ ತಿನ್ನಲು ಕೊಟ್ಟು ಬಿಟ್ಟೆವು.

ಗೌಹತಿಯಿಂದ ಬೆಂಗಳೂರಿಗೆ ಬಂದ ನಂತರವೂ ಎಷ್ಟೋ ದಿನಗಳ ವರೆಗೆ, ನನಗಂತೂ ಅಲ್ಲಿಯದೇ ಧ್ಯಾನ. ಅಲ್ಲಿ ಹೀಗಿತ್ತು. ಅಲ್ಲಿ ಹಾಗಿತ್ತು ಅಂತ ಪ್ರತಿಯೊಂದು ಮಾತಿನಲ್ಲು ನೆನೆಸಿಕೊಳ್ಳುವಾಗ, ಕಲಿತಿದ್ದ ಅಲ್ಪ ಸ್ವಲ್ಪ ಅಸಾಮಿ ಭಾಷೆಯೂ ಮರೆತು ಹೋಗುವಂತಾಯ್ತು.

ನನ್ನ ಮಗಳು ಹುಟ್ಟಿದ ಕೆಲವೇ ದಿನಗಳ ನಂತರ ನಮ್ಮ ಅಕ್ಕನಿಗೆ

ಎರಡನೇ ಮಗು ಹುಟ್ಟಿತು. ನನ್ನ ಮಗಳನ್ನು ಎಲ್ಲರೂ ಅಚ್ಯಾಮಿ ಎಂದೇ ಕರೆಯುತ್ತಿದ್ದುದರಿಂದ, ನನ್ನ ಅಕ್ಕನ ಹಿರಿಯ ಮಗಳು ಎರಡು ವರ್ಷದವಳು, ತನ್ನ ತಂಗಿಯನ್ನು ಅಚ್ಯಾಮಿ, ಆಚೂ, ಆಚೀ, ಎಂದು ಮುದ್ದಾಗಿ ಕರೆಯುತ್ತಿದ್ದಳು. ಚಿಕ್ಕ ಮಗುವನ್ನು ಹಾಗೇ ಕರೆಯ ಬೇಕೆಂದು ಕೊಂಡಿದ್ದಳು. ಕ್ರಮೇಣ ಅವಳಿಗೆ ಅದೇ ಅಡ್ಡ ಹೆಸರು ಉಳಿದು ಹೋಯಿತು. ಆಚಿ.. ಯಾಗಿಯೇ ಉಳಿದಳು.


ಅಸ್ಸಾಂನಲ್ಲಿದ್ದು ಬಂದವರು ನಾವು. ಆದರೆ ನನ್ನ ಅಕ್ಕನ ಮಗಳು ಎಲ್ಲರ ಬಾಯಿಯಲ್ಲಿಯೂ ಆಚಿಯಾಗಿ ಉಳಿದಳು. ಆದರೆ ಆ ಹೆಸರು ಆ ಮಗುವಿಗೆ ಹೇಗೆ ಅಂಟಿಕೊಂಡಿತೆಂದು ಯಾರಾದರೂ ಕೇಳಿದರೆ. ಎಲ್ಲಾ ಕತೆಯನ್ನು ಹೇಳಬೇಕಾಗುತ್ತಿತ್ತು.. ನಮ್ಮ ಅಸ್ಸಾಮಿನ ಪ್ರವಾಸದಿಂದ ನನ್ನ ಅಕ್ಕನ ಮಗಳಿಗೆ. ಅಡ್ಡ ಹೆಸರು ಬಂತು.

ದೀಪಾವಳಿ ಹಬ್ಬ

ಹೊಸ ಊರು, ಹೊಸ ಜನರ ನಡುವೆ ಮೊದಲ ದೀಪಾವಳಿ ಹಬ್ಬ ಬಂತು. ಬಿಜಾರಿನಲ್ಲಿ ಸಿಕ್ಕುವ ಮಣ್ಣಿನ ಹಣತೆಗಳನ್ನು ತಂದು, ಅಲ್ಲಿ ಸಿಗುತ್ತಿದ್ದ ಸಾಸಿವೆ ಎಣ್ಣೆಯನ್ನೇ ಹಾಕಿ, ಮನೆಯ ಮೂರು ಸುತ್ತು ಸಾಲಾಗಿ ದೀಪಗಳನ್ನು ಹಚ್ಚಿದೆವು. ಕೆಲವೇ ನಿಮಿಷಗಳಲ್ಲಿ ದೀಪಗಳು ನಂದಿ ಹೋಗಿದ್ದವು. ಮಳೆ ಇಲ್ಲ. ಗಾಳಿ ಇಲ್ಲ ದೀಪ ನಂದಲು ಕಾರಣವೇನು ಅಂತ ನೋಡಿದರೆ, ಒಂದು ಹಣತೆಯಲ್ಲಾದರೂ ಎಣ್ಣೆ ಇಲ್ಲ.

ಈಗ ಸುಮಾರು ಇಪ್ಪತ್ತು ವರ್ಷಗಳ ನಂತರ, ನಾನು ಗೌಹಾತಿಯಲ್ಲಿ ಕಳೆದ ದಿನಗಳ ಅನುಭವಗಳನ್ನು ಹಂಚಿಕೊಳ್ಳುತ್ತಿದೇನೆ. ಓದಿ., ಆನಂದಿಸುವುದಾದರೆ, ಅದು ನನ್ನ ಸುಕೃತ.

೦ ೦ ೦ ೦ ೦ ೦



ಕಾಮಾಖ್ಯ ದೇವಾಲಯ



ಗುವಾಹತಿ ಭವ್ಯ ನೋಟ